ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 4 ಬುಧವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 49 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಅರಣ್ಯ ರಾಯಭಾರಿಯಾಗಲು ಮಾಜಿ ಕ್ರಿಕೆಟ್ ತಾರೆ ಅನಿಲ್ ಕುಂಬ್ಳೆ ಸಮ್ಮತಿ

ಬೆಂಗಳೂರು, ಜೂ. 3(ಕೆಎಂಶಿ)–ವನ್ಯಜೀವಿ, ಅರಣ್ಯ ಸಂರಕ್ಷಣೆ ಮತ್ತು ಸಂವರ್ಧನೆಗೆ ಮಾಜಿ ಟೆಸ್ಟ್ ಕ್ರಿಕೆಟ್ ಪಟು ಅನಿಲ್ ಕುಂಬ್ಳೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.



ತಮ್ಮನ್ನು ಭೇಟಿ ಮಾಡಿದ ಅನಿಲ್ ಕುಂಬ್ಳೆ ಜೊತೆ ಸಮಾಲೋಚನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನಿಲ್ ಕುಂಬ್ಳೆ ಯಾವುದೇ ಸಂಭಾವನೆ ಇಲ್ಲದೆ ಅರಣ್ಯ, ವನ್ಯಜೀವಿ ರಾಯಭಾರಿ ಆಗಲು ಸಮ್ಮತಿಸಿದ್ದಾರೆ, ಇದು ಅವರ ಪರಿಸರ ಕಾಳಜಿ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ ಎಂದರು. ಈ ಹಿಂದೆ ಕರ್ನಾಟಕ ವನ್ಯಜೀವಿ ಮಂಡಳಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅನುಭವವೂ ಅವರಿಗಿದೆ, ಕುಂಬ್ಳೆ ರಾಯಭಾರಿ ಆಗುತ್ತಿರುವುದು ಅರಣ್ಯ ಸಂರಕ್ಷಣೆ ಮತ್ತು ಅರಣ್ಯ ಸಂವರ್ಧನೆಗೆ ಬಲ ನೀಡಲಿದೆ ಎಂದರು.

ಮಾಜಿ ಕ್ರಿಕೆಟ್ ಆಟಗಾರ ಅನಿಲ್ ಕುಂಬ್ಳೆ ಮಾತನಾಡಿ, ತಮ್ಮನ್ನು ಅರಣ್ಯ, ವನ್ಯಜೀವಿ ರಾಯಭಾರಿಯಾಗಿ ನೇಮಕ ಮಾಡಲು ಸರ್ಕಾರ ನಿರ್ಧರಿಸಿರುವುದಕ್ಕೆ ಧನ್ಯವಾದ ಅರ್ಪಿಸುವುದಾಗಿಯೂ ಇಲಾಖೆ ಜೊತೆಗೂಡಿ ಶ್ರಮಿಸುವುದಾಗಿ ತಿಳಿಸಿದರು.

ಡಾ.ಅಶ್ವಥ್‌ನಾರಾಯಣ್ ಬೇನಾಮಿ ಕಂಪನಿಗೆ ಸ್ಮಾರ್ಟ್ ಮೀಟರ್ ಅಳವಡಿಕೆಯ ಟೆಂಡರ್ ಸಿಕ್ಕಿಲ್ಲ

ಹಾಗಾಗಿ ರೌದ್ರವತಾರ ತಾಳಿರುವ ಮಾಜಿ ಡಿಸಿಎಂ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ

- ಒಂದು ಮೀಟರ್‌ಗೆ 4,988 ರೂಪಾಯಿ
- ವರ್ಷಕ್ಕೆ 75 ರೂಪಾಯಿ ನಿರ್ವಹಣೆ
- ಸ್ಮಾರ್ಟ್ ಮೀಟರ್‌ನಲ್ಲಿ ಹಗರಣ ನಡೆದಿಲ್ಲ
- ರಾಡಿ ಎಬ್ಬಿಸಿ ಬಿಜೆಪಿಯಿಂದ ಬರೀ ಗೊಂದಲ

ಮೈಸೂರು, ಜೂ.3(ಬಿಎಲ್‌ಯು)– ತಾವು ಬೇನಾಮಿಯಾಗಿ ನಡೆಸುತ್ತಿರುವ ಸಹ್ಯಾದ್ರಿ ಎಲೆಕ್ಟ್ರಿಕಲ್ಸ್‌ಗೆ ಸ್ಮಾರ್ಟ್ ಮೀಟರ್ ಅಳವಡಿಸುವ ಗುತ್ತಿಗೆ ದೊರೆಯದ ಕಾರಣ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಕೆರಳಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದ್ದಾರೆ.



ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವ ಕಾರಣ ಬಿಜೆಪಿಯವರು ಸುಖಾಸುಮ್ಮನೆ ಆರೋಪ ಮಾಡಿ, ರಾಡಿ ಎಬ್ಬಿಸುತ್ತಿದ್ದಾರೆ ಎಂದು ಲಕ್ಷ್ಮಣ್ ದೂರಿದರು.

ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ಕೇಂದ್ರದ ಬಿಜೆಪಿ ಸರ್ಕಾರವೇ ಆದೇಶ ನೀಡಿದೆ. ಮೊನ್ನೆ ಬೆಂಗಳೂರಿಗೆ ಭೇಟಿ ನೀಡಿದ್ದ ಕೇಂದ್ರ ಇಂಧನ ಸಚಿವ ಮನೋಹರ್ ಲಾಲ್ ಖಟ್ಟರ್ ಮೂರು ತಿಂಗಳ ಗಡುವು ನೀಡಿದ್ದಾರೆ. ವಿದ್ಯುತ್ ಸೋರಿಕೆ, ವಿದ್ಯುತ್ ಕಳುವು ತಡೆಯುವ ನಿಟ್ಟಿನಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ. ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರಿಗೆ ಕಡ್ಡಾಯ ಮಾಡಲಾಗಿದೆ. ಉಳಿದವರಿಗೆ ಐಚ್ಛಿಕದ ಅವಕಾಶ ನೀಡಲಾಗಿದೆ. ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ ಮತ್ತು ತೆಲಂಗಾಣ ರಾಜ್ಯ ಹೊರತುಪಡಿಸಿ ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ ಎಂದು ಲಕ್ಷ್ಮಣ್ ತಿಳಿಸಿದರು.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಸ್ಮಾರ್ಟ್ ಮೀಟರ್ ಅಳವಡಿಸಲು ಟೆಂಡರ್ ಕರೆಯಲಾಗಿತ್ತು. ಇದರಲ್ಲಿ 16 ಕಂಪನಿಗಳು ಭಾಗವಹಿಸಿದ್ದವು. ಮೂರು ಕಂಪನಿಯನ್ನು ಪರಿಗಣಿಸಿ ಪರಿಶೀಲನೆ ನಡೆಸಿದಾಗ ಅರ್ಹತೆ ಪಡೆದ ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ಟೆಂಡರ್ ನೀಡಲಾಗಿದೆ. ಇದರಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಒಂದು ಸ್ಮಾರ್ಟ್ ಮೀಟರ್‌ಗೆ 4,988 ರೂಪಾಯಿ ದರ ನಿಗದಿ ಮಾಡಲಾಗಿದೆ. ಇದರ ಜೊತೆಗೆ ನಿರ್ವಹಣೆಗೆ ವರ್ಷಕ್ಕೆ ತಲಾ 75 ರೂಪಾಯಿನಂತೆ ಹತ್ತು ವರ್ಷಕ್ಕೆ ಆಗುವಷ್ಟು ಹಣವನ್ನು ಒಂದೇ ಬಾರಿ ಪಾವತಿಸಿಕೊಳ್ಳಲಾಗುವುದು. ಇಷ್ಟು ಪಾರದರ್ಶಕತೆ ಕಾಪಾಡಿಕೊಂಡಿರುವಾಗ ಅವ್ಯವಹಾರ ನಡೆಯಲು ಹೇಗೆ ಸಾಧ್ಯ ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ಕರ್ನಾಟಕದಲ್ಲಿ 3 ಕೋಟಿ ಮೀಟರ್‌ಗಳಿದ್ದು, ಇದರಲ್ಲಿ ಮೊದಲ ಹಂತದಲ್ಲಿ ಮೂರು ಲಕ್ಷ ಮೀಟರ್‌ಗೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ. ಇದಕ್ಕೆ ಸುಮಾರು 100 ಕೋಟಿ ವೆಚ್ಚವಾಗುತ್ತಿದೆ. ಹೀಗಿರುವಾಗ ಬಿಜೆಪಿಯವರು ಆರೋಪ ಮಾಡಿದಂತೆ ಸಾವಿರಾರು ಕೋಟಿ ಅಕ್ರಮ ಹೇಗೆ ನಡೆಯುತ್ತದೆ ಎಂದು ಮರು ಪ್ರಶ್ನಿಸಿದರು. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯದಲ್ಲಿ ಒಂದು ಸ್ಮಾರ್ಟ್ ಮೀಟರ್‌ಗೆ 6 ರಿಂದ 7 ಸಾವಿರ ರೂಪಾಯಿ ಪಡೆಯಲಾಗಿದೆ. ಕರ್ನಾಟಕದಲ್ಲಿ ಕಡಿಮೆ ಬೆಲೆಗೆ ಸ್ಮಾರ್ಟ್ ಮೀಟರ್ ನೀಡುತ್ತಿದ್ದರೂ ಹಗರಣದ ಆಧಾರರಹಿತ ಆರೋಪ ಹೊರೆಸುತ್ತಿದ್ದಾರೆ ಎಂದರು.

ಆರ್‌ಟಿಎಸ್‌ಎಸ್ ಸ್ಕೀಮ್ ಅಳವಡಿಸಿಕೊಂಡರೆ ಒಂದು ಸ್ಮಾರ್ಟ್ ಮೀಟರ್‌ಗೆ ಕೇಂದ್ರ ಸರ್ಕಾರ 900 ರೂಪಾಯಿ ಸಬ್ಸಿಡಿ ನೀಡುತ್ತದೆ. ಆದರೆ ಇಲ್ಲಿ ಕಾಂಗ್ರೆಸ್ ಸರ್ಕಾರ ಇರುವ ಕಾರಣ ಆರ್‌ಟಿಸಿಸಿ ಸ್ಕೀಂ ನೀಡುತ್ತಿಲ್ಲ. ಇದರಿಂದ ಗ್ರಾಹಕರಿಗೆ 900 ರೂಪಾಯಿ ಹೊರೆಯಾಗುತ್ತಿದೆ ಎಂದು ದೂರಿದರು.

ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ಆಗಬೇಕಾದ ಕೆಲಸಗಳನ್ನು ಮಾಡಿಸಲಿ, ಆ ನಂತರ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕೆ ಮಾಡಲಿ ಎಂದು ಸಲಹೆ ನೀಡಿದರು.

ಮಂಗಳೂರು ಶಾಂತವಾಗಿರಬೇಕಾದರೆ ಇವರನ್ನು ಗಡಿಪಾರು ಮಾಡಿ

"ಕೋಮು ಸಂಘರ್ಷ ನಡೆಯುತ್ತಿರುವ ಮಂಗಳೂರು ಶಾಂತವಾಗಿರಬೇಕಾದರೆ ವಿಜಯೇಂದ್ರ, ಅಶೋಕ್, ಸಿ.ಟಿ.ರವಿ, ಶೋಭಾ ಕರಂದ್ಲಾಜೆ ಸೇರಿದಂತೆ ಹಲವು ಬಿಜೆಪಿ ನಾಯಕರನ್ನು ಮಂಗಳೂರಿನಿಂದ ಗಡಿಪಾರು ಮಾಡಬೇಕು. ಮಂಗಳೂರಿನಲ್ಲಿ ಇವತ್ತಿಗೂ ಹಿಂದೂ ಮುಸ್ಲಿಂರಲ್ಲಿ ಸಹಬಾಳ್ವೆ ಇದೆ. ಯಾರು ಯಾರನ್ನೂ ದ್ವೇಷ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿಲ್ಲ. ಆದರೆ ಬಿಜೆಪಿ ನಾಯಕರು ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಅದರಿಂದ ರಾಜಕೀಯ ಲಾಭ ಮಾಡಿಕೊಳ್ಳುತ್ತಾರೆ. ಮೊದಲು ಬಿಜೆಪಿಯ ಹಿರಿಯ ನಾಯಕರನ್ನು ಗಡಿಪಾರು ಮಾಡಬೇಕು. ಜೊತೆಗೆ ದೇಶದ್ರೋಹಿ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು

–ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ


ಕರಾವಳಿ ಕಾನೂನು–ಸುವ್ಯವಸ್ಥೆ ಸಂಬಂಧ ಸರ್ಕಾರ ಪೊಲೀಸ್ ಗೂಂಡಾಗಿರಿ ನಡೆಸಿದರೆ ಸುಮ್ಮನಿರಲ್ಲ!

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ
- ಸುಹಾಸ್ ಶೆಟ್ಟಿ ಹತ್ಯೆಯಲ್ಲಿ ಮಹಿಳೆಯರೂ ಭಾಗಿ

ಬೆಂಗಳೂರು, ಜೂ. 3(ಕೆಎಂಶಿ)–ದಕ್ಷಿಣ ಕನ್ನಡದ ಕರಾವಳಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ತಿದ್ದಿಕೊಳ್ಳದೆ ಪೊಲೀಸ್ ಗೂಂಡಾಗಿರಿ ನಡೆಸಿದರೆ ಬಿಜೆಪಿ ಸುಮ್ಮನಿರುವುದಿಲ್ಲ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ರಾಷ್ಟ್ರೀಯ ಮುಖಂಡರೊಂದಿಗೆ ಚರ್ಚಿಸಿದ್ದು, ಬಿಜೆಪಿ ಸಂಸದರು, ಶಾಸಕರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಕೆಲವರನ್ನು ಗಡಿಪಾರು ಮಾಡಿರುವುದು ರಾಜಮಹಾರಾಜರ ಕಾಲದ ಪಾಳೇಗಾರಿಕೆ ನೆನಪಿಸುತ್ತದೆ, ಪ್ರಜಾಪ್ರಭುತ್ವ ವ್ಯವಸ್ಥೆ ಹಂಗಿಸುವಂತೆ ಸಿದ್ದರಾಮಯ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ. ಸರ್ಕಾರ ಹಿಂದೂ ಕಾರ್ಯಕರ್ತರನ್ನು ಅಪಮಾನಿಸುವ ಕುತಂತ್ರ ಮಾಡುತ್ತಿದೆ. ಸುಹಾಸ್ ಹತ್ಯೆ ನಡೆದಾಗ ಗೃಹ ಸಚಿವರು ಮೃತನ ಮನೆಗೆ ಹೋಗದಂತೆ ಕೆಲವು ದುಷ್ಟಶಕ್ತಿಗಳು ತಡೆದಿದ್ದವು. ಸುಹಾಸ್ ಶೆಟ್ಟಿ ಹತ್ಯೆಯಲ್ಲಿ ಮಹಿಳೆಯರೂ ಭಾಗಿಯಾಗಿದ್ದ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. 3–4 ಮಹಿಳೆಯರು, ಕೊಲೆಗಡುಕರು ಹಾಗೂ ದೇಶದ್ರೋಹಿಗಳನ್ನು ಕಾರಿನಲ್ಲಿ ಕೂರಿಸಿ, ಪರಾರಿ ಆಗಲು ಸಹಕರಿಸಿದ್ದರು. ಈ ಆರೋಪಿಗಳನ್ನು ಬಂಧಿಸಲಾಗಿದೆಯೇ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಚುನಾಯಿತ ಸರ್ಕಾರ ಇದೆ, ಪೊಲೀಸರು ಕಾನೂನು–ಸುವ್ಯವಸ್ಥೆ ಕಾಪಾಡುತ್ತಿದ್ದಾರೆ ಎಂಬ ನಂಬಿಕೆ ಇಲ್ಲವಾಗಿದೆ. ಸಂಘ ಪರಿವಾರದ ಹಿರಿಯರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.


ವಿಜಯೇಂದ್ರ

ಈ ಮೂಲಕ ಕಾರ್ಯಕರ್ತರನ್ನು ಬೆದರಿಸುವ ಕುತಂತ್ರ ನಡೆಯುತ್ತಿದೆ, ಮಧ್ಯರಾತ್ರಿ ಕಾರ್ಯಕರ್ತರ ಮನೆ ಬಾಗಿಲು ತಟ್ಟಿ ವಿಚಾರಣೆ ನಡೆಸಲಾಗುತ್ತಿದೆ, ಇದೇನು ಪ್ರಜಾಪ್ರಭುತ್ವವೇ ಎಂದರು. ರಾಜ್ಯ ಸರ್ಕಾರ ಹೇಮಾವತಿ ನದಿ ನೀರಿನ ವಿಚಾರದಲ್ಲಿ ಪೊಲೀಸರ ಮೂಲಕ ಗೂಂಡಾಗಿರಿ ನಡೆಸಿ ರೈತರ ಹೋರಾಟ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಯಾರೋ ಒಬ್ಬರೋ, ಇಬ್ಬರೋ ಪೊಲೀಸರ ಮೇಲೆ ಕಲ್ಲು ಹೊಡೆದರೆಂಬ ಕಾರಣಕ್ಕೆ ಬಿಜೆಪಿ ಕಾರ್ಯಕರ್ತರು ಹಾಗೂ ರೈತ ಮುಖಂಡರನ್ನು ಟಾರ್ಗೆಟ್ ಮಾಡಿ, ಬಂಧಿಸುವ ಕುತಂತ್ರ ನಡೆಯುತ್ತಿದ್ದು, ಇಂತಹ ಕೃತ್ಯಗಳಿಂದ ಹೇಮಾವತಿ ನದಿ ನೀರಿನ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ. ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ, ಅಭಿವೃದ್ಧಿಗೆ ಹಣ ನೀಡಲು ಸಾಧ್ಯವಾಗುತ್ತಿಲ್ಲ, ಕಾನೂನು–ಸುವ್ಯವಸ್ಥೆ ಹಾಳಾಗಲು ಸರ್ಕಾರದ ಷಡ್ಯಂತ್ರ ಕಾರಣ, ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹೀಗೆ ಮಾಡುತ್ತಿದೆ ಎಂದರು.

ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ

ಅನುಭವ ಮಂಟಪದ ಮೂಲಕ ಸಮಾಜ ಪರಿವರ್ತನೆ ಮಾಡಿದವರು ಬಸವಣ್ಣ


ಬಸವ ಜಯಂತಿ ಕಾರ್ಯಕ್ರಮದಲ್ಲಿ ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.3(ಜಿಎ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಮತ್ತು ಕಾರ್ಮಿಕ ದಿನಾಚರಣೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಬಸವಣ್ಣ ಅವರು ಸಮಾಜದ ಅಭಿವೃದ್ಧಿಗೆ ಕಾಯಕ ಮಾಡುವವರನ್ನು ಒಗ್ಗೂಡಿಸಿಕೊಂಡು ಅನುಭವ ಮಂಟಪ ಕಟ್ಟಿ ಸಮಾಜಕ್ಕೆ ಸಂದೇಶ ಸಾರಿದರು. ವಚನಗಳ ಮೂಲಕ ಸಮಾಜ ಪರಿವರ್ತನೆ ಮಾಡಿದರು. ಅವುಗಳು ಸರ್ವಕಾಲಿಕ. ವಚನಗಳನ್ನು ಸರಳವಾಗಿ ಕನ್ನಡದಲ್ಲಿ ತಿಳಿಸಿ, ಕನ್ನಡ ಭಾಷೆ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

12ನೇ ಶತಮಾನದಲ್ಲಿ ಘಟಿಸಿದ ಕಲ್ಯಾಣ ಕ್ರಾಂತಿ, ಸಮಾಜ ಸುಧಾರಣೆ, ಭಕ್ತಿ ಭಂಡಾರಿ ಬಸವಣ್ಣನವರ ಸಿದ್ಧಾಂತ, ಶರಣ ಸಾಹಿತ್ಯ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಅದಕ್ಕಾಗಿ ನಾವು ನೀವೆಲ್ಲಾ ಬದ್ಧರಾಗಿರಬೇಕು. ಅದಲ್ಲದೆ ಅದನ್ನು ನಮ್ಮಿಂದಲೇ ಪ್ರಾರಂಭಿಸಬೇಕು ಎಂದರು.

ಕಮಲಹಾಸನ್ ಕೇವಲ ಒಬ್ಬ ನಟ. ಆತನ ಹೇಳಿಕೆಗೆ ಇಷ್ಟು ಪ್ರಾಮುಖ್ಯತೆ ನೀಡುವ ಅವಶ್ಯಕತೆ ಇಲ್ಲ. ಮತ್ತೊಂದೆಡೆ ಕೆಲ ಕನ್ನಡಪರ ಸಂಘಟನೆ ಕ್ಷಮೆ ಕೇಳದಿದ್ದರೆ ಕರ್ನಾಟಕ ಬಂದ್ ಮಾಡುತ್ತೇವೆ ಎಂದು ಹೇಳಿಕೆ ನೀಡುತ್ತಿವೆ. ಆದರೆ, ಕರ್ನಾಟಕ ಬಂದ್‌ನಿಂದ ಕಮಲಹಾಸನ್‌ಗೆ ಏನೂ ಸಮಸ್ಯೆ ಇಲ್ಲ. ಬದಲಾಗಿ ನಮ್ಮ ಜನತೆಗೆ ಸಮಸ್ಯೆ ಆಗಲಿದೆ. ಬಂದ್ ಎಂಬ ವಿಚಾರವೇ ಖಂಡನೀಯ. ಅದರ ಬದಲು ಚಿತ್ರ ಪ್ರದರ್ಶನವನ್ನು ಬಂದ್ ಮಾಡಿ ಎಂದು ತಿಳಿಸಿದರು.

ಉದ್ಯಮಿ ಎ.ಪಿ.ನಾಗೇಶ್ ಮಾತನಾಡಿ, ಪ್ರತಿಭೆಯನ್ನು ಕರಗತ ಮಾಡಿಕೊಂಡವರು ಮುಂಚೂಣಿಯಲ್ಲಿದ್ದರೆ, ತರಬೇತಿ, ಬದ್ಧತೆ, ಧೈರ್ಯ, ಸ್ಥೈರ್ಯದಿಂದ ಕಲೆಯನ್ನು ಕರಗತ ಮಾಡಿಕೊಳ್ಳುವವರೂ ಅದ್ವಿತೀಯ ಸಾಧನೆ ಮಾಡುತ್ತಾರೆ. ಸತತ ಪ್ರಯತ್ನ, ಬದ್ಧತೆ ಇದ್ದಲ್ಲಿ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಗುರುರಾಜ್, ಚಂದ್ರೇಗೌಡ, ರಾಮು, ಎಂ.ಮಹೇಶ್, ಅಯೂಬ್ ಅಹಮದ್, ಲಿಂಗರಾಜು, ನಾಗರತ್ನ, ಮಂಜುಳ, ಶಿವಸ್ವಾಮಿ, ಪ್ರಶಾಂತ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ದಂತ ವೈದ್ಯ ಲೋಕೇಶ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಸಮಾಜ ಸೇವಕ ಮಂಜುನಾಥ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ, ನಾಲಾಬೀದಿ ರವಿ, ಮನೋಹರ್, ಅಭಿಷೇಕ್, ಅವಿನಾಶ್ ಅರ್ಜುನ್ ಇದ್ದರು.

ಮುಕ್ತ ವಿವಿ ನೀಡಿದ್ದ ಗೌರವ ಡಾಕ್ಟರೇಟ್ ಹಿಂದಿರುಗಿಸಿದ ಸಚಿವ ಸತೀಶ್ ಜಾರಕಿಹೊಳಿ

ಬೆಂಗಳೂರು, ಜೂ. 3(ಕೆಎಂಶಿ)– ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ನೀಡಿದ್ದ ಗೌರವ ಡಾಕ್ಟರೇಟ್ ಪದವಿಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಿಂದಿರುಗಿಸಿದ್ದಾರೆ. ಈ ಸಂಬಂಧ ಉಪಕುಲಪತಿಗಳಿಗೆ ಪತ್ರ ಬರೆದಿರುವ ಸಚಿವರು, ತಾವು ಪ್ರೀತಿ ಪೂರ್ವಕವಾಗಿ ವಿಶ್ವವಿದ್ಯಾಲಯ ನೀಡಿದಂತಹ ಗೌರವ ಡಾಕ್ಟರೇಟ್ ಪದವಿ ಹಿಂಪಡೆಯುವಂತೆ ಕೋರುತ್ತೇನೆ. ನನ್ನ ನಿರ್ಧಾರವನ್ನು ಅನ್ಯತಾ ಭಾವಿಸದೆ, ನಾನು ಮನಸೋ ಇಚ್ಛೆಯಿಂದ ಕೈಗೊಂಡಿರುವ ನಿರ್ಧಾರವಾಗಿದ್ದು, ತಾವು ಇದನ್ನು ಸ್ವಾಗತಿಸುವಿರಿ ಎಂದು ಭಾವಿಸುತ್ತೇನೆ. ನೀವು ನನಗೆ ಗೌರವ ಡಾಕ್ಟರೇಟ್ ಪ್ರದಾನಿಸುವ ಮೂಲಕ ಸಮಾಜದಲ್ಲಿ ನನ್ನ ಜವಾಬ್ದಾರಿ ಹೆಚ್ಚಿಸಿದ್ದೀರಿ, ಸಾಮಾಜಿಕ ಸೇವೆಯಲ್ಲಿ ನಾನು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಫಲಗೊಳಿಸುವಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿರುತ್ತೇನೆ. ಅದನ್ನು ಕಾರ್ಯರೂಪಕ್ಕೆ ತರುವಂತಹ ಗುರುತರವಾದ ಹೊಣೆಗಾರಿಕೆ ನನ್ನ ಮೇಲಿದೆ. ಆದ್ದರಿಂದ, ಮಾ.27ರಂದು ವಿವಿ ಗೌರವ ಡಾಕ್ಟರೇಟ್ ಪದವಿ ನೀಡುವುದರ ಮೂಲಕ ಸನ್ಮಾನಿಸಿದ ತಮಗೆ ಹಾಗೂ ವ್ಯವಸ್ಥಾಪಕ ಮಂಡಳಿಗೆ ಆಭಾರಿಯಾಗಿರುತ್ತೇನೆ ಎಂದಿದ್ದಾರೆ.



ತೊಳಸಿ ಜ್ಯುವೆಲ್ಸ್ ಶೋರೂಂನಲ್ಲಿ ಇಟಾಳಸಿ ಲಕ್ಸೆ ಫೆಸ್ಟ್–ಆಭರಣಗಳ ಪ್ರದರ್ಶನ, ಮಾರಾಟ


ಮೈಸೂರಿನ ವಿ.ವಿ. ಮೊಹಲ್ಲಾ, ಟೆಂಪಲ್ ರಸ್ತೆಯಲ್ಲಿರುವ ತೊಳಸಿ ಜ್ಯುವೆಲ್ಸ್ ಶೋ ರೂಂನಲ್ಲಿ ಒಂದು ವಾರ ಕಾಲ ನಡೆಯುತ್ತಿರುವ ಇಟಾಳಸಿ ಲಕ್ಸೆ ಫೆಸ್ಟ್–ಆಭರಣಗಳ ಪ್ರದರ್ಶನ ಮತ್ತು ಮಾರಾಟವನ್ನು ಮಹಿಳಾ ಉದ್ಯಮಿ ಶ್ರೀಮತಿ ಪ್ರತಿಭಾ ನಾಯಕ್ ಉದ್ಘಾಟಿಸಿದರು. ಹರ್ಷ ತೊಳಸಿ, ಮನೋಹರ್ ಬಾಬು, ಅಶೋಕ್ ಕುಮಾರ್, ಶಾಂತಿ ಕಿರಣ್, ಕುಮಾರಿ ಪ್ರತೀಕಾ, ತೊಳಸಿ ಜ್ಯುವೆಲ್ಸ್ ಕುಟುಂಬದವರು ಹಾಗೂ ಸಿಲೂಯೆಟ್ ಇಂಡಿಯಾದ ಶ್ರೀಹರ್ಷ ಉಪಸ್ಥಿತರಿದ್ದರು.

ಜೂ.7ರಿಂದ 13ರವರೆಗೆ ಬೆಳಕಿನ ವಿನ್ಯಾಸ ಕಾರ್ಯಾಗಾರ

ಮೈಸೂರು: ಮೈಸೂರಿನ ನಾಟ್ಯಾಲೇಖ ರಂಗಸಮೂಹ ವತಿಯಿಂದ ಜೂ.7 ರಿಂದ 13ರವರೆಗೆ 7 ದಿನಗಳ ಕಾಲ ಬೆಳಕಿನ ವಿನ್ಯಾಸ ಕಾರ್ಯಾಗಾರವನ್ನು ಪ್ರತಿದಿನ ಮಧ್ಯಾಹ್ನ 2.00 ರಿಂದ ರಾತ್ರಿ 8.00 ರವರೆಗೆ ರಂಗಾಯಣದ ಆವರಣದಲ್ಲಿರುವ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಜೂ.7ರಂದು ಸಂಜೆ 4ಕ್ಕೆ ರಂಗ ನಿರ್ದೇಶಕ ಡಾ.ಜೀವನ್ ರಾಂ ಸುಳ್ಯ ಕಾರ್ಯಾಗಾರ ಉದ್ಘಾಟಿಸುವರು. ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಉಪಸ್ಥಿತರಿರುವರು. ಕಾರ್ಯಾಗಾರದಲ್ಲಿ ಡಾ.ಜೀವನ್‌ರಾಂ ಸುಳ್ಯ, ಜೀವನ್ ಕುಮಾರ ಹೆಗ್ಗೂಡು, ಗುರುರಾಜ್ ತಲಕಾಡು, ಕೃಷ್ಣಕುಮಾರ ನಾರ್ಣಕಜೆ, ಮಹೇಶ್ ಕಲ್ಲತ್ತಿ, ಮಧುಸೂದನ್ ತರಗತಿ ನಡೆಸಿ ಕೊಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.6361848788/ 9482203369 ಅನ್ನು ಸಂಪರ್ಕಿಸಬಹುದು.

ಆರ್‌ಸಿಬಿ ಗೆಲುವಿಗೆ ಚಾಮುಂಡೇಶ್ವರಿಗೆ ಪೂಜೆ



ಮೈಸೂರಿನ ಕೆ.ಜಿ.ಕೊಪ್ಪಲಿನ ಆದಿಶಕ್ತಿ ಚಾಮುಂಡೇಶ್ವರಿ ದೇವಿಗೆ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಆರ್‌ಸಿಬಿ ತಂಡದ ಪರವಾಗಿ ಕುಂಕುಮಾರ್ಚನೆ ಮಾಡಿ, ತಂಡ ಜಯಗಳಿಸಲಿ ಎಂದು ಮಹಿಳೆಯರು ವಿಶೇಷ ಪೂಜೆ ಸಲ್ಲಿಸಿದರು. ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮುಡಾ ಮಾಜಿ ಸದಸ್ಯರಾದ ಲಕ್ಷ್ಮೀದೇವಿ, ವಕೀಲರಾದ ಜಯಶ್ರೀ ಶಿವರಾಮ್, ಸುಶೀಲ, ರೂಪ, ಹೇಮಾ, ವಿಜಯ, ಸುವರ್ಣ ಇನ್ನಿತರರು ಪೂಜೆಯಲ್ಲಿ ಭಾಗಿಯಾಗಿದ್ದರು.


ಡಾ.ಎಸ್‌ಪಿಬಿ ಹುಟ್ಟುಹಬ್ಬ ಅಂಗವಾಗಿ ಇಂದು 'ಗೀತಾಂಜಲಿ ಸಂಭ್ರಮ'

ಮೈಸೂರು, ಜೂ.3(ಎಂಟಿವೈ)– ಮೈಸೂರಿನ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ನಾಳೆ(ಜೂ.4) ಸಂಜೆ 5ಕ್ಕೆ ಡಾ.ಎಸ್.ಪಿ.ಬಾಲಸುಬ್ರಮಣ್ಯಂ ಹುಟ್ಟುಹಬ್ಬದ ಅಂಗವಾಗಿ 'ಗೀತಾಂಜಲಿ ಸಂಭ್ರಮ' ಗೀತಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ರೇವಣ್ಣ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್, ಸಮಸೇವಾ ಟ್ರಸ್ಟ್ ವತಿಯಿಂದ ಗೀತ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉದ್ಯಮಿ ನಾರಾಯಣ್, ಸಮಾಜ ಸೇವಕರಾದ ಡಾ.ಕೆ.ರಘುರಾಂ ವಾಜಪೇಯಿ, ಮಂಜುನಾಥ್, ವಕೀಲ ಎಸ್.ಜೆ. ಮದ್ದುರಾಜ್, ನಿವೃತ್ತ ಸಹ ಪ್ರಾಧ್ಯಾಪಕ ಶಂಕರೇಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಆರ್.ಸೋಮಸುಂದರಂ, ಎಂ.ಡಿ.ಪಾರ್ಥಸಾರಥಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಹಳೇ ಕನ್ನಡ ಮತ್ತು ಹಿಂದಿ ಚಲನ ಚಿತ್ರಗೀತೆಗಳ ಕರೋಕೆ ಗಾಯನವನ್ನು ಪ್ರಸ್ತುತಪಡಿಸಲಾಗುತ್ತಿದ್ದು, ಉಚಿತ ಪ್ರವೇಶಾವಕಾಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಮಸೇವಾ ಟ್ರಸ್ಟ್‌ನ ಟ್ರಸ್ಟಿ ಜಿ.ಆರ್.ಬಾಲಸುಬ್ರಮಣ್ಯಂ, ಗಾಯಕರಾದ ಬಿ.ಎಸ್. ಶ್ರೀಕಂಠರಾವ್, ಪ್ರಥಮ ಮಂಜುನಾಥ್, ಸತೀಶ್, ಸತ್ಯವತಿ ಮತ್ತಿತರರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.06.2025 ಬುಧವಾರ, ಮಳೆ ನಕ್ಷತ್ರ: ರೋಹಿಣಿ, 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಅರಸು ಮಂಡಳಿ ಸಂಘ :** ಮಹಾಪ್ರಭು ಶ್ರೀ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ವರ್ಧಂತ್ಯುತ್ಸವ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ವಿಶೇಷ ಆಹ್ವಾನಿತರು : ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಯು.ಜಿ. ಗೋಪಾಲ್ ರಾಜೇ ಅರಸ್, ಅಧ್ಯಕ್ಷತೆ : ಅರಸು ಮಂಡಳಿ ಸಂಘದ ಅಧ್ಯಕ್ಷ ಮನೋಜ್ ಅರಸ್, ಸ್ಥಳ: ಸಂಘದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 9ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಾರ್ನಿಯಲ್ ಒಪೇಸಿಟಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಆಲ್ ಇಂಡಿಯಾ ಇನ್ಶೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್:** 9ನೇ ಜನರಲ್ ಕಾನ್ಫರೆನ್ಸ್, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಬೆಳಗ್ಗೆ 9.30ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ :** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲ ಸೀತಾರಾಮನ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ, ವಿಶೇಷ ಆಹ್ವಾನಿತರು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 10.30ಕ್ಕೆ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ, ಮುಖ್ಯ ಅತಿಥಿಗಳು : ಧರ್ಮೇಂದ್ರಕುಮಾರ್ ಅರೇನಹಳ್ಳಿ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** 52ನೇಯ ಕನ್ನಡ ಪುನಶ್ಚೇತನ ಶಿಬಿರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಉಪಸ್ಥಿತರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ತೊಳಸಿ ಜ್ಯುವೆಲ್ಸ್:** ಇಟಾಳಸಿ ಲಕ್ಸ್ ಫಸ್ಟ್–ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜೈ ಹಿಂದ್–ದೇಶ ರಕ್ಷಣೆಯ ವೀರರಿಗೆ ಬಾನುಲಿ ನಮನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿಸರಣಿ, ಗಾಯನ–ಮತ್ತೂರು ಕುಮಾರಸ್ವಾಮಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿಕ್ಷಕ ಡಾ. ಬಿ.ಪಿ.ಮೂರ್ತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 8.50 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ ಐ.ಟಿ.ಐ. ತರಬೇತಿ ಮತ್ತು ಉದ್ಯೋಗ ಅವಕಾಶಗಳು ಈ ಕುರಿತು ಹೆಚ್.ಡಿ. ಕೋಟೆಯ ಸರ್ಕಾರಿ ಐ.ಟಿ.ಐ. ಕಾಲೇಜಿನ ಟ್ರೈನಿಂಗ್ ಆಫೀಸರ್ ಹಾಗೂ ಉತ್ತಮ ಎನ್.ಎಸ್.ಎಸ್. ಅಧಿಕಾರಿ ರಾಜ್ಯಪ್ರಶಸ್ತಿ ಪುರಸ್ಕೃತರಾದ ರವಿಶಂಕರ್ ಜಿ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅಲಿ ಅಹಮದ್ ಹುಸೇನ್ ಮತ್ತು ಸಂಗಡಿಗರಿಂದ ಶೆಹನಾಯ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಕೊಳ್ಳೇಗಾಲ ತಾಲೂಕು ಸತ್ತೇಗಾಲದ ಶಿವಮ್ಮ ಮತ್ತು ಸಂಗಡಿಗರಿಂದ ನಂಜುಂಡೇಶ್ವರನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ರೋಹಿಣಿ ಸುಧಾಮ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ವಿಜಯಲಕ್ಷ್ಮಿ – ವೈಯೋಲಿನ್ ವಾದನ, 4.00 ಮಹಿಳಾ ರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಸ್ಮಿತಾ ಚಿಪ್ಳೂಣ್‌ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಮುಂಗಾರಿಗೆ ಸೂಕ್ತವಾದ ಭತ್ತದ ತಳಿಗಳು ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಸಿ.ಎ. ದೀಪಕ್ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಬಾಲಮುರಳಿ ಕೃಷ್ಣ–ಹಾಡುಗಾರಿಕೆ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ನಾಟಕ ಅಭಿಜ್ಞಾನ ಶಾಕುಂತಲ, ನಿರ್ದೇಶನ ಮತ್ತು ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 4 ಬುಧವಾರ 2025

ಸಂಪುಟ: 46 | ಸಂಚಿಕೆ: 49 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಈ ಸಲ ಕಪ್ ನಮ್ದೇ...

18 ವರ್ಷದ ಬಳಿಕ ಚೊಚ್ಚಲ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ



ಚೊಚ್ಚಲ ಐಪಿಎಲ್ ಟ್ರೋಫಿ ಗೆದ್ದ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡದ ಆಟಗಾರರ ವಿಜಯೋತ್ಸವ

ಆರ್‌ಸಿಬಿ: 190/9 / ಪಿಬಿಕೆಎಸ್: 184/7

ಅಹಮದಾಬಾದ್, ಜೂ.3(ಸಂತೋಷ್)– ಕೋಟ್ಯಾಂತರ ಅಭಿಮಾನಿಗಳ ಪ್ರಾರ್ಥನೆ, ಹರಕೆ ಕೊನೆಗೂ ಫಲಿಸಿದೆ. ಒಮ್ಮೆಯಾದರೂ ಕಪ್ ಗೆಲ್ಲಬೇಕೆಂಬ ಅಭಿಮಾನಿಗಳ 18 ವರ್ಷಗಳ ಕನಸು ಕೊನೆಗೂ ನನಸಾಗಿದೆ. ಆ ಮೂಲಕ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' 18 ವರ್ಷಗಳ ವನವಾಸದ ಬಳಿಕ ಚೊಚ್ಚಲ ಐಪಿಎಲ್ ಟ್ರೋಫಿ ಮುಡಿಗೇರಿಸಿಕೊಂಡಿದೆ. ಅಲ್ಲದೇ ಈ ಆವೃತ್ತಿಯ ಆರಂಭದಿಂದ 'ಈ ಸಲ ಕಪ್ ನಮ್ದೇ' ಎಂದು ಹುರಿದುಂಬಿಸುತ್ತಿದ್ದ ಅಭಿಮಾನಿಗಳಿಗೆ ಗೆಲುವಿನ ಉಡುಗೊರೆ ನೀಡಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಅನ್ನು 6 ರನ್‌ಗಳಿಂದ ಮಣಿಸಿದ ರಜತ್ ಪಾಟೀದಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಐಪಿಎಲ್ ಟ್ರೋಫಿ ಹಾಗೂ 20 ಕೋಟಿ ರೂ. ಬಹುಮಾನದೊಂದಿಗೆ 18ನೇ ಆವೃತ್ತಿಯ ಐಪಿಎಲ್ ಚಾಂಪಿಯನ್ ಪಟ್ಟ ಅಲಂಕರಿಸಿದರೆ, ಮತ್ತೊಂದೆಡೆ ಪಂಜಾಬ್ ಕಿಂಗ್ಸ್ 13 ಕೋಟಿ ರೂ. ಬಹುಮಾನದೊಂದಿಗೆ ರನ್ನರ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಇದರೊಂದಿಗೆ ಪ್ರಸಕ್ತ ಸಾಲಿನ ಟೂರ್ನಿಗೆ ವರ್ಣರಂಜಿತ ತೆರೆ ಬಿದ್ದಿತ್ತು.

ಮಂಗಳವಾರ ನಡೆದ ರೋಚಕ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190 ರನ್ ಗಳಿಸಿತು. ನಂತರ 191 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೇಯಸ್ ಅಯ್ಯರ್ ಪಡೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿ 6 ರನ್‌ಗಳ ಸೋಲು ಅನುಭವಿಸಿತು.

ಚೊಚ್ಚಲ ಟ್ರೋಫಿ ಗೆಲ್ಲುವ ಗುರಿಯೊಂದಿಗೆ ಇನ್ನಿಂಗ್ಸ್ ಆರಂಭಿಸಿದ ಪಂಜಾಬ್ ಕಿಂಗ್ಸ್ ಎಚ್ಚರಿಕೆಯಿಂದ ಇನ್ನಿಂಗ್ಸ್ ಆರಂಭಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ ಮತ್ತು ಪ್ರಭ್ ಸಿಮ್ರಾನ್ ಸಿಂಗ್ ಮೊದಲ ವಿಕೆಟ್‌ಗೆ 43 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ಹಂತದಲ್ಲಿ 19 ಎಸೆತದಲ್ಲಿ 24 ರನ್ ಗಳಿಸಿದ್ದ ಪ್ರಿಯಾಂಶ್ ಆರ್ಯ, ಜೋಶ್ ಹೇಜಲ್ ವುಡ್ ಅವರಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಜೋಶ್ ಇಂಗ್ಲಿಸ್ ಅವರ ಜೊತೆ ಸೇರಿ ಪ್ರಭಸಿಮ್ರಾನ್ ಸಿಂಗ್ ಇನ್ನಿಂಗ್ಸ್ ಬೆಳೆಸುವ ಪ್ರಯತ್ನ ಮಾಡಿದರಾದರೂ ಕೃನಾಲ್ ಪಾಂಡ್ಯ ಬೌಲಿಂಗ್‌ನಲ್ಲಿ 22 ಎಸೆತಗಳಲ್ಲಿ 2 ಸಿಕ್ಸರ್ ಒಳಗೊಂಡ 26 ರನ್ ಗಳಿಸಿ ನಿರ್ಗಮಿಸಿದರು. ಮುಂದಿನ ಓವರ್‌ನಲ್ಲೇ ಕಳೆದ ಪಂದ್ಯದ ಹೀರೋ ಶ್ರೇಯಸ್ ಅಯ್ಯರ್ ಕೇವಲ 1 ರನ್ ಗಳಿಸಿ ರೊಮಾರಿಯೋ ಶೆಫರ್ಡ್‌ಗೆ ವಿಕೆಟ್ ಒಪ್ಪಿಸಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಉತ್ತಮವಾಗಿ ಆಡುತ್ತಿದ್ದ ಜೋಶ್ ಇಂಗ್ಲಿಸ್ 23 ಎಸೆತಗಳಲ್ಲಿ 4 ಸಿಕ್ಸರ್, 1 ಬೌಂಡರಿ ಒಳಗೊಂಡ 39 ರನ್ ಗಳಿಸಿ ಕೃನಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ನೆಹಾಲ್ ವಧೇರ 18 ಎಸೆತಗಳಲ್ಲಿ 15 ರನ್ ಮಾಡಿ ಔಟಾದರು. ನಂತರ ಬಂದ ಸ್ಫೋಟಕ ಬ್ಯಾಟರ್ ಸ್ಟೋಯಿನಸ್ ▶ 6ನೇ ಪುಟಕ್ಕೆ





ವೈಯಕ್ತಿಕ ಬಹುಮಾನಗಳ ವಿವರ

ಅತಿ ಹೆಚ್ಚು ರನ್ (ಆರೆಂಜ್ ಕ್ಯಾಪ್)–ಸಾಯಿ ಸುದರ್ಶನ್ (759)
ಅತಿ ಹೆಚ್ಚು ವಿಕೆಟ್ (ಪರ್ಪಲ್ ಕ್ಯಾಪ್)–ಪ್ರಸಿದ್ಧ ಕೃಷ್ಣ (25)
ಉದಯೋನ್ಮುಖ ಆಟಗಾರ –ಸಾಯಿ ಸುದರ್ಶನ್
ಮೌಲ್ಯಯುತ ಆಟಗಾರ –ಸೂರ್ಯಕುಮಾರ್ ಯಾದವ್
ಸೂಪರ್ ಸ್ಟ್ರೈಕರ್ –ವೈಭವ್ ಸೂರ್ಯ ವಂಶಿ
ಕ್ಯಾಚ್ ಆಫ್ ದಿ ಸೀಸನ್ ಅವಾರ್ಡ್–ಕಮಿಂದು ಮೆಂಡೀಸ್
ಅತಿ ಹೆಚ್ಚು ಸಿಕ್ಸರ್–ನಿಕೋಲಸ್ ಪೂರನ್ (40)
ಅತೀ ಹೆಚ್ಚು ಫೋರ್ಸ್–ಸಾಯಿ ಸುದರ್ಶನ್ (88)
ಗ್ರೀನ್ ಡಾಟ್ ಬಾಲ್ ಅವಾರ್ಡ್–ಮೊಹಮ್ಮದ್ ಸಿರಾಜ್ (151)
ಫೇರ್ ಪ್ಲೇ ಆವಾರ್ಡ್ –ಚೆನ್ನೈ ಸೂಪರ್ ಕಿಂಗ್ಸ್

ಭಾಷೆ, ಗಡಿ ಮೀರಿದ ಅಭಿಮಾನ


ದೇಶ, ರಾಜ್ಯ, ಭಾಷೆಗಳ ಗಡಿಯನ್ನು ಮೀರಿ ಜನರನ್ನು ಒಗ್ಗೂಡಿಸುವಲ್ಲಿ ಮಂಗಳವಾರ ನಡೆದ 18ನೇ ಆವೃತ್ತಿಯ ಐಪಿಎಲ್ ಫೈನಲ್ ಯಶಸ್ವಿಯಾಯಿತು. ಬೆಂಗಳೂರು, ಪಂಜಾಬ್ ಮಾತ್ರವಲ್ಲದೆ ಹೊಸದಿಲ್ಲಿ, ಮುಂಬಯಿ, ಹೈದರಾಬಾದ್, ಚೆನ್ನೈ, ಕೊಲ್ಕೊತಾ ಸೇರಿದಂತೆ ದೇಶ ವಿದೇಶಗಳಿಂದ ಅಭಿಮಾನಿಗಳು ಚೊಚ್ಚಲ ಪ್ರಶಸ್ತಿ ಮೇಲೆ ಕಣ್ಣಿರಿಸಿದ್ದ ಆರ್‌ಸಿಬಿ ಮತ್ತು ಪಂಜಾಬ್ ನಡುವಿನ ಫೈನಲ್ ಪಂದ್ಯ ವೀಕ್ಷಣೆಗೆ ಅಹಮದಾಬಾದ್‌ಗೆ ಆಗಮಿಸಿದ್ದರು. ಅದರಲ್ಲಿಯೂ ಕ್ರೀಡಾಂಗಣ ತುಂಬೆಲ್ಲಾ ಆರ್‌ಸಿಬಿ ಜರ್ಸಿಗಳದ್ದೇ ಹವಾ ಜೋರಾಗಿದ್ದಿದ್ದು ತಂಡದ ಜನಪ್ರಿಯತೆಗೆ ಸಾಕ್ಷಿಯಾಯಿತು. ಅತ್ಯಧಿಕ ಆನ್‌ಲೈನ್ ಫಾಲೋವರ್‌ಗಳನ್ನು ಹೊಂದಿರುವ ತಂಡ ಎನ್ನುವ ಖ್ಯಾತಿಗೆ ಪಾತ್ರವಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳು ಫೈನಲ್ ಪಂದ್ಯಕ್ಕೂ ಸಾಗರೋಪಾದಿಯಲ್ಲಿ ನೆರೆದು ತಮ್ಮ ಹಾಜರಾತಿ ಬಲವನ್ನು ಜಗಜ್ಜಾಹೀರುಗೊಳಿಸಿದರು. ಇನ್ನು ವಯಸ್ಸಿನ ಹಂಗಿಲ್ಲದೆ ಎಳೆಯ ಮಕ್ಕಳಿಂದ ಹಿರಿಯ ನಾಗರಿಕರ ತನಕ ಕೋಟ್ಯಾಂತರ ಮಂದಿ ಭಾರತೀಯರು ಟಿವಿ ಎದುರು ದೃಷ್ಟಿ ನೆಟ್ಟು ಕ್ರಿಕೆಟ್ ಸವಿಯುಂಡರು.

ಮಲ್ಯ ಶುಭ ಹಾರೈಕೆ



18 ವರ್ಷಗಳ ನಂತರ ಆರ್‌ಸಿಬಿ ಅಂತಿಮವಾಗಿ ಐಪಿಎಲ್ ಚಾಂಪಿಯನ್ ಆಗಿದೆ. 2025ರ ಪಂದ್ಯಾವಳಿ ಅದ್ಭುತ ಅಭಿಯಾನ ಆಗಿತ್ತು. ಈ ಸಲ ಕಪ್ ನಮ್ದು !! ಅಭಿನಂದನೆಗಳು. ಕೋಟ್ಯಾಂತರ ಅಭಿಮಾನಿಗಳ ಪ್ರಾರ್ಥನೆ ಕೊನೆಗೂ ಈಡೇರಿದೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.





ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು. ಅದೇ ರೀತಿ ಇನ್ನೊಂದು ಉದಾಹರಣೆ ಕೊಡು ತಿಮ್ಮ.

ತಿಮ್ಮ : ಎಣ್ಣೆ ಬಿಟ್ಟು ನೀರಿನಲ್ಲಿ ಬೋಂಡ ಬೇಯದು.

ಮೈಸೂರು ಮಿತ್ರ

ಬುಧವಾರ 4 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮಾತು ಸಂಬಂಧವನ್ನು ಕೂಡಿಸುವಂತೆ ಇರಬೇಕೇ ಹೊರತು ಸಂಬಂಧವನ್ನು ಹಾಳು ಮಾಡುವಂತೆ ಅಲ್ಲಾ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸುಖ ಬಂದಾಗ ಹಿಗ್ಗಬೇಡ, ಕಷ್ಟ ಬಂದಾಗ ಕುಗ್ಗಬೇಡ

ನಿಮ್ಮ ಪತ್ರಗಳು

ಹೆಚ್ಚುತ್ತಿರುವ ಬಾಲಾಪರಾಧಗಳು

ಮಾನ್ಯರೆ,

ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ಕಾಕತಿ ಎಂಬ ಗ್ರಾಮದಲ್ಲಿ 15 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಆಕೆಯ ಸ್ನೇಹಿತ ಸೇರಿದಂತೆ 6 ಮಂದಿ ಸಾಮೂಹಿಕ ಅತ್ಯಾಚಾರ ಮಾಡಿ, ಮೊಬೈಲ್‌ನಲ್ಲಿ ಅದರ ಚಿತ್ರೀಕರಣ ಮಾಡಿಕೊಂಡು ಬಳಿಕ ಆರೋಪಿಗಳು ಅದನ್ನು ಬಾಲಕಿಗೆ ತೋರಿಸಿ, ಬ್ಲಾಕ್ ಮೇಲ್ ಮಾಡಿ ಪದೇ ಪದೇ ಅತ್ಯಾಚಾರ ಮಾಡಿದ ಪ್ರಕರಣ ತಡವಾಗಿ ವರದಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ, ಇಬ್ಬರು ಬಾಲಕರು ಸೇರಿದಂತೆ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿರುವ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಅಪ್ರಾಪ್ತ ಬಾಲಕಿಯರ ಮೇಲಿನ ಈ ರೀತಿಯ ಪೈಶಾಚಿಕ ಘಟನೆಗಳು ದೇಶಾದ್ಯಂತ ಹೆಚ್ಚುತ್ತಿರುವುದು ಆತಂಕಕಾರಿಯಾದ ವಿಚಾರವಾಗಿದೆ. ದೇಶದಲ್ಲಿ ಅತ್ಯಾಚಾರದ ವಿರುದ್ಧ ಪ್ರಬಲ ಕಾನೂನಿದ್ದರೂ ಸಹ ಇಂತಹ ಘಟನೆಗಳು ಪದೇ ಪದೇ ಮರುಕಳಿಸುತ್ತಿರುವುದು ನಾಗರೀಕ ಸಮಾಜವನ್ನು ತಲೆ ತಗ್ಗಿಸುವಂತೆ ಮಾಡಿದೆ. ಅದರಲ್ಲೂ ವಿಶೇಷವಾಗಿ ಈ ಘಟನೆಯಲ್ಲಿ ಇಬ್ಬರು ಬಾಲಕರು ಆರೋಪಿಗಳಾಗಿರುವುದು ಗಮನಿಸತಕ್ಕ ಅಂಶವಾಗಿದೆ. ಬಾಲಾಪರಾದಗಳು ಸಹಾ ದೇಶದಲ್ಲಿ ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಲು ಶೀಘ್ರ ಗತಿಯ ಅಥವಾ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಆರೋಪಿಗಳಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಗರಿಷ್ಠ ಶಿಕ್ಷೆ ಕೊಡಿಸಲು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಯುದ್ಧ ನಷ್ಟ ಮರೆಮಾಚಿತ್ತಿರುವುದೇಕೆ?

ಮಾನ್ಯರೆ,

ಆಪರೇಷನ್ ಸಿಂಧೂರ ಕಾರ್ಯಾಚರಣೆ ವೇಳೆ ಭಾರತ ಕೂಡ ಕೆಲವು ವಿಮಾನಗಳನ್ನು ಕಳೆದುಕೊಂಡಿದೆ ಎಂದು ಇದೇ ಮೊದಲ ಬಾರಿಗೆ ದೇಶದ ಸೇನಾಪಡೆಗಳ ಮುಖ್ಯಸ್ಥರು ಸಿಂಗಪುರದಲ್ಲಿನ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ ಇದುವರೆಗೂ ದೇಶದ ಪ್ರಧಾನಿಯಾಗಲಿ, ರಕ್ಷಣಾ ಸಚಿವರಾಗಲಿ ಯಾವುದೇ ಸ್ಪಷ್ಟನೆ ನೀಡದೆ ಕೇವಲ ತಮ್ಮ ಪರಾಕ್ರಮವನ್ನು ಮಾತ್ರ ಹೇಳುತ್ತಿದ್ದಾರೆ. ದಾಳಿ ನಡೆದ ನಂತರ ತಾನು ಪಾಕಿಸ್ತಾನದ ಭಯೋತ್ಪಾದಕ ಕೇಂದ್ರಗಳನ್ನು ನಿಖರವಾಗಿ ಧ್ವಂಸ ಮಾಡಿದ್ದಾಗಿ ಭಾರತ ಹೇಳುತ್ತಿತ್ತು. ಇದೇ ಸಮಯದಲ್ಲಿ ತಾನು ಭಾರತದ 2 ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಪಾಕಿಸ್ತಾನ ಹೇಳಿಕೊಂಡಿದೆ ಎನ್ನುವ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅಷ್ಟೇ ಅಲ್ಲ ಬಿಬಿಸಿ ಸುದ್ದಿವಾಹಿನಿಯಲ್ಲಿ ಕೂಡ ಇದು ಪ್ರಸಾರವಾಯಿತು. ಇದೀಗ ಸೇನಾ ಪಡೆಗಳ ಮುಖ್ಯಸ್ಥರೇ ಒಪ್ಪಿಕೊಂಡಿರುವುದು, ಯುದ್ಧದಲ್ಲಿ ಆದ ನಷ್ಟಗಳ ಬಗ್ಗೆ ಕೇಂದ್ರ ಸರ್ಕಾರ ದೇಶದ ಜನತೆಗೆ ವಾಸ್ತವಾಂಶ ತಿಳಿಸದೆ ಮರೆ ಮಾಚುತ್ತಿದೆ ಎನ್ನುವ ಅನುಮಾನ ಮೂಡಿಸುತ್ತಿದೆ. 2019ರ ಪುಲ್ವಾಮಾ ದಾಳಿ ಸಂದರ್ಭದಲ್ಲೂ ಇಂತಹುದೇ ಅನುಮಾನ ಇತ್ತು. ಸರ್ಕಾರ ಆಗಲೂ ವಾಸ್ತವವನ್ನು ತಿಳಿಸಲಿಲ್ಲ. ಬದಲಿಗೆ ಕಾಂಗ್ರೆಸ್‌ನವರಿಗೆ ರಾಷ್ಟ್ರದ ಹಿತಕ್ಕಿಂತಲೂ ತಮ್ಮ ಹಿತವೇ ಮುಖ್ಯ ಎಂದು ಗೂಬೆ ಕೂರಿಸುವ ಕೆಲಸ ಮಾಡಿದರು. ಈಗಲೂ ಅದೇ ಪುನರಾವರ್ತನೆಯಾಗುತ್ತಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವಂತೆ ದೇಶದ ಜನತೆಗೆ ತಪ್ಪು ಮಾಹಿತಿ ನೀಡಿದ್ದಾರೆ. ಖರ್ಗೆಯವರು ಈ ಬಗ್ಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆದು ಅನುಮಾನಗಳಿಗೆ ಸೂಕ್ತ ಉತ್ತರ ನೀಡಬೇಕು ಎಂದು ಆಗ್ರಹಿಸಿರುವುದು ಸಮಂಜಸವಾಗಿದೆ. ತುರ್ತು ಪರಿಸ್ಥಿತಿಗೆ 50 ವರ್ಷ ತುಂಬಿದ ಬಗ್ಗೆ ಖಂಡಿಸಲು ವಿಶೇಷ ಅಧಿವೇಶನ ಕರೆಯುವುದಕ್ಕಿಂತಲೂ ಹೆಚ್ಚಿನ ಮಹತ್ವ ಇದಕ್ಕಿದೆ. ಭಾರತ –ಪಾಕ್ ಮಿಲಿಟರಿ ಸಂಘರ್ಷವು ನನ್ನ ಮಧ್ಯಸ್ಥಿಕೆಯಿಂದ ನಿಂತಿತು ಎಂದು ಟ್ರಂಪ್ ಕನಿಷ್ಠ 7 ಬಾರಿ ಹೇಳಿದ್ದಾರೆ. ಪಾಕ್ ಸೇನಾ ವರಿಷ್ಠರು ಕೋರಿದ ಹಿನ್ನೆಲೆಯಲ್ಲಿ ಭಾರತ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿತು ಎಂದು ಭಾರತ ಹೇಳುತ್ತಿದೆ. ಯುದ್ಧ ವಿರಾಮದ ನಂತರವೂ ಪಾಕಿಸ್ತಾನ ಡ್ರೋಣ್ ದಾಳಿ ನಡೆಸಿತು. ಇದೀಗ ರಕ್ಷಣಾ ಸಚಿವರು ಪಿಓಕೆಯನ್ನು ವಶಪಡಿಸಿಕೊಳ್ಳುವುದೇ ಭಾರತದ ಮುಂದಿನ ಹೆಜ್ಜೆ ಎಂದು ಹೇಳಿದ್ದಾರೆ. ಪಾಕಿಸ್ತಾನ ಕದನ ವಿರಾಮ ಉಲ್ಲಂಘಿಸಿದಾಗಲೇ ಆ ಕೆಲಸ ಮಾಡಬೇಕಾಗಿತ್ತು ಎನ್ನುವುದು ಜನರ ಅಭಿಪ್ರಾಯವಾಗಿತ್ತು. ಭಯೋತ್ಪಾದನೆ ಇರುವ ಕಾಶ್ಮೀರದ ಪ್ರವಾಸಿ ತಾಣ ಪಹಲ್ಗಾಮ್‌ನಲ್ಲಿ ಏಪ್ರಿಲ್ 22 ರಂದು ದಾಳಿ ನಡೆದಾಗ ಮಿಲಿಟರಿ ಇರಲಿ, ಅಲ್ಲಿ ಒಬ್ಬನೇ ಒಬ್ಬ ಪೊಲೀಸ್ ಪೇದೆ ಕೂಡ ಇರಲಿಲ್ಲ ಎನ್ನುವುದು ಸರ್ಕಾರದ ಭದ್ರತಾ ಲೋಪವಲ್ಲದೆ ಮತ್ತೇನು. ಪಹಲ್‌ಗಾಮ್ ದಾಳಿ ನಂತರ ವಿದೇಶ ಪ್ರವಾಸ ಮೊಟಕುಗೊಳಿಸಿ ದೇಶಕ್ಕೆ ಹಿಂದಿರುಗಿದ ಪ್ರಧಾನಿಯವರು ಸರ್ವ ಪಕ್ಷಗಳ ಸಭೆ ಕರೆದರೂ, ತಾವು ಸಭೆಯಲ್ಲಿ ಭಾಗವಹಿಸದೆ ಬಿಹಾರ ಚುನಾವಣೆ ಪ್ರಚಾರಕ್ಕೆ ಹೋದದ್ದು ಅವರಿಗೆ ವಿರೋಧ ಪಕ್ಷಗಳ ಬಗ್ಗೆ ಇರುವ ಅಭಿಪ್ರಾಯವನ್ನು ತಿಳಿಸುತ್ತದೆ. ವಾಸ್ತವಾಂಶಗಳೇನು ಎನ್ನುವುದನ್ನು ಈಗಲಾದರೂ ದೇಶದ ಜನರಿಗೆ ತಿಳಿಸುವ ಕೆಲಸ ಕೇಂದ್ರ ಸರ್ಕಾರದಿಂದ ಆಗಲಿ.

–ಮುಳ್ಳೂರು ಪ್ರಕಾಶ್, ಮೈಸೂರು

ಸರ್ಕಾರಿ ಕಾರುಗಳ ದುರ್ಬಳಕೆ

ಮಾನ್ಯರೆ,

ಸರ್ಕಾರವು ವಿವಿಧ ಇಲಾಖೆಗಳ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಆಯಾ ಇಲಾಖೆಗಳ ಅಂದರೆ ಆರೋಗ್ಯ ಇಲಾಖೆ, ಆಹಾರ ಇಲಾಖೆ, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ತಾಲೂಕು ಆಡಳಿತ, ಜಿಲ್ಲಾ ಪಂಚಾಯಿತಿ, ನಗರಪಾಲಿಕೆ ಹಾಗೂ ವಿವಿಧ ಪಟ್ಟಣ ಪಂಚಾಯಿತಿಗಳಲ್ಲಿನ ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ, ನಿರ್ದೇಶಕರುಗಳಿಗೆ ಹಾಗೂ ನಿರೀಕ್ಷಕರಿಗೆ ಸರ್ಕಾರವು ಕೇವಲ ಸರ್ಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಮಾತ್ರ ವಾಹನದ ವ್ಯವಸ್ಥೆಯನ್ನು ಕಲ್ಪಿಸಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲ ಅಧಿಕಾರಿಗಳು ಸರ್ಕಾರಿ ವಾಹನಗಳನ್ನು ತಮ್ಮ ಕುಟುಂಬದ ನಿರ್ವಹಣೆಗೆ, ಶುಭ ಸಮಾರಂಭಗಳಿಗೆ, ಮಾರುಕಟ್ಟೆಗೆ, ಮಕ್ಕಳ ಶಾಲಾ ಕಾಲೇಜುಗಳಿಗೆ, ಪ್ರವಾಸೋದ್ಯಮ ಹಾಗೂ ಧಾರ್ಮಿಕ ಸ್ಥಳಗಳಿಗೆ ತೆರಳುವುದು. ಹೀಗೆ ತಮ್ಮ ತಮ್ಮ ಅನುಕೂಲಕ್ಕಾಗಿಯೇ ಸರ್ಕಾರಿ ಕಾರುಗಳ ದುರ್ಬಳಕೆ ಮಾಡುತ್ತಿರುವುದು ಸರ್ವೆ ಸಾಮಾನ್ಯವಾಗಿದೆ. ಸಂಬಂಧಿಸಿದ ಪ್ರಾಮಾಣಿಕ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಎಂದು ಮನವಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಅರಿವೆ ಗುರು ಜೀವನಕೆ...

ಅರಿವು ಎಂದರೆ ಜ್ಞಾನ ಅರಿವನ್ನು ಉಂಟು ಮಾಡುವವನೇ ಗುರು. ನಮ್ಮಲ್ಲಿರುವ ಅಜ್ಞಾನವೆಂಬ ಅಂಧಕಾರವನ್ನು ತೊಲಗಿಸಿ ಅರಿವನ್ನು ಕೊಡುವವನು ಗುರು ಇದು ಆರಂಭದಲ್ಲಿ. ಮುಂದೆ ಜ್ಞಾನವೇ ನಮ್ಮನ್ನು ಮುನ್ನಡೆಸುವಾಗ ಅರಿವೇ ಗುರುವಾಗುವುದು. ಮುದ್ದುರಾಮನ ಬದುಕಿನಲ್ಲಿ ಶಿವಪ್ಪ ನವರು ಅರಿವಿನ ಮಹತ್ವದ ಬಗೆಗೆ ಬೆಳಕನ್ನು ಚೆಲ್ಲಿದ್ದಾರೆ. ಅಲ್ಲಿ ಮೊದಲನೆಯ ತತ್ತ್ವ ಗುರುವಿನ ಬಗೆಗೆ ನಾವು ಹೊಂದಿರಬೇಕಾದ ಪೂಜ್ಯಭಾವ. ಇದು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಇದನ್ನು ಅವರದೊಂದು ಚೌಪದಿಯಲ್ಲಿ ನೋಡಬಹುದು.


ಹಿರಿದೆನಿವುದಾವುದಿದೆ ನಮಿಸದಕೆ ನೀ ಮೊದಲು
ನೈರಾಶ್ಯದಳಿಸಿಕೆಗೆ ಅದೆ ದಿವ್ಯದಾರಿ.
ಪರಿಶುದ್ಧ ನೆಲೆಯಲ್ಲಿ ಜಾಗೃತಿಯ ದೀಪ್ತಿಯಿದೆ
ಅರಿವಿಗಭಿಮುಖನಾಗು ಮುದ್ದುರಾಮ.

ಈ ಜಗತ್ತಿನಲ್ಲಿ ಯಾವುದೇ ದೃಷ್ಟಿಯಲ್ಲಿ ಯಾವುದು ದೊಡ್ಡದೋ ಅದಕ್ಕೆ ನಾವು ನಮಿಸಬೇಕು. ಗುರು ಎಂಬ ಶಬ್ದಕ್ಕೂ ಬ್ರಹ್ಮ ಎಂಬ ಶಬ್ದಕ್ಕೂ ಮೂಲಾರ್ಥ ಹಿರಿಯ, ದೊಡ್ಡ ಎಂಬುದೇ ಆಗಿದೆ. ತಸ್ಮೈ ಶ್ರೀ ಗುರವೇ ನಮಃ ಎಂಬ ಮಾತಿನಲ್ಲಿ ಹಿರಿದಾದುದನ್ನು ಗೌರವಿಸಬೇಕು ಎಂಬ ತತ್ತ್ವ ಅಡಗಿದೆ. ವಿಶೇಷತಃ ಜ್ಞಾನದಲ್ಲಿ ದೊಡ್ಡದಾದುದಕ್ಕೆ ಆದ್ಯ ವಂದನೆ. ದೇವರನ್ನು ಮೊದಲು ವಂದಿಸುವುದಕ್ಕೂ ಕಾರಣ ಅವನು ಪರಮಗುರು ಎಂಬುದೇ ಆಗಿದೆ. **ಸ ಏಷ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್** ಎಂಬುದು ಪತಂಜಲಿಯ ಸೂತ್ರ ಈ ಗುರು ನಮನ ನೈರಾಶ್ಯದಳಿಸಿಕೆಗೆ ದಿವ್ಯದಾರಿ ಎಂದಿದ್ದಾರೆ ಕವಿ ಶಿವಪ್ಪನವರು. ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿರುವ ನಮಗೆ ದಾರಿಯೇ ತೋಚದೆ ಇದ್ದಾಗ ಗುರುವಿನ ಸ್ಮರಣ ನಿರಾಶತೆಯನ್ನು ದೂಡಿ ಆಶಾವಾದದ ಹೊಂಬಿಸಿಲನ್ನು ತರುತ್ತದೆ. ಅದರಿಂದ ಮುಂದೆ ಹೆಜ್ಜೆಯನ್ನಿಡಲು ದಾರಿಯು ಕಾಣಿಸುತ್ತದೆ. ಜೀವನವು ಮುನ್ನಡೆಯಲು ಇದೇ ಕಾರಣ. ಇಲ್ಲದಿದ್ದರೆ ನೈರಾಶ್ಯದಿಂದ ಕಂಗೆಟ್ಟ ಎಲ್ಲರೂ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು. ಗುರು ಪರಿಶುದ್ಧತೆಯ ನೆಲೆ. ಅವನಲ್ಲಿ ಜಾಗೃತಿಯ ದೀಪ್ತಿಯು ಸ್ಥಿರವಾಗಿ ನಿಂತಿದೆ. ದೀಪ್ತಿ ಎಂದರೆ ಹೊಳೆಯುವ ಬೆಳಕು. ಮಾನವನು ಆ ಬೆಳಕಿನ ಕಡೆಗೆ ಹೋಗಬೇಕು. **ತಮಸೋ ಮಾ ಜ್ಯೋತಿರ್ಗಮಯ** ಎಂಬ ಉಪನಿಷದ್ವಾಕ್ಯವೂ ಕತ್ತಲೆಯಿಂದ ಬೆಳಕಿನೆಡೆಗೆ ನನ್ನನ್ನು ಒಯ್ಯಿ ಎಂಬ ಪ್ರಾರ್ಥನೆಯನ್ನೇ ಮಾಡಿದೆ. ಅದನ್ನೇ ಈ ಪದ್ಯದಲ್ಲಿ 'ಅರಿವಿಗಭಿಮುಖನಾಗು' ಎಂದು ಹೇಳಿರುವುದು. ವ್ಯಕ್ತಿತ್ವ ವಿಕಸನದ ಎರಡು ಮುಖ್ಯ ತತ್ತ್ವಗಳನ್ನು ಈ ಪದ್ಯ ಹೇಳಿದೆ. ಒಂದು–ಎಂತಹ ಸಂದರ್ಭದಲ್ಲೂ ಮನುಷ್ಯರು ನಿರಾಶರಾಗಬಾರದು. ಆಶಾವಾದವನ್ನಾಶ್ರಯಿಸಿ ಮುನ್ನಡೆಯಬೇಕು. ಎರಡು –ಬೆಳಕಿನೆಡೆಗೆ ಸಾಗಬೇಕು. ಪ್ರತಿಯೊಬ್ಬರೂ ಈ ತತ್ತ್ವಗಳನ್ನು ಅಳವಡಿಸಿಕೊಂಡರೆ, ವೈಫಲ್ಯವನ್ನು ಎದುರಿಸಿ ಸಾಫಲ್ಯವನ್ನು ಹೊಂದಬಹುದು. ಅರಿವಿಗೆ ಅಭಿಮುಖನಾಗದೆ ಕತ್ತಲೆಯಲ್ಲೇ ಬದುಕನ್ನು ಸಾಗಿಸುವವರು ಶೋಚನೀಯರು. ಹಾಗೆ ಯಾರೂ ಬದುಕನ್ನು ಹಾಳು ಮಾಡಿಕೊಳ್ಳಬಾರದೆಂದು ಮುದ್ದುರಾಮ ಹೇಳುತ್ತಿದ್ದಾನೆ.

ಜಗತ್ತಿನಲ್ಲಿ ಎಲ್ಲರೂ ಮನ್ನಣೆಯನ್ನು ಬಯಸುತ್ತಾರೆ. ಯಾರೂ ತಮಗೆ ಅವಮಾನವಾಗಲೆಂದು ಬಯಸುವುದಿಲ್ಲ. ಸನ್ಮಾನ ಮಾಡಿಸಿಕೊಳ್ಳಲು, ಪ್ರಶಸ್ತಿಗಳನ್ನು ಪಡೆದುಕೊಳ್ಳಲು ನಾನಾ ರೀತಿಗಳಲ್ಲಿ ಸಾಹಸ ಮಾಡುವವರು ಎಲ್ಲಾ ಕಾಲದಲ್ಲೂ ಇದ್ದಾರೆ. ಆದ್ದರಿಂದಲೇ ಡಿವಿಜಿ 'ಮನ್ನಣೆಯ ದಾಹವದು ಎಲ್ಲಕಿಂ ತೀಕ್ಷ್ಣತಮ ತಿನ್ನುವದದಾತ್ಮವನೆ ಮಂಕುತಿಮ್ಮ' ಎಂದು ಹೇಳಿದ್ದು. ಯಾಜ್ಞವಲ್ಕ್ಯ ಸ್ಮೃತಿಯಲ್ಲೂ –

'ಸಂಮಾನಾದುದ್ವಿಜೇತ್ ಪ್ರಾಜ್ಞಃ ಕೃಷ್ಣಸರ್ಪ ವಿಷಾದಿವ'

(ತಿಳಿದವನು ಸಂಮಾನವನ್ನು ಕರಿನಾಗರಹಾವಿನ ವಿಷಕ್ಕೆ ಸಮಾನವೆಂದು ತಿಳಿದು ಅದರಿಂದ ಹೆದರಬೇಕು) ಎಂದು ಹೇಳಲಾಗಿದೆ. ಸಂಮಾನವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಗರ್ವವನ್ನು ಹುಟ್ಟಿಸುತ್ತದೆ. ಅವಮಾನವಾದಾಗ ಮನುಷ್ಯನು ಕುಗ್ಗಬಾರದು. ನನ್ನಲ್ಲಿರುವ ದೋಷವನ್ನು ಎತ್ತಿ ತೋರಿಸಿ ತಿದ್ದಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ ಎಂದು ಹಿಗ್ಗಬೇಕು. ಇದನ್ನು ಮುದ್ದುರಾಮನು ಹೀಗೆಂದಿದ್ದಾನೆ –



ನಿಂದಿಸುವ ಮಂದಿಯನು
ಬಂಧು ಬಾಂಧವರೆನ್ನು
ಟೀಕಿಸುವ ಜನರ ನೀ
ತನ್ನಾಪ್ತರೆನ್ನು ಜರಿದು
ಬಯ್ಯುವರನ್ನು ತಂದೆ
ತಾಯಿಗಳೇ ಕಲಿತರಿದೆ
ಸಜ್ಜನಿಕೆ ಮುದ್ದುರಾಮ॥

ಹೊಗಳುವವರು ನಮ್ಮ ಬಂಧುಗಳಲ್ಲ. ಏಕೆಂದರೆ ಅವರು ನಮ್ಮಲ್ಲಿ ಭ್ರಾಂತಿಯನ್ನು ಉಂಟು ಮಾಡಿ ದಾರಿ ತಪ್ಪಿಸುತ್ತಾರೆ. (ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೆ ಏರಿಸಿದರಯ್ಯಾ). ಆದರೆ ನಿಂದಿಸುವ ಮಂದಿ ನಮ್ಮ ಕೆಲಸದ ಕುಂದುಕೊರತೆಗಳನ್ನು ತೋರಿಸಿ ಮುಂದೆ ಆ ತಪ್ಪುಗಳನ್ನು ಮಾಡದಿರುವಂತೆ ಎಚ್ಚರಿಸುತ್ತಾರೆ. ಆದ್ದರಿಂದ ನಿಂದಕರೇ ಬಂಧುಗಳು. ಅವರು ನಮ್ಮ ಹಿತವನ್ನೇ ಬಯಸುತ್ತಿದ್ದಾರೆ. ನಮ್ಮ ನಡೆವಳಿಕೆಯನ್ನೋ ಬರವಣಿಗೆಯನ್ನೋ ಹಲವರು ಟೀಕಿಸುತ್ತಾರೆ. ಟೀಕೆ ಎಂದರೆ ಗುಣದೋಷ ವಿಮರ್ಶೆ. ಗುಣಗಳನ್ನೂ ದೋಷಗಳನ್ನೂ ಎತ್ತಿ ತೋರಿಸಿದಾಗ ಅದು ವಿಮರ್ಶೆ. ಹಾಗೆ ಮಾಡುವವರೇ ನಿಜವಾದ ಆಪ್ತರು. ನಮ್ಮ ಗುಣಗಳನ್ನು ಬೆಳೆಸಿಕೊಳ್ಳಲು, ದೋಷಗಳನ್ನು ಕಳಚಿಕೊಳ್ಳಲು ಅವರು ದಾರಿಯನ್ನು ತೋರಿಸುತ್ತಾರೆ. ತಪ್ಪಿರಲಿ, ಇಲ್ಲದಿರಲಿ, ಕೆಲವರು ಜರಿಯುತ್ತಾರೆ, ಬಯ್ಗುಳಗಳನ್ನೂ ಸುರಿಸುತ್ತಾರೆ. ತಂದೆ ತಾಯಿಗಳಂತೆ ಅವರು ಬಯ್ದರು, ಅದು ಅಂತಿಮವಾಗಿ ನನ್ನ ಹಿತಕ್ಕೇ ಕಾರಣವಾಗುವುದು ಎಂದು ಭಾವಿಸಬೇಕು. ಇಂತಹ ಭಾವನೆಗಳನ್ನು ರೂಢಿಸಿಕೊಂಡರೆ ವಿವಾದಗಳೇ ಇರುವುದಿಲ್ಲ. ಎಲ್ಲ ಸಜ್ಜನಿಕೆಗೆ, ಎಂದರೆ ಸೌಜನ್ಯಕ್ಕೆ ಕಾರಣವಾಗುತ್ತದೆ. ಇದನ್ನೇ ಕಲಿಯಬೇಕು.

ಇನ್ನೊಂದು ಮುಖ್ಯ ವಿಷಯವೇನೆಂದರೆ ಜನರು ಎಲ್ಲ ವಿಷಯಗಳನ್ನು ಅತಿಶಯೋಕ್ತಿ, ಉತ್ಪ್ರೇಕ್ಷೆ ಇತ್ಯಾದಿಗಳಿಂದ ಅತಿ ರಂಜಿಸಿ ಹೇಳುವ ಅಭ್ಯಾಸ. ಪತ್ರಿಕೆಗಳಲ್ಲಿ, ಟೆಲಿವಿಶನ್‌ನಲ್ಲಿ ವಾರ್ತೆಗಳನ್ನು ಹೇಳುವಾಗ ಸಣ್ಣ ವಿಚಾರವನ್ನೂ ಜಗತ್ತಿನಲ್ಲಿ ಅಂತಹುದು ಹಿಂದೆಂದೂ ನಡೆದಿರಲಿಲ್ಲ. ಈಗೇನೋ ನಡೆದುಬಿಟ್ಟಿದೆ ಎಂದು ಬಿಂಬಿಸುವುದು. ಜನರ ಗಮನವನ್ನು ಸೆಳೆಯಲು ಮಾಧ್ಯಮಗಳು ಈ ತಂತ್ರವನ್ನು ಅವಲಂಬಿಸುವುದು ಈಗ ಸಾಮಾನ್ಯವಾಗಿದೆ. ಇಂತಹ ಪ್ರವೃತ್ತಿಯು ಜನರಲ್ಲಿ ಬರದಿರಲಿ ಎಂದು ಮುದ್ದುರಾಮನು ಒಂದು ಚೌಪದಿಯಲ್ಲಿ ಹೇಳಿದ್ದಾನೆ–

ಇಲಿ ಇತ್ತ ಸುಳಿದರದು ಹುಲಿ ಹೋಯಿತೆನ್ನದಿರು
ಕಣ್ಣೀರ ಕರೆಯದಿರು ನೀ ಬಣ್ಣ ಕಟ್ಟಿ
ತರದು ಗೌರವ ನಮಗೆ ಆಷಾಢಭೂತಿತನ
ನೈಜತೆಯ ದಾರಿ ಹಿಡಿ ಮುದ್ದುರಾಮ

ಇಲಿಯಂತಹ ಸಣ್ಣ ಪ್ರಾಣಿ ಸಾಮಾನ್ಯ ಘಟನೆಗೆ ಸಂಕೇತ. ಹುಲಿ ದೊಡ್ಡ, ಭಯಂಕರ, ಅಪೂರ್ವ ಘಟನೆಗೆ ಸಂಕೇತ. ಒಂದು ಅಪಘಾತ ನಡೆದಿರುತ್ತದೆ, ಒಬ್ಬ ಗಾಯಗೊಂಡಿರುತ್ತಾನೆ. ಅದನ್ನೇ ಅತಿ ರಂಜಿತವಾಗಿ ಮಾಡಿ 'ಭಯಾನಕ ದುರ್ಘಟನೆ. ರಕ್ತದ ಕೋಡಿಯಲ್ಲಿ ವ್ಯಕ್ತಿ. ಆತನ ಸ್ಥಿತಿ ಗಂಭೀರ' ಎಂದು ವರ್ಣಿಸಿ ಬರೆಯುವುದು ಅಥವಾ ಟೆಲಿವಿಶನ್‌ನಲ್ಲಿ Breaking News ಎಂದು ಬಿಂಬಿಸುವುದು ಇಂದು ಸಂಪ್ರದಾಯವಾಗಿದೆ. ಇದರಿಂದ ಆ ಪದಗಳಿಗೆ ಇರುವ ಶಕ್ತಿಯೇ ಹೋಗಿ ಅವು ಸವಕಲು ನಾಣ್ಯಗಳಾಗಿವೆ. ಕೆಲಸಕ್ಕೆ ಬಾರದ ವೃತ್ತಾಂತಗಳಿಗೂ ಇವರು ಬ್ರೇಕಿಂಗ್ ನ್ಯೂಸ್ ಎನ್ನುತ್ತಾರೆ ಎಂದು ಜನರು ಯಾವುದನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಸಣ್ಣ ವಿಷಯಗಳನ್ನೂ ವರದಿಗಾರರು ಅತಿ ಭಾವುಕತೆಯಿಂದ ಬಣ್ಣ ಕಟ್ಟಿ ಗಟ್ಟಿಸ್ವರದಿಂದ ಹೇಳುತ್ತಾರೆ. ಸುಮ್ಮನೆ ಕಣ್ಣೀರು ಸುರಿಸಿ ನಟರಂತೆ ನಾಟಕ ಮಾಡುತ್ತಾರೆ ಎಂದೂ ಜನರಿಗೆ ಗೊತ್ತಾಗಿ ಹೋಗಿದೆ. ಹಾಗೆ ಮಾಡಿ ನಿಜ ಜೀವನದಲ್ಲೂ ಬೆಲೆಯನ್ನು ಕಳೆದುಕೊಳ್ಳಬೇಡ ಎಂದು ಮುದ್ದುರಾಮನ ಸಲಹೆ. ಆಷಾಢ ಭೂತಿತನ ಗೌರವವನ್ನು ತರದು ಎಂಬ ಮಾತಿನಲ್ಲಿ ಪಂಚತಂತ್ರದ ಒಂದು ಕಥೆಯ ಸೂಚನೆಯಿದೆ. ಆ ಕಥೆಯಲ್ಲಿ ಒಂದು ಹಣದ ಗಂಟನ್ನು ಇಟ್ಟುಕೊಂಡಿರುವ ಸಂನ್ಯಾಸಿ ಇರುತ್ತಾನೆ. ಆ ಹಣವನ್ನು ಕದಿಯಲು ಆಷಾಢಭೂತಿ ಎಂಬ ಶಿಷ್ಯನು ಅವನ ಬಳಿ ಬಂದು ಸೇವೆಯನ್ನು ಮಾಡುವಂತೆ ನಟಿಸುತ್ತಾನೆ. ತಾನು ಅತ್ಯಂತ ಪ್ರಾಮಾಣಿಕ, ವಿದ್ಯೆ ಬಿಟ್ಟು ಬೇರೆ ಏನೂ ತನಗೆ ಬೇಕಾಗಿಲ್ಲ ಎಂಬಂತೆ ನಡೆದುಕೊಳ್ಳುತ್ತಾನೆ. ಅವನನ್ನು ನಂಬಿದ ಸಂನ್ಯಾಸಿ ಒಮ್ಮೆ ಗಂಟನ್ನು ದಡದ ಮೇಲಿರಿಸಿ ನದಿಗೆ ಸ್ನಾನಕ್ಕೆ ಹೋದಾಗ ಆಷಾಢಭೂತಿ ಹಣದ ಗಂಟಿನೊಡನೆ ಪರಾರಿಯಾಗುತ್ತಾನೆ. ಹೀಗೆ ಆಷಾಢಭೂತಿ ಕಳ್ಳ ಶಿಷ್ಯರಿಗೆಲ್ಲ ಸಂಕೇತ. ಇಂತಹ ಆಷಾಢಭೂತಿತನ ವನ್ನು ಬಿಡಬೇಕು. ಅದು ಯಾರಿಗೂ ಗೌರವವನ್ನು ತರುವುದಿಲ್ಲ ಎಂದು ಮುದ್ದುರಾಮನು ಹೇಳಿದ್ದಾನೆ. ಇದ್ದುದನ್ನು ಇದ್ದಂತೆ ಹೇಳಬೇಕು, ಬಣ್ಣ ಕಟ್ಟಿ ಇಲಿಯನ್ನು ಹುಲಿಯಂತೆ ತೋರಿಸಲು ಯತ್ನಿಸಬಾರದು. ನೈಜತೆಯ ದಾರಿಯನ್ನು ಹಿಡಿದು ನಡೆಯುವುದು ಲೇಸು – ಎಂಬುದು ಇಲ್ಲಿ ಸಾರಾಂಶ. ಜನರ ಅಪಹಾಸ್ಯವನ್ನು ಮಾಡಲು ಸುಳ್ಳು ಸುಳ್ಳಾಗಿ 'ತೋಳ ತೋಳ!' ಎಂದು ಕುರಿಗಾಹಿ ಗಟ್ಟಿಯಾಗಿ ಕೂಗಿದ. ಜನರೆಲ್ಲಾ ಓಡಿ ಬಂದರು. ಅವನು ಜೋರಾಗಿ ನಕ್ಕ. ಮುಂದೆ ಒಂದು ಸಲ ನಿಜವಾಗಿ ತೋಳ ಬಂದಿತು. ಅವನು ಕೂಗಿಕೊಂಡರೂ ಯಾರೂ ಬರಲಿಲ್ಲ. ಕುರಿಗಳು ಸತ್ತವು. ಈ ಸ್ಥಿತಿ ನಮಗೆ ಬರಬಾರದು ಎಂದರೆ ನೈಜತೆಯನ್ನು ಉಳಿಸಿಕೊಳ್ಳಬೇಕು.

ವ್ಯಕ್ತಿತ್ವ ವಿಕಸನದಲ್ಲಿ ಮನಸ್ಸು ಮುಖ್ಯ ಪಾತ್ರವನ್ನು ವಹಿಸುತ್ತದೆ. ಮನಸ್ಸನ್ನು ಕೆಡಿಸಿಕೊಂಡ ಮನುಷ್ಯ ಏನನ್ನೂ ಸಾಧಿಸಲಾರ. ಮನಸ್ಸನ್ನು ದೃಢಪಡಿಸಿಕೊಂಡ ಮನುಷ್ಯ ಏನನ್ನು ಬೇಕಾದರೂ ಸಾಧಿಸಬಹುದು. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' (ಬಂಧನಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣ) ಈ ಮನಸಿನ ಬಗೆಗೆ ಒಮ್ಮೆ ಹೇಳಿದ್ದಾನೆ ಮುದ್ದುರಾಮ–

ಏನ ನೀ ನೆನೆಯುವೆಯೋ ಇದೆ ಅಂತೆ ಈ ಮನಸು
ಮಾಡುವೇತಕೆ ಇದನು ನೀ ಕಸದ ಬುಟ್ಟಿ?
ಚಿಂತೆಮಡುವಿನಲೇಕೆ ಮನವ ನೂಕುವೆ ಬರಿದೆ
ಅಂದಗೊಳಿಸೋ ಮನಸ ಮುದ್ದುರಾಮ

ನೀನು ಏನನ್ನು ನೆನೆಯುವೆಯೋ, ಏನನ್ನು ಆಲೋಚಿಸುವೆಯೊ, ಏನನ್ನು ಕಲ್ಪಿಸಿಕೊಳ್ಳುವೆಯೊ ಹಾಗೆ ಆಕಾರವನ್ನು ಪಡೆಯುತ್ತದೆ. ಎಷ್ಟು ತುಂಬುವೆವೋ ಅಷ್ಟು ದೊಡ್ಡದಾಗುತ್ತದೆ. ಅದರಲ್ಲಿ ಏನನ್ನಾದರೂ ಎಷ್ಟು ಬೇಕಾದರೂ ತುಂಬಬಹುದೆಂದು ಸಿಕ್ಕಿದುದನ್ನೆಲ್ಲ ಅದರಲ್ಲಿ ಹಾಕಿದರೆ ಅದು ಕಸದ ಬುಟ್ಟಿಯಂತಾಗುತ್ತದೆ. ದೊಡ್ಡ ತಿಪ್ಪೆಯಂತೆ, ನಗರದ ಕಸದ ರಾಶಿಯಂತೆ ಬೆಳೆದು ನಾರತೊಡಗುತ್ತದೆ. ಹಾಗೇಕೆ ಮಾಡಬೇಕು. ಅನಾವಶ್ಯಕವಾದ, ಅಪ್ರಯೋಜಕವಾದ ವಿಷಯಗಳನ್ನು ಮನಸ್ಸೆಂಬ ಬುಟ್ಟಿಯಲ್ಲಿ ತುರುಕುವುದೇಕೆ? ಈ ಚಿಂತೆಯೆಂಬುವುದಿದೆಯಲ್ಲ, ಅದು ನದಿಯ ಮಡುವಿನಂತೆ. ಅದರ ಆಳ ಗೊತ್ತಿಲ್ಲ. ಅದರಲ್ಲಿ ಮುಳುಗಿದವರು ಜೀವಂತವಾಗಿ ಎದ್ದು ಬರುವುದಿಲ್ಲ. ಶವವಾಗಿ ತೇಲುತ್ತಾರೆ ಅಷ್ಟೆ. ಚಿಂತೆಯ ಮಡುವಿಗೆ ಮನಸ್ಸನ್ನು ಬಲವಂತವಾಗಿ ನೂಕಿದರೆ ಅದರ ಗತಿಯೇನು? ಚಿಂತೆಯಲ್ಲಿ ಮುಳುಗಿದ ಮನಸ್ಸು ಕೊರಗುತ್ತದೆ, ಸೊರಗುತ್ತದೆ. ಆದ್ದರಿಂದ ಅದರಲ್ಲಿ ಮನಸ್ಸನ್ನು ದಬ್ಬಬಾರದು. ರಚನಾತ್ಮಕವಾದ ಚಿಂತನೆಗಳಲ್ಲಿ ಮನಸ್ಸನ್ನು ತೊಡಗಿಸಿ ಅದು ನಲಿಯುವಂತೆ ಮಾಡು. ಹಾಗೆ ಆ ಮನಸ್ಸು ಅಂದವಾಗುತ್ತದೆ, ಚಂದವಾಗುತ್ತದೆ. ಭಗವಚ್ಚಿಂತನೆಯಲ್ಲಿ ಮನಸ್ಸು ಪ್ರಫುಲ್ಲವಾಗುತ್ತದೆ. ಪರೋಪಕಾರದ ಚಿಂತನೆಯಲ್ಲಿ ಉಲ್ಲಾಸದಿಂದ ತುಂಬುತ್ತದೆ. ಪರರಿಗೆ ಹಾನಿಯನ್ನುಂಟು ಮಾಡುವ ಚಿಂತೆ ಕ್ಯಾನ್ಸರಿನಂತೆ ತನ್ನನ್ನೂ ಇತರರನ್ನೂ ಹಿಂಸಿಸುತ್ತದೆ. ಆದ್ದರಿಂದ ಮುದ್ದುರಾಮನ ಸಂದೇಶ–ಅಂದಗೊಳಿಸೋ ಮನಸ–ಎಂಬುದಾಗಿದೆ.

ನಾಡು ಬೆಳಗಿದ ನಾಲ್ವಡಿ




ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಂತೆ ದೇಶದ ಎಲ್ಲಾ ಮಹಾರಾಜರುಗಳೂ ಇದ್ದಿದ್ದರೆ ನಮಗೆ ಸ್ವಾತಂತ್ರ್ಯವೇ ಬೇಕಿರಲಿಲ್ಲ ಇದಕ್ಕಾಗಿ ಹೋರಾಟದ ಅಗತ್ಯವೂ ಇರಲಿಲ್ಲ! – ಮಹಾತ್ಮಗಾಂಧಿ

ಅದು 1910, ನವರಾತ್ರಿಯ ಸಂದರ್ಭ. ಯೂರೋಪಿಯನ್ನರಿಗಾಗಿ ಮೈಸೂರು ಅರಮನೆಯಲ್ಲಿ ವಿಶೇಷ ದರ್ಬಾರು ನಡೆಯುತ್ತಿತ್ತು. ದಿವಾನರಾದಿಯಾಗಿ ಎಲ್ಲಾ ಗಣ್ಯರೂ ಕೆಳಗೆ ಕೂರುವುದು ಮತ್ತು ಯೂರೋಪಿಯನ್ನರು ಹಾಗೂ ಅತಿಥಿಗಳು ಮಾತ್ರವೇ ವಿಶೇಷವಾದ ಕುರ್ಚಿಯ ಮೇಲೆ ಕೂರುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಆದರೆ ಅಂದಿನ ಮಹಾರಾಜರಿಗೆ ಈ ತಾರತಮ್ಯತೆ ಸರಿ ಎನ್ನಿಸಲಿಲ್ಲ. ತಕ್ಷಣವೇ ತಲೆತಲಾಂತರದಿಂದ ನಡೆದು ಬಂದಿದ್ದ ಈ ತಾರತಮ್ಯಕ್ಕೆ ತಿಲಾಂಜಲಿಯಿತ್ತು ಎಲ್ಲರೂ ಸಮಾನವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಗೆ ನಾಂದಿ ಹಾಡಿದರು. ಇದು ಬಹುದೊಡ್ಡ ವಿಷಯವಾಗಿ, ಮಹಾರಾಜರ ಸಮಾನ ಸಮಾಜದ ಪ್ರಗತಿ ಪರ ದೃಷ್ಟಿಕೋನವನ್ನು ಇಡೀ ದೇಶ ಮನಸಾರೆ ಮೆಚ್ಚಿಕೊಂಡಾಡಿತ್ತು. ಇದೇ ಮಹಾರಾಜರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂದು ಅರಮನೆಯೊಳಗಿನ ದರ್ಬಾರಿಗೆ ದಲಿತರಿಗೆ ಪ್ರವೇಶವಿಲ್ಲದಂತಿದ್ದ ಕಟ್ಟುಪಾಡನ್ನು ತೊಡೆದು ಹಾಕಿದರು. ಅಂತೆಯೇ 1936ರಲ್ಲಿ ನಡೆದ ದಸರಾ ಮಹೋತ್ಸವದಲ್ಲಿ ದಲಿತರು ಎಲ್ಲಾ ಸಂದರ್ಭಗಳಲ್ಲೂ ಪಾಲ್ಗೊಳ್ಳುವ ಅವಕಾಶ ಕಲ್ಪಿಸಿ, ಮಾನವ ಕುಲ ತಾನೊಂದೇ ಎಂದು ಜಗತ್ತಿಗೆ ಸಾರಿ ಸಮಾನತೆಯ ಬೆಳಕು ಚೆಲ್ಲಿದ್ದರು. ಆ ಮಹಾರಾಜರೇ **ನಾಲ್ವಡಿ ಕೃಷ್ಣರಾಜ ಒಡೆಯರ್!**

ದೇಶದ ಯಾವ ಸಂಸ್ಥಾನದಲ್ಲೂ ಅಂದು ಇರದಿದ್ದ ಸಮಾನ ನೀತಿ ಅಂದಿನ ಕಾಲದಲ್ಲೇ ಇವರಲ್ಲಿದ್ದು ಸಮಾನತೆಯ ಹರಿಕಾರರಾಗಿ ಎಲ್ಲ ರಿಗೂ ಮಾದರಿಯಾಗಿದ್ದ ಮಹಾರಾಜರಾಗಿ ದ್ದರಿವರು. ಇದಕ್ಕಾಗಿಯೇ ಇವರನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು 'ರಾಜರ್ಷಿ' ಎಂದು ಕೊಂಡಾಡಿದ್ದಾರೆ. ಹಾಗೆಯೇ ದಸರಾ ದರ್ಬಾರಿಗೆ ದಲಿತರಿಗೆ ಮುಕ್ತ ಅವಕಾಶ ನೀಡಿ ಅಸ್ಪೃಶ್ಯತೆ ಅಳಿಸಲು ಮುಂದಾದ ಇವರ 'ಸಮಾನ ನೀತಿಜ್ಞ' ಆಡಳಿತವನ್ನು 1938ರ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ವಿಶೇಷ ಸಂಪುಟದಲ್ಲಿ ಶ್ಲಾಘಿಸಲಾಗಿದೆ. ದಿವಾನರಾಗಿ ಮಿರ್ಜಾ ಇಸ್ಮಾಯಿಲ್‌ರವರು ಪ್ರತಿನಿಧಿಸಿದ್ದ,



ನಾಲ್ವಡಿ ಕೃಷ್ಣರಾಜ ಒಡೆಯರ್

1930ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ನಾಲ್ವಡಿಯವರ ಆಡಳಿತವು ಇಡೀ ದೇಶದಲ್ಲಿಯೇ ಉತ್ತಮ ರಾಜ್ಯವೆಂದು ಪ್ರಶಂಸೆಗೊಳಗಾಗಿತ್ತು. ಸಮಕಾಲೀನ ಮಹಾರಾಜರಾಗಿದ್ದ ಬರೋಡಾದ ಸಯ್ಯಾಜಿರಾವ್ ಗಾಯಕವಾಡ್ ಮತ್ತು ಕೊಲ್ಲಾಪುರದ ಶಾಹು ಮಹಾರಾಜರು ನಾಲ್ವಡಿಯವರಂತೆಯೇ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದು, ಜನಪರ ಕಾಳಜಿವುಳ್ಳ ಸಮಾನಮನಸ್ಕರಾಗಿದ್ದರು.

ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಿಸಿದ್ದು 1884ರ ಜೂನ್ 4ರಂದು. ತಂದೆ ಹತ್ತನೆಯ ಚಾಮರಾಜ ಒಡೆಯರ್, ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿ ವಿಲಾಸ ಸನ್ನಿಧಾನರು. ಇವರ ಜೇಷ್ಠಪುತ್ರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹುಟ್ಟಿದ್ದು 1886ರಲ್ಲಿ ಬೆಂಕಿಗೆ ಆಹುತಿಯಾದ ಮೈಸೂರಿನ ಹಿಂದಿನ ಹಳೆಯ ಅರಮನೆಯಲ್ಲಿ. ನಂತರದ ದಿನಗಳಲ್ಲಿ ಇವರ ತಾಯಿ ವಾಣಿವಿಲಾಸ್ ಸನ್ನಿಧಿಯವರೇ ಈಗಿರುವ ಜಗದ್ವಿಖ್ಯಾತ ಮೈಸೂರು ಅರಮನೆಯನ್ನು ಭವ್ಯವಾಗಿ ನಿರ್ಮಿಸಿದರು. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಅಭೂತಪೂರ್ವ ಸಾಧನೆಯೂ ಹೌದು! ನಾಲ್ವಡಿಯವರ ಒಡಹುಟ್ಟಿದವರು ಜಯಲಕ್ಷ್ಮಮ್ಮಣ್ಣಿ ಚೆಲುವಾಜಮ್ಮಣ್ಣಿ ಮತ್ತು ಕೃಷ್ಣಾಜಮ್ಮಣ್ಣಿ ಎಂಬ ಮೂವರು ತಂಗಿಯರು. ಓರ್ವ ತಮ್ಮ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್. ಒಟ್ಟು ಐದು ಮಂದಿ ಮಕ್ಕಳಿವರು.

ನಾಲ್ವಡಿ ಕೃಷ್ಣರಾಜ ಒಡೆಯರ್, ಬಾಲಕರಾಗಿದ್ದಾಗಲೇ

> ಮೈಸೂರು ನಗರಕ್ಕೆ ಅರಮನೆಗಳ ನಗರಿ ಎಂಬ ಖ್ಯಾತಿ ಬರಲು ಇವರು ಬಹುಮುಖ್ಯ ಕಾರಣರು. ಇಂದಿಗೂ ಒಂದೊಂದು ಅರಮನೆಯೂ ಒಂದೊಂದು ಕಥೆ ಹೇಳುತ್ತಾ ಮೈಸೂರಿನಲ್ಲಿ ಮಿನುಗುತ್ತಿರುವ ಲಲಿತಮಹಲ್ ಅರಮನೆ, ಚೆಲುವಾಂಬ ವಿಲಾಸ್ ಅರಮನೆ, ಜಯಲಕ್ಷ್ಮಿ ವಿಲಾಸ್ ಅರಮನೆ, ರಾಜೇಂದ್ರವಿಲಾಸ್ ಅರಮನೆ, ಕಾರಂಜಿ ವಿಲಾಸ್ ಅರಮನೆಗಳು ನಾಲ್ವಡಿ ಅವರು ನಿರ್ಮಿಸಿದ್ದೇ ಆಗಿವೆ. ಮೈಸೂರು ಮತ್ತು ಇದರ ಸುತ್ತಮುತ್ತ ಪುಟ್ಟ ಪುಟ್ಟ ಅರಮನೆಗಳಂತೆ ಕಂಗೊಳಿಸುತ್ತಿರುವ ಪುರಭವನ, ಕ್ರಾಫರ್ಡ್ ಭವನ, ವಿಶ್ವೇಶ್ವರಯ್ಯ ಕಟ್ಟಡ, ಲ್ಯಾನ್ಸ್‌ಡೌನ್ ಕಟ್ಟಡ, ದೊಡ್ಡ ಗಡಿಯಾರ, ಜನತಾ ಬಜಾರ್ ಕಟ್ಟಡ, ಗನ್‌ಹೌಸ್, ಮಹಾನಗರಪಾಲಿಕೆ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ವಾಣಿ ವಿಲಾಸ್ ಮಾರುಕಟ್ಟೆ ಮುಂತಾದ ಭವ್ಯ ಭವನಗಳು ಇವರ ಕೊಡುಗೆಯೇ.

ಅವರಿಗೆ 1895 ಫೆಬ್ರವರಿ 2ರಂದು ಪಟ್ಟಾಭಿಷೇಕವಾಯಿತು. ಇವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಅಂದಿನ ವೈಸ್‌ರಾಯ್ ಮತ್ತು ಗೌರ್‍ನರ್ ಜನರಲ್ ಆಗಿದ್ದ ಎಲ್ಗಿನ್ ಅವರು ತಾಯಿ ಮಹಾರಾಣಿ ವಾಣಿ ವಿಲಾಸರಿಗೆ ಮೈಸೂರು ಸಂಸ್ಥಾನದ ರಾಜಪ್ರತಿನಿಧಿ (ರೀಜೆಂಟ್)ಯಾಗಿ ಅಧಿಕಾರ ವಹಿಸಿಕೊಟ್ಟರು. ಭಾರತೀಯ ನಾಗರಿಕ ಸೇವಾ (ಐಸಿಎಸ್) ಅಧಿಕಾರಿಯಾದ ಸರ್ ಸ್ಟುವರ್ಟ್ ಮಿಟ್ ಫೋರ್ಡ್ ಫ್ರೇಸರ್ ಅವರು ಬಾಲಕ ನಾಲ್ವಡಿ ಮಹಾರಾಜರ ಟ್ಯೂಟರ್ ಆಗಿ 1896ರಲ್ಲಿ ನೇಮಕವಾದರು. ಈ ಸಂದರ್ಭದಲ್ಲಿ 1895ರಿಂದ 1902ರ ತನಕ ಏಳು ವರ್ಷಗಳ ಕಾಲ ಇವರ ತಾಯಿ ಮಹಾರಾಣಿ ವಾಣಿವಿಲಾಸರು ಕೆಲವು ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದ್ದರು. ನಾಲ್ವಡಿ ಅವರು ಶಿಕ್ಷಣ ಹಾಗೂ ಸಕಲ ಕಲೆಗಳ ಸಂಪನ್ನರಾಗಿ 1902ರ ಆಗಸ್ಟ್ 8ರಂದು ವೈಸ್‌ರಾಯ್ ಲಾರ್ಡ್ ಕರ್ಜನ್ ಅವರಿಂದ ಆಡಳಿತದ ಪೂರ್ಣಾಧಿಕಾರ ತೆಗೆದುಕೊಂಡರು. ಅಲ್ಲಿಂದ ಶುರುವಾಯಿತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಸುವರ್ಣ ಕಾಲ. ಸೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಕೂಡ ಇವರಿಗೆ ಒತ್ತಾಸೆಯಾಗಿ ನಿಂತರು. ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ಇವರ ಕಾಲದಲ್ಲೇ ಹೆಚ್ಚು. ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು.

ಮತದಾನದ ಸಮಯದಲ್ಲಿ ಬೆರಳಿಗೆ ಹಚ್ಚುವ ಬಣ್ಣವನ್ನು ತಯಾರಿಸುವ ದೇಶದ ಏಕೈಕ ಕಾರ್ಖಾನೆಯಾದ ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯನ್ನು 1937ರಲ್ಲಿ ಸ್ಥಾಪಿಸಿದ ಮತ್ತು ಆಗಿನ ಕಾಲಕ್ಕೆ ಇಡೀ ದೇಶದಲ್ಲೇ ಬೃಹತ್ ವಾಣಿಜ್ಯ ಸಂಕೀರ್ಣವೆಂದು ಕರೆಯಲಾದ 882 ಅಡಿ ಉದ್ದ ಹಾಗೂ 180 ಅಡಿ ಅಗಲದ 726 ಮಳಿಗೆಗಳುಳ್ಳ ದೇವರಾಜ ಮಾರುಕಟ್ಟೆಯನ್ನು 1903ರಲ್ಲಿ ನಿರ್ಮಿಸಿದ ಕೀರ್ತಿ ಇವರದು. ಅಂತೆಯೇ 1906ರಲ್ಲಿ ಚಾಮರಾಜೇಂದ್ರ ಇಂಜಿನಿಯರಿಂಗ್ ಸಂಸ್ಥೆ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್, 1916ರಲ್ಲಿ ಶ್ರೀಗಂಧದೆಣ್ಣೆ ಕಾರ್ಖಾನೆ, 1930ರಲ್ಲಿ ಮೈಸೂರು ಮೆಡಿಕಲ್ ಕಾಲೇಜು, 1921ರಲ್ಲಿ ತಮ್ಮ ಸೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಹೆಸರಿನಲ್ಲಿ ಪಿ.ಕೆ. ಸ್ಯಾನಿಟೋರಿಯಂ ನಿರ್ಮಿಸಿದ ಗರಿಮೆ ಕೂಡ ಇವರದೇ. ಇವಿಷ್ಟೇ ಸಾಕು, ಸಾವಿರ ಉದಾಹರಣೆ ನೀಡಬೇಕಾಗಿಲ್ಲ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗಳನ್ನು ಸಾರಲು. ಆಶ್ಚರ್ಯವೆಂದರೆ 1903ರಲ್ಲೇ ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಗಾಗಿ ದೇಶದಲ್ಲೇ ಮೊಟ್ಟಮೊದಲಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಇವರು ಸ್ಥಾಪಿಸಿದ್ದರು. 1914ರಲ್ಲಿ 'ಎಕನಾಮಿಕ್ ಜರ್ನಲ್' ಎಂಬ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆರಂಭಿಸಿದ್ದ ಇವರು ಪತ್ರಿಕೋದ್ಯಮಕ್ಕೂ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. 1900ರಲ್ಲಿ ಕಾಥೇವಾಡದ ರಾಜಕುಮಾರಿ ಪ್ರತಾಪ ಕುಮಾರಿ ಬಾಯಿ ಅವರೊಡನೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಅದ್ದೂರಿ ವಿವಾಹ ಸಮಾರಂಭದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದ ನಾಲ್ವಡಿ ಅವರು ತಮ್ಮ ಆಳ್ವಿಕೆಯಲ್ಲಿ 25 ವರ್ಷ ಪೂರೈಸಿದ ದ್ಯೋತಕವಾಗಿ ರಜತ ಮಹೋತ್ಸವವನ್ನು ಅಷ್ಟೇ ಭವ್ಯವಾಗಿ ಆಚರಿಸಿಕೊಂಡಿದ್ದರು. 'ರಾಜ ಪ್ರತ್ಯಕ್ಷ ದೈವ' ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3ರಂದು ಇನ್ನಿಲ್ಲವಾದರೂ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ವಿಶ್ವ ಹಾಲು ದಿನಾಚರಣೆ

ಸಾರ್ವಜನಿಕರ ಗಮನ ಸೆಳೆದ ಹಾಲಿನ ಅಂಬಾರಿ ಮೆರವಣಿಗೆ

ಜಂಬೂಸವಾರಿ ನೆನಪಿಸಿದ ವೈಭವ, ರಸ್ತೆ ಬದಿ ನಿಂತು ವೀಕ್ಷಣೆ

● ಸಾಕಾನೆ ಮೇಲೆ ನಂದಿನಿ ಹಾಲಿನ ಉತ್ಪನ್ನಗಳ ಪ್ರತಿರೂಪ ಮೆರವಣಿಗೆ ● ನಂದಿನಿ ಉತ್ಪನ್ನಗಳ ಮೇಲೆ ಶೇ.15ರಷ್ಟು ರಿಯಾಯಿತಿ ● ಬೇರೆ ಉತ್ಪನ್ನಗಳ ವ್ಯಾಮೋಹ ಬಿಟ್ಟು ನಂದಿನಿ ಉತ್ಪನ್ನ ಬಳಸಿ



ಗಮನ ಸೆಳೆದ ಅದ್ದೂರಿ ಮೆರವಣಿಗೆ.

ಮೈಸೂರು, ಜೂ.3(ಜಿಎ)– ವಿಶ್ವ ಹಾಲು ದಿನದ ಅಂಗವಾಗಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ(ಮೈಮುಲ್) ಆನೆಯ ಮೇಲೆ 'ಹೈನೋದ್ಯಮದ ಸಂಭ್ರಮವನ್ನು ಸಂಭ್ರಮಿಸೋಣ' ಎಂಬ ಧ್ಯೇಯದೊಂದಿಗೆ ಹಾಲಿನ ಉತ್ಪನ್ನಗಳು ಮತ್ತು ಹಾಲಿನ ಮಹತ್ವ ಅದರ ಅನುಕೂಲಗಳ ಕುರಿತು ಪ್ರಚಾರ ಮಾಡುವ ಮೆರವಣಿಗೆಯಲ್ಲಿ ಹಾಲಿನ ಅಂಬಾರಿ ಮೈಸೂರಿಗರ ಗಮನ ಸೆಳೆಯಿತು.

ಮೈಸೂರಿನ ಆಲನಹಳ್ಳಿಯ ಮೈಮುಲ್‌ನಿಂದ ವಿಶ್ವ ಹಾಲು ದಿನದ ಅಂಗವಾಗಿ ಮೊಟ್ಟ ಮೊದಲ ಬಾರಿಗೆ ತುಮಕೂರು ಜಿಲ್ಲೆಯ ನೊಣವಿನಕೆರೆಯ ಕಾಡು ಸಿದ್ದೇಶ್ವರ ಮಠದ ಸಾಕಾನೆಯ ಮೇಲೆ ನಂದಿನಿ ಹಾಲಿನ ಉತ್ಪನ್ನಗಳ ಪ್ರತಿರೂಪವನ್ನು ಅಂಬಾರಿ ಮೇಲೆ ಇರಿಸಿ ಆನೆಯೊಂದಿಗೆ ಮೆರವಣಿಗೆ ಮಾಡಲಾಯಿತು.

ಆಲನಹಳ್ಳಿ ಕೇಂದ್ರದಿಂದ ಹೊರಟ ಹಾಲಿನ ಅಂಬಾರಿ ಮೆರವಣಿಗೆಗೆ ಅಧ್ಯಕ್ಷ ಆರ್.ಚೆಲುವರಾಜು ಮತ್ತು ಆಡಳಿತ ಮಂಡಳಿಯವರು ಬಲೂನ್ ಹಾರಿ ಬಿಡುವ ಮೂಲಕ ಚಾಲನೆ ನೀಡಿದರು. ಬಳಿಕ ಟೆರಿಷಿಯನ್ ಕಾಲೇಜು ವೃತ್ತ, ಬನ್ನೂರು ಮುಖ್ಯರಸ್ತೆಯ ನೂತನ ಜಿಲ್ಲಾಧಿಕಾರಿ ಕಚೇರಿ ಮಾರ್ಗವಾಗಿ ನಜರ್‌ಬಾದ್‌ನ ಶಿಕ್ಷರ ಭವನದವರೆಗೆ ಮೆರವಣಿಗೆ ನಡೆಯಿತು.

ಈ ವೇಳೆ ರಸ್ತೆಯ ಅಕ್ಕ-ಪಕ್ಕದಲ್ಲಿ ನಿಂತಿದ್ದ ಜನರೆಲ್ಲರೂ ಆನೆಯನ್ನು ವೀಕ್ಷಿಸಿ ಜಂಬೂ ಸವಾರಿ ನೆನಪಿಸಿಕೊಂಡರಲ್ಲದೆ, ವಿಶ್ವ ಹಾಲಿನ ದಿನದ ಬಗ್ಗೆಯೂ ಅರಿಯುವಂತಾಯಿತು. ಆ ಮೂಲಕ ಮೆರವಣಿಗೆಯನ್ನು ಜಂಬೂ ಸವಾರಿ ಮಾದರಿಯಲ್ಲಿ ಎಲ್ಲರೂ ಸಂಭ್ರಮಿಸಿದರು.



ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ(ಮೈಮುಲ್) ವಿಶ್ವ ಹಾಲು ದಿನದ ಅಂಗವಾಗಿ ಆನೆಯ ಮೇಲೆ 'ಹೈನೋದ್ಯಮದ ಸಂಭ್ರಮವನ್ನು ಸಂಭ್ರಮಿಸೋಣ' ಎಂಬ ಧ್ಯೇಯದೊಂದಿಗೆ ಹಾಲಿನ ಉತ್ಪನ್ನಗಳು ಮತ್ತು ಹಾಲಿನ ಮಹತ್ವ, ಅದರ ಅನುಕೂಲಗಳ ಕುರಿತು ಪ್ರಚಾರ ಮಾಡುವ ಮೆರವಣಿಗೆಯಲ್ಲಿ ಹಾಲಿನ ಅಂಬಾರಿ ಮೈಸೂರಿಗರ ಗಮನ ಸೆಳೆಯಿತು.

ನಂತರ ಶಿಕ್ಷಕರ ಭವನದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿ, ನಂದಿನಿ ಗ್ರಾಹಕರಿಗೆ ಶೇ.15ರಷ್ಟು ರಿಯಾಯಿತಿಯಡಿಯಲ್ಲಿ ಹಲವು ಉತ್ಪನ್ನಗಳನ್ನು ನೀಡಲಾಗುತ್ತಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು.

ನಂದಿನಿಯ 68 ಉತ್ಪನ್ನಗಳ ಜೊತೆಗೆ ಅನೇಕ ಉತ್ಪನ್ನಗಳನ್ನು ಬಿಡುಗಡೆ ಮಾಡಿದ್ದೇವೆ. ಇಡೀ ದೇಶದಲ್ಲಿ ನಂದಿನಿ ಮಾರಾಟ ಮಾಡುತ್ತಿದ್ದೇವೆ. ದೇಶದಲ್ಲಿ ಎಷ್ಟು ಉತ್ಪನ್ನಗಳಿವೆಯೋ ಅದೆಲ್ಲದಕ್ಕಿಂತಲೂ ಕಡಿಮೆ ದರದಲ್ಲಿ ನಂದಿನಿ ಹಾಲಿನ ದರವಿದೆ. ಯಾವುದೇ ಅತಿಯಾದ ಲಾಭದ ಆಸೆ ಇಲ್ಲದೆ, ಗ್ರಾಹಕರು ಹಾಗೂ ರೈತರ ಹಿತದೃಷ್ಟಿಯಿಂದ ಕೆಎಂಎಫ್ ನಿಭಾಯಿಸಿಕೊಂಡು ಹೋಗುತ್ತಿದೆ ಎಂದರು.

ಎಲ್ಲರೂ ನಂದಿನಿ ಉತ್ಪನ್ನಗಳನ್ನು ಬಳಸಬೇಕು. ಇದಕ್ಕಾಗಿಯೇ ಇಂದಿನಿಂದ ಗ್ರಾಹಕರಿಗಾಗಿ ಮ್ಯಾಂಗೋ ಲಸ್ಸಿ, ರಾಗಿ ಅಂಬಲಿ, ಬಯೋಟಿಕ್ ಮಜ್ಜಿಗೆ, ಪ್ರೊಬಯೋಟಿಕ್ ಮೊಸರು, ಬರ್ಫಿ, ಸಮೃದ್ಧಿ ಹಾಲು, ಸಿಹಿ ಲಸ್ಸಿ, ಗೋಧಿ ಲಡ್ಡು ಇಷ್ಟು ಉತ್ಪನ್ನಗಳ ಮೇಲೆ ಶೇ.15ರಷ್ಟು ರಿಯಾಯಿತಿ ನೀಡುತ್ತಿದ್ದೇವೆ. ಸಾರ್ವಜನಿಕರು ಹಾಗೂ ಗ್ರಾಹಕರು ಇದರ ಸದುಪಯೋಗ ಪಡಿಸಿಕೊಂಡು ಬೇರೆ ಉತ್ಪನ್ನಗಳ ಮೇಲೆ ವ್ಯಾಮೋಹ ಆಗದೇ ನಂದಿನಿ ಉತ್ಪನ್ನಗಳನ್ನೇ ಹೆಚ್ಚೆಚ್ಚು ಬಳಸಿ ಎಂದು ತಿಳಿಸಿದರು.

ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯಕ್ ಮಾತನಾಡಿ, ಈಗಾಗಲೇ ಮೈಮುಲ್ ರೈತ ಹಾಗೂ ಗ್ರಾಹಕ ಸ್ನೇಹಿಯಾಗಿ ಅನೇಕ ರಿಯಾಯಿತಿಗಳನ್ನು ಘೋಷಣೆ ಮಾಡಿದೆ. ಈಗ ನೂತನ ಉತ್ಪನ್ನಗಳನ್ನು ಸಹ ವಿಶ್ವ ಹಾಲು ದಿನದಂದು ಬಿಡುಗಡೆ ಮಾಡಿದ್ದು, ಗ್ರಾಹಕರು ಇದರ ಸದುಪಯೋಗಪಡಿಸಿಕೊಂಡು ರೈತರನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಪಶುವೈದ್ಯಾಧಿಕಾರಿ ಡಾ.ಮಂಜುನಾಥ್, ಅಪೋಲೋ ಆಸ್ಪತ್ರೆ ಪ್ರಸೂತಿ ತಜ್ಞೆ ಕವಿತಾ, ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಪೌಷ್ಟಿಕ ತಜ್ಞೆ ಶಶಿಕಲಾ ಹಾಲಿನ ಮಹತ್ವ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂ.ಪ್ರಕಾಶ್, ಕೆ.ಈರೇಗೌಡ, ದ್ರಾಕ್ಷಾಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ.ನಾಗರಾಜು, ನೀಲಾಂಬಿಕೆ ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಗುರುಸ್ವಾಮಿ ಬಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್, ಪಶುಸಂಗೋಪನಾ ಇಲಾಖೆ ನಿರ್ದೇಶಕ ಮತ್ತು ಮೈಮುಲ್ ಪದನಿಮಿತ್ತ ನಿರ್ದೇಶಕ ಡಾ.ನಾಗರಾಜು, ಒಕ್ಕೂಟದ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇನ್ನಿತರರು ಉಪಸ್ಥಿತರಿದ್ದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನದ ಪ್ರಯುಕ್ತ ರಕ್ತದಾನ ಶಿಬಿರ



ಹೆಚ್.ಡಿ.ಕೋಟೆ, ಜೂ. 3– ಮೈಸೂರಿನ ಹಾರ್ಟ್ ಸಂಸ್ಥೆ, ಹೆಚ್.ಡಿ.ಕೋಟೆಯ ದೀಪು ಅರಸ್ ಪಾರ್ಥ ಬ್ರಿಕ್ಸ್ ಮಾಲಿಕರು, ಆರೋಗ್ಯ ಇಲಾಖೆ ಹೆಚ್.ಡಿ.ಕೋಟೆ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಾಳೆ (ಜೂ.4) ಬೆಳಗ್ಗೆ 9.30 ರಿಂದ 1 ಗಂಟೆಯವರೆಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮದಿನದ ನೆನಪಿನಾರ್ಥವಾಗಿ ಹೆಚ್.ಡಿ. ಕೋಟೆ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿರುವ ಆಯುರ್ವೇದ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಮಾಹಿತಿಗಾಗಿ ಸಂಪರ್ಕಿಸಿ. 8970901102

ವಿಮಾನ ನಿಲ್ದಾಣ ಸಲಹಾ ಸಮಿತಿಗೆ ನಾಮ ನಿರ್ದೇಶನ

ಮೈಸೂರು, ಜೂ.3–ಮಂಡ್ಯದ ಸಾಮಾಜಿಕ ಕಾರ್ಯಕರ್ತ ಹಾಗೂ ಅಖಿಲ ಭಾರತ ಹಿಂದೂ ಮಹಾಸಭಾದ ಕರ್ನಾಟಕ ರಾಜ್ಯ ಯುವ ಅಧ್ಯಕ್ಷ ಬಿ.ಆರ್.ರವಿ



(ಬಸರಾಳು ರುದ್ರಪ್ಪ ರವಿ) ಅವರನ್ನು ಮೈಸೂರು ವಿಮಾನ ನಿಲ್ದಾಣದ ಸಲಹಾ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.


ಈ ನಾಮನಿರ್ದೇಶನ ಎರಡು ವರ್ಷಗಳಾಗಿದ್ದು, ನಾಗರಿಕ ವಿಮಾನಯಾನ ಮಾರ್ಗಸೂಚಿಯನ್ವಯ ನಿಯಮ–ನಿಬಂಧನೆಗೆ ಒಳಪಟ್ಟಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	106.05 ಅಡಿ
ಒಳಹರಿವು	9845 ಕ್ಯೂಸೆಕ್
ಹೊರಹರಿವು	799 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಮಂಗಳವಾರ	2281 ಅಡಿ
ಒಳಹರಿವು	6500 ಕ್ಯೂಸೆಕ್
ಹೊರಹರಿವು	8000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2851.13 ಅಡಿ
ಒಳಹರಿವು	1541 ಕ್ಯೂಸೆಕ್
ಹೊರಹರಿವು	100 ಕ್ಯೂಸೆಕ್

ಕುಡಿತ ಬಿಟ್ಟು ಸ್ವಾಭಿಮಾನಿಗಳಾಗಿ ಬದುಕಿ

ಇತಿಹಾಸಕಾರ ಧರ್ಮೇಂದ್ರ ಕುಮಾರ್ ಸಲಹೆ



ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಬಸವಮಾರ್ಗ ವ್ಯಸನಮುಕ್ತ ಕೇಂದ್ರ ಆಯೋಜಿಸಿದ್ದ 10 ದಿನಗಳ ಕುಡಿತ ಬಿಡಿಸುವ ಉಚಿತ ಶಿಬಿರಕ್ಕೆ ಇತಿಹಾಸಕಾರ ಧರ್ಮೇಂದ್ರ ಕುಮಾರ್ ಅರೇಹಳ್ಳಿ ಚಾಲನೆ ನೀಡಿದರು. ಬಸವಮಾರ್ಗ ಸಂಸ್ಥೆ ಸಂಸ್ಥಾಪಕ ಬಸವರಾಜ್, ಲೇಖಕಿ ಡಾ.ಶ್ವೇತಾ ಮಡಪ್ಪಾಡಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.3(ಬಿಎಲ್‌ಯು)– ಕುಡಿತಕ್ಕೆ ದಾಸರಾಗುವ ಸ್ಥಳೀಯರು ಕೆಲಸಕ್ಕೆ ಹೋಗದ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಿಂದ ಬಂದವರು ಕೆಲಸ ಮಾಡುತ್ತಿದ್ದಾರೆ. ಈಗಲಾದರೂ ಕುಡಿತ ಬಿಟ್ಟು ಸ್ವಾಭಿಮಾನಿಗಳಾಗಿ ಬದುಕಿ ಎಂದು ಇತಿಹಾಸಕಾರ ಧರ್ಮೇಂದ್ರ ಕುಮಾರ್ ಅರೇಹಳ್ಳಿ ಸಲಹೆ ನೀಡಿದರು.

ನಗರದ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಬಸವಮಾರ್ಗ ವ್ಯಸನಮುಕ್ತ ಕೇಂದ್ರ ಆಯೋಜಿಸಿದ್ದ 10 ದಿನಗಳ ಕುಡಿತ ಬಿಡಿಸುವ ಉಚಿತ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಪರಾಧಿಗಳು ಹಾಗೂ ಭ್ರಷ್ಟರನ್ನಾದರೂ ಸಮಾಜ ನಂಬಿ ಕ್ಷಮಿಸುತ್ತದೆ. ಆದರೆ ಕುಡಿತಕ್ಕೆ ದಾಸರಾದವರನ್ನು ಈ ಸಮಾಜ ನಂಬಿದ ಹಾಗೂ ಕ್ಷಮೆ ನೀಡಿದ ಉದಾಹರಣೆಗಳಿಲ್ಲ. ಈ ಹಿನ್ನೆಲೆಯಲ್ಲಿ ಕುಡಿತಕ್ಕೆ ದಾಸರಾದವರು ಸ್ವಾಭಿಮಾನಿಗಳಾಗಿ ಬದುಕಲು ಕುಡಿತ ಬಿಡಬೇಕು ಎಂದು ಕಿವಿಮಾತು ಹೇಳಿದರು.

ನಮ್ಮ ಮುಂದಿನ ಪೀಳಿಗೆ ಚೆನ್ನಾಗಿ ಬದುಕಲಿ ಎಂದು ನಮ್ಮ ಪೂರ್ವಿಕರು ನಮಗಾಗಿ ಆಸ್ತಿ ಮಾಡಿಟ್ಟಿದ್ದಾರೆ. ಆದರೆ ಕುಡಿತಕ್ಕೆ ದಾಸರಾದವರು ಆಸ್ತಿ ಮಾರಾಟ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಲೇಖಕಿ ಡಾ.ಶ್ವೇತಾ ಮಡಪ್ಪಾಡಿ, ಜೀವನದಲ್ಲಿ ಕೆಲವೊಮ್ಮೆ ಏರುಪೇರಾಗುತ್ತದೆ. ಆದರೆ ಇದರ ಚಿಂತೆ ಮರೆಯುತ್ತೇವೆ ಎಂದು ಕುಡಿತಕ್ಕೆ ದಾಸರಾಗಬಾರದು. ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಬದಲಾವಣೆ ಹೊಂದಬೇಕು ಎಂದು ಸಲಹೆ ನೀಡಿದರು.

ನಂತರ ಮಾತನಾಡಿದ ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜ್ ಅವರು, ನಾನು ಕೂಡ 17 ವರ್ಷ ಕುಡಿತದ ಚಟಕ್ಕೆ ಒಳಗಾಗಿದ್ದೆ. ತರುವಾಯ ಕುಡಿತದಿಂದ ಮುಕ್ತನಾಗಿ ಯಾರೂ ಕೂಡ ಕುಡಿತಕ್ಕೆ ದಾಸರಾಗಬಾರದು ಎಂದು ಇಂತಹ ಜಾಗೃತಿ ಕಾರ್ಯಕ್ರಮ ಆಯೋಜಿಸಿದ್ದೇನೆ ಎಂದರು.

ಕುಡಿತದ ಚಟದಿಂದ ಮುಕ್ತರಾಗಲು ಈ ಶಿಬಿರದಲ್ಲಿ ಯೋಗ, ಸತ್ಸಂಗ, ಸಂಗೀತ, ಜಿಮ್, ವ್ಯಕ್ತಿತ್ವ ವಿಕಸನ ತರಗತಿ, ಕೌನ್ಸೆಲಿಂಗ್, ವೈದ್ಯಕೀಯ ಚಿಕಿತ್ಸೆ ನೀಡಲಾಗುವುದು. ಶಿಬಿರದಲ್ಲಿ ಊಟದ ವ್ಯವಸ್ಥೆ ಕೂಡ ಮಾಡಲಾಗಿದೆ ಎಂದು ಬಸವರಾಜ್ ಹೇಳಿದರು.

ಬಣಜಿಗ ಬಲಿಜ ಸಂಘದ ವಿದ್ಯಾರ್ಥಿ ನಿಲಯದ ಖಜಾಂಚಿ ನಾಗರಾಜು ಸೇವೆ ಸ್ಮರಣೆ



ಮೈಸೂರಿನ ಸರಸ್ವತಿಪುರಂನ ಶ್ರೀ ಯೋಗಿ ನಾರಾಯಣ ಬಣಜಿಗ ಬಲಿಜ ಸಂಘದ ವಿದ್ಯಾರ್ಥಿ ನಿಲಯದ ಖಜಾಂಚಿ ಹಾಗೂ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಿ.ನಾಗರಾಜು ಅವರನ್ನು ಮಂಗಳವಾರ ಸನ್ಮಾನಿಸಲಾಯಿತು.

ಮೈಸೂರು, ಜೂ.3(ಬಿಎಲ್‌ಯು)– ನಗರದ ಸರಸ್ವತಿಪುರಂನ ಶ್ರೀ ಯೋಗಿ ನಾರಾಯಣ ಬಣಜಿಗ ಬಲಿಜ ಸಂಘದ ವಿದ್ಯಾರ್ಥಿ ನಿಲಯದ ಖಜಾಂಚಿ ಹಾಗೂ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಿ.ನಾಗರಾಜು ಅವರನ್ನು ನಿನ್ನೆ ಸನ್ಮಾನಿಸಲಾಯಿತು.

ಸಂಘದ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ನಾಗರಾಜ್ ಅವರನ್ನು ಸನ್ಮಾನಿಸಿ ಮಾತನಾಡಿದ ಮೈಸೂರು ಪೈಂಟ್ಸ್ ಮತ್ತು ವಾರ್ನಿಶ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ನಾಗರಾಜು ಅವರು ಪ್ರಾಮಾಣಿಕ, ಪಾರದರ್ಶಕ, ಪರಿಪಕ್ವತೆ ಹಾಗೂ ಪ್ರಬುದ್ಧತೆಯಿಂದ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಿದರು.

ತಮಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದು, ಕಳಂಕ ರಹಿತವಾಗಿ ನಿವೃತ್ತರಾಗಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಎಂ.ನಾರಾಯಣ, ಕಾರ್ಯದರ್ಶಿ ಹೆಚ್.ಆರ್. ಗೋಪಾಲ ಕೃಷ್ಣ, ಉಪಾಧ್ಯಕ್ಷ ಜಿ. ರಮೇಶ್, ನಿರ್ದೇಶಕರಾದ ಹೆಚ್.ವಿ.ನಾಗರಾಜು, ಬಿ.ಕೆ.ಸುರೇಶ್, ಶ್ರೀನಿವಾಸ್ ಮೂರ್ತಿ, ವಸತಿ ನಿಲಯ ವ್ಯವಸ್ಥಾಪಕ ಹೆಚ್.ಆರ್. ವೆಂಕಟೇಶ್, ನಿಲಯ ಪಾಲಕ ರಾಮಕೃಷ್ಣ ಈ ವೇಳೆ ಹಾಜರಿದ್ದರು.

'ಈ ಸಲ ಕಪ್ ನಮ್ದೆ' ಐಪಿಎಲ್ ಗೆದ್ದ ಆರ್‌ಸಿಬಿ: ಅಭಿಮಾನಿಗಳ ಕನಸು ನನಸು!

ಬೆಂಗಳೂರು: 'ಈ ಸಲ ಕಪ್ ನಮ್ದೆ' ಈ ವಿಜಯ ಘೋಷ ವಾಕ್ಯವನ್ನು ಆರ್‌ಸಿಬಿ ಸತ್ಯ ಮಾಡಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಚಾಂಪಿಯನ್‌ಶಿಪ್, 18ನೇ ಆವೃತ್ತಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಗೆದ್ದಿದೆ.

ಈ ಮೂಲಕ ತನ್ನ ಮೊದಲ ಐಪಿಎಲ್ ಟ್ರೋಫಿಯನ್ನು ಗೆದ್ದ ಸಾಧನೆ ಮಾಡಿರುವ ಆರ್‌ಸಿಬಿ ಕೋಟ್ಯಾಂತರ ಅಭಿಮಾನಿಗಳ ಕನಸು, ಆಸೆಯನ್ನು ಈಡೇರಿಸಿದೆ. ಶ್ರೇಯಸ್ ಅಯ್ಯರ್ ನೇತೃತ್ವದ ಬಲಿಷ್ಠ ಪಂಜಾಬ್ ಕಿಂಗ್ಸ್ ವಿರುದ್ಧ ಜಯ ದಾಖಲಿಸಿರುವ ರಜತ್ ಪಾಟೀದಾರ್ ನೇತೃತ್ವದ ಆರ್‌ಸಿಬಿ ಚೊಚ್ಚಲ ಟ್ರೋಫಿಯನ್ನು ಗೆದ್ದಿದೆ. ಈ ಮೂಲಕ ವಿರಾಟ್ ಕೊಹ್ಲಿಗೆ 18ನೇ ಆವೃತ್ತಿಯನ್ನು ಗಿಫ್ಟ್ ಮಾಡಿದೆ.

ಆರ್‌ಸಿಬಿ ಎಂದು ಟ್ವೀಟ್ ಮಾಡಿ ಸಂಭ್ರಮಿಸಿದ ಸಿಎಂ ಸಿದ್ದರಾಮಯ್ಯ

ಆರ್‌ಸಿಬಿ ಗೆಲುವಿನ ಬಗ್ಗೆ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ. " Rrrrrrrrr.... Cccccccc.... Bbbbbbbbb.... ಐಪಿಎಲ್ ಫೈನಲ್ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಬಗ್ಗುಬಡಿದು ಕಪ್ ಮುಡಿಗೇರಿಸಿಕೊಂಡ ಆರ್‌ಸಿಬಿ ತಂಡಕ್ಕೆ ಅಭಿನಂದನೆಗಳು.



ಇಡೀ ಪಂದ್ಯಾವಳಿಯಲ್ಲಿ ಒಂದು ತಂಡವಾಗಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಕೋಟ್ಯಾಂತರ ಅಭಿಮಾನಿಗಳ ಕನಸನ್ನು ಈ ದಿನ ಆರ್‌ಸಿಬಿಯ ಹುಡುಗರು ನನಸಾಗಿಸಿದ್ದಾರೆ. ಆರ್‌ಸಿಬಿಯ ಈ ವಿಜಯದಲ್ಲಿ ವಿರಾಟ್ ಕೊಹ್ಲಿಯ 18 ವರ್ಷಗಳ ಕಾಲದ ತಪಸ್ಸಿದೆ, ನಿಷ್ಠೆ, ಬದ್ಧತೆಯಿದೆ. ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್ ಹೀಗೆ ಎಲ್ಲಾ ವಿಭಾಗದಲ್ಲೂ ಆರ್‌ಸಿಬಿ ಪ್ರತಿ ಆಟಗಾರರು ಚಾಂಪಿಯನ್ ಪ್ರದರ್ಶನ ನೀಡಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇದು ಇತಿಹಾಸ ಸೃಷ್ಟಿಸಿದ ದಿನ.. ಕೊನೆಯದಾಗಿ, ಈ ಸಲ ಕಪ್ ನಮ್ದೆ " ಎಂದು ಹೇಳಿದ್ದಾರೆ.

ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ: ಕ್ರಯಪತ್ರ ರದ್ದುಗೊಳಿಸಲು ಮನವಿ

ಮೈಸೂರು, ಜೂ.3(ಜಿಎ)–ನಕಲಿ ದಾಖಲೆ ಸೃಷ್ಟಿಸಿ ಪ್ರಭಾವಿಗಳು ತಮ್ಮ ತಂದೆಯ ಹೆಸರಿನ ಸಾಮ್ಯತೆ ದುರ್ಬಳಕೆ ಮಾಡಿಕೊಂಡು ಇತರರಿಗೆ ಜಮೀನು ಮಾರಾಟ ಮಾಡಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಕಚೇರಿ, ಪೊಲೀಸ್ ಠಾಣೆ, ನೋಂದಣಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ ಎಂದು ಕೆ.ಎಸ್. ರಾಜೇಗೌಡ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಲಿಗ್ರಾಮ ತಾಲೂಕಿನ ಕಾಳಮ್ಮನಕೊಪ್ಪಲು ಗ್ರಾಮದವರಾದ ಪ್ರಭಾವಿಗಳು ತಮ್ಮ ತಂದೆಯ ಹೆಸರಿನ ಸಾಮ್ಯತೆ ದುರ್ಬಳಕೆ ಮಾಡಿಕೊಂಡು ಜಮೀನನ್ನು ಇತರರಿಗೆ ಮಾರಾಟ ಮಾಡಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಕಚೇರಿಗೆ, ಪೊಲೀಸ್ ಠಾಣೆಗೆ, ನೋಂದಣಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಹೀಗಾಗಿ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳು ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ತಮ್ಮ ತಂದೆ ಸುಬ್ಬೇಗೌಡ ಅವರು 1956 ರಲ್ಲಿ 400 ರೂ.,ಗಳಿಗೆ ಸರ್ವೆ ನಂಬರ್ 24/1ನ 1.9 ಎಕರೆ ಜಮೀನು ಖರೀದಿಸಿದ್ದಾರೆ. ಕೆಲ ಕಾಲ ಹಿಂದೆ ಅವರು ನಿಧನರಾದರು. ಈ ಆಸ್ತಿ ತಾವೂ ಸೇರಿದಂತೆ ಒಟ್ಟು 5 ಬಡ ಕುಟುಂಬಗಳಿಗೆ ಸೇರಬೇಕಾಗಿದೆ. ಆದರೆ ತಮ್ಮ ತಂದೆಯ ಹೆಸರನ್ನೇ ಹೊಂದಿರುವ ತಮ್ಮದೇ ಗ್ರಾಮದ ಯಜಮಾನರೆನಿಸಿ ಕೊಂಡ ವ್ಯಕ್ತಿಯೊಬ್ಬರು ಅಧಿಕಾರಿಗಳು ಮತ್ತು ನೌಕರರನ್ನು ಬಳಸಿಕೊಂಡು 25 ವರ್ಷಗಳ ಕಂದಾಯ ಕಟ್ಟಿ, ನಕಲಿ ದಾಖಲೆ ಸೃಷ್ಟಿಸಿ, ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ಆರೋಪಿಸಿದರು. ಕಳೆದ ಮಾರ್ಚ್‌ನಲ್ಲಿ ಜಮೀನು ನೋಂದಣಿ ಆಗುತ್ತಿರುವ ವಿಷಯ ಬೇರೊಬ್ಬರಿಂದ ತಮಗೆ ತಿಳಿದು, ಸಾಲಿಗ್ರಾಮ ಠಾಣೆಗೆ ದೂರು ಸಹ ನೀಡಲಾಗಿದೆ. ಹಾಗೇ ಜಿಲ್ಲಾ ನೋಂದಣಿ ಅಧಿಕಾರಿಗಳಿಗೂ ಈ ಸ್ವತ್ತಿನ ಕ್ರಯಪತ್ರ ರದ್ದುಗೊಳಿಸುವಂತೆ ಕೋರಲಾಗಿದೆ. ತಹಸೀಲ್ದಾರ್ ಅವರಿಗೂ ಮನವಿ ಮಾಡಲಾಗಿದೆ. ಇದರೊಡನೆ ಸ್ವತ್ತಿನ ಅಸಲಿ ದಾಖಲೆಗಳನ್ನು ಸಲ್ಲಿಸಲಾಗಿದೆ. ಆದರೂ ಯಾರೂ ಕ್ರಮ ಕೈಗೊಂಡಿಲ್ಲ. ಇದಕ್ಕೆ ರಾಜಕೀಯ ಪ್ರಭಾವ ಕಾರಣವಾಗಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಗಮನ ಹರಿಸಿ ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ಸುರೇಶ್ ಹಾಗೂ ಕುಮಾರ್ ಉಪಸ್ಥಿತರಿದ್ದರು.

ಆರ್‌ಸಿಬಿ ಚಾಂಪಿಯನ್: ಕೊಹ್ಲಿ, ಎಬಿಡಿ, ಗೇಲ್ ಬಾಯಲ್ಲಿ ಕನ್ನಡ ಮುತ್ತು

ರಾಯಲ್ ಚಾಲೆಂಜರ್ಸ್ ಬೆಂಗಳೂರು 18ನೇ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ಅನ್ನು ಸೋಲಿಸಿ ಪ್ರಶಸ್ತಿ ಗೆದ್ದಿತು. ಕೊಹ್ಲಿ, ಗೇಲ್ ಮತ್ತು ಡಿವಿಲಿಯರ್ಸ್ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ತಂಡದ ದೀರ್ಘಕಾಲದ ಕನಸು ನನಸಾಗಿದೆ ಎಂದು ಹೇಳಿದರು. ಇನ್ನು 18ನೇ ಆವೃತ್ತಿಯ ಐಪಿಎಲ್ ಟೂರ್ನಿಗೂ ಮುನ್ನ ಸ್ವತಃ ವಿರಾಟ್ ಕೊಹ್ಲಿ, ಆರ್‌ಸಿಬಿ ಮಾಜಿ ಕ್ರಿಕೆಟಿಗ ಎಬಿ ಡಿವಿಲಿಯರ್ಸ್‌ಗೆ ಈ ಸಲ ಕಪ್ ನಮ್ದೇ ಎಂದು ಹೇಳಬೇಡಿ ಎಂದು ಮನವಿ ಮಾಡಿಕೊಂಡಿದ್ದರಂತೆ. ಇದನ್ನು ಎಬಿ ಡಿವಿಲಿಯರ್ಸ್ ಸಂದರ್ಶನವೊಂದರಲ್ಲಿ ಹೇಳಿದ್ದರು. ಇದೀಗ ಆರ್‌ಸಿಬಿ ಐಪಿಎಲ್ ಟ್ರೋಫಿ ಬರ ನೀಗಿಸಿಕೊಳ್ಳುತ್ತಿದ್ದಂತೆಯೇ ಕನ್ನಡದಲ್ಲಿಯೇ ಈ ಸಲ ಕಪ್ ನಮ್ದೇ ಎಂದು ಘರ್ಜಿಸಿದ್ದಾರೆ. ಕೊಹ್ಲಿಗೆ ಎಬಿ ಡಿವಿಲಿಯರ್ಸ್ ಹಾಗೂ ಕ್ರಿಸ್ ಗೇಲ್ ಸಾಥ್ ನೀಡಿದ್ದಾರೆ.



ಪಂದ್ಯ ಮುಕ್ತಾಯದ ಬಳಿಕ ಮಾತನಾಡಿದ ವಿರಾಟ್ ಕೊಹ್ಲಿ, ನಾನು ಈ ತಂಡಕ್ಕಾಗಿ ನನ್ನ ಯೌವ್ವನ, ನಮ್ಮ ಪ್ರೈಮ್ ಹಾಗೂ ನನ್ನ ಅನುಭವವನ್ನು ಧಾರೆ ಎರೆದಿದ್ದೇನೆ. ಇದೊಂದು ರೀತಿ ಅವಿಸ್ಮರಣೀಯ ಅನುಭವ ಎಂದು ಹೇಳಿದ್ದಾರೆ. ಇದೇ ವೇಳೆ ಕ್ರಿಸ್ ಗೇಲ್ ಹಾಗೂ ಎಬಿ ಡಿವಿಲಿಯರ್ಸ್ ಅವರನ್ನು ಉದ್ದೇಶಿಸಿ, ನಾವು ಮೂವರು ನಮ್ಮ ಪ್ರೈಮ್ ಕ್ರಿಕೆಟ್ ಅನ್ನು ತಂಡಕ್ಕೆ ನೀಡಿದ್ದೇವೆ, ಆದರೆ ಸ್ವಲ್ಪದರಲ್ಲಿ ಎಡವಿದ್ದೆವು. ಈ ಟ್ರೋಫಿ ಎಲ್ಲರಿಗೂ ಸೇರಿದ್ದು. ನಾವು ತಂಡಕ್ಕಾಗಿ ನಮ್ಮ ಹೃದಯ ಹಾಗೂ ಆತ್ಮ ನೀಡಿದ್ದೇವೆ. ಈ ಸಲ ಕಪ್ ನಮ್ದು ಎಂದು ವಿರಾಟ್ ಕೊಹ್ಲಿ, ಕ್ರಿಸ್ ಗೇಲ್ ಹಾಗೂ ಎಬಿ ಡಿವಿಲಿಯರ್ಸ್ ಹೇಳಿದ್ದಾರೆ.

ಆರ್‌ಸಿಬಿ ದಿಗ್ವಿಜಯಕ್ಕೆ ಡಿಕೆಶಿ, ಹೆಚ್‌ಡಿಕೆ ಅಭಿನಂದನೆ



ಡಿ.ಕೆ.ಶಿವಕುಮಾರ್





ಕುಮಾರಸ್ವಾಮಿ

ಐಪಿಎಲ್ ಚಾಂಪಿಯನ್ ಪಟ್ಟಕ್ಕೇರಿದ ಆರ್‌ಸಿಬಿಗೆ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ. ಡಿಸಿಎಂ ಡಿ.ಕೆ ಶಿವಕುಮಾರ್, ಈ ಸಲ ಕಪ್ ನಮ್ದೇ, ನೀವು ಪ್ರತಿಯೊಬ್ಬ ಕನ್ನಡಿಗನ ಕನಸನ್ನು ನನಸಾಗಿಸಿದ್ದೀರಿ ಎಂದು ಆರ್‌ಸಿಬಿ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ, ವೀಡಿಯೋ ಹಂಚಿಕೊಂಡಿರುವ ಹೆಚ್‌ಡಿಕೆ, ಬೆಂಗಳೂರು ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಆರೂವರೆ ಕೋಟಿ ಕನ್ನಡಿಗರ ಕನಸನ್ನು ನನಸು ಮಾಡಿದ ಪಟಿದಾರ್ ಪಡೆಯ ಶ್ರೇಷ್ಠ ಕ್ರಿಕೆಟ್ ಕನ್ನಡಿಗರು ಮಾತ್ರವಲ್ಲದೆ, ಇಡೀ ಜಗತ್ತಿನ ಕ್ರಿಕೆಟ್ ಪ್ರೇಮಿಗಳ ಮನ ಸೂರೆಗೊಂಡಿದೆ ಎಂದು ಹೇಳಿದ್ದಾರೆ.

ಕರ್ನಾಟಕದ ಕ್ರಿಕೆಟ್ ಇತಿಹಾಸದಲ್ಲಿಯೇ ಈ ಗೆಲುವು ಮಹೋನ್ನತ ಮೈಲುಗಲ್ಲು ಎಂಬುದು ನನ್ನ ಅಭಿಪ್ರಾಯ, ಮುಖ್ಯವಾಗಿ 18 ವರ್ಷಗಳಷ್ಟು ಸುದೀರ್ಘ ಕಾಲ ತಂಡ ಶ್ರೇಯಸ್ಸಿಗಾಗಿ ತಮ್ಮನ್ನು ಸಮರ್ಪಣೆ ಮಾಡಿಕೊಂಡ ಹಿರಿಯ ಆಟಗಾರ ಕೊಹ್ಲಿಯವರಿಗೆ ಅಭಿನಂದಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ.

ಮೈಸೂರು ಮಿತ್ರ

ಮದುವೆಯಾಗಲು ನಿರಾಕರಿಸಿದ ಯುವತಿಗೆ ಕಿರುಕುಳ

ದೂರು ನೀಡಿ ಎಫ್‌ಐಆರ್ ಆದರೂ ಕ್ರಮಕ್ಕೈಗೊಳ್ಳದ ಪೊಲೀಸರು

ಶಾಸಕ ರವಿಕುಮಾರ್ ಗಣಿಗ ಅವರಿಗೆ ದೂರು ನೀಡಿದ ಯುವತಿ

ಮಂಡ್ಯ, ಜೂ.3– ಮದುವೆಯಾಗಲು ನಿರಾಕರಿಸಿದ ಕಾರಣಕ್ಕೆ ತನಗೆ ಹಿಂದೂ ಸಂಘಟನೆ ಮುಖಂಡನೊಬ್ಬ ನಾಲ್ಕು ವರ್ಷಗಳಿಂದ ಕಿರುಕುಳ ನೀಡುತ್ತಿದ್ದು, ಈ ಬಗ್ಗೆ ಕೆರಗೋಡು ಪೊಲೀಸರಿಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಯುವತಿಯೊಬ್ಬರು ಶಾಸಕ ಪಿ.ರವಿಕುಮಾರ್ ಗಣಿಗ ಅವರಿಗೆ ದೂರು ಸಲ್ಲಿಸಿದ್ದಾರೆ.

ತಾಲೂಕಿನ ಚಿಕ್ಕಬಳ್ಳಿ ಗ್ರಾಮದ ಹಿಂದೂ ಸಂಘಟನೆ ಮುಖಂಡ ಬಾಲಕೃಷ್ಣ ಎಂಬಾತನೇ ಆರೋಪಿಯಾಗಿದ್ದು, ಈತ ಯುವತಿಗೆ ನಿಶ್ಚಯವಾಗಿದ್ದ ಮದುವೆಗಳನ್ನೆಲ್ಲಾ ರದ್ದು ಮಾಡಿಸಿದ್ದಲ್ಲದೇ, ಆಕೆಗೆ ಆಸಿಡ್ ದಾಳಿ ಮಾಡುವ ಬೆದರಿಕೆಯೊಡ್ಡಿದ್ದ ಆರೋಪದಡಿ ಕೆರಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೂ ಆತನನ್ನು ಬಂಧಿಸಿಲ್ಲ ಎಂಬ ಆರೋಪ ಕೇಳಿ ಬಂದಿದೆ.

4 ವರ್ಷಗಳ ಹಿಂದೆ ನನಗೂ ಹಾಗೂ ಬಾಲಕೃಷ್ಣಗೆ ಮದುವೆ ನಿಶ್ಚಯವಾಗಿತ್ತು. ಈ ವೇಳೆ ನನ್ನ ಜೊತೆ ಬಾಲಕೃಷ್ಣ ಹಲವಾರು ಫೋಟೋಗಳನ್ನು ತೆಗೆಸಿಕೊಂಡಿದ್ದ. ಆದರೆ, ಬಾಲಕೃಷ್ಣ ಹಲವು ಸುಳ್ಳುಗಳನ್ನು ಹೇಳಿ ಮದುವೆ ನಿಶ್ಚಯ ಮಾಡಿಕೊಂಡಿದ್ದು ಗೊತ್ತಾಯಿತು. ಈ ವೇಳೆ ನಾನು ಆತನ ಜೊತೆ ಮದುವೆ ಆಗಲ್ಲ ಎಂದು ಮದುವೆಗೆ ನಿರಾಕರಿಸಿದ್ದೆ. ಇದರಿಂದ ಕೆರಳಿದ ಬಾಲಕೃಷ್ಣ ಅಂದಿನಿಂದಲೇ ತನಗೆ ಕಿರುಕುಳ ನೀಡುತ್ತಾ ಬಂದಿದ್ದ ಎಂದು ಯುವತಿ ಆರೋಪಿಸಿದ್ದಾರೆ.

ಯುವತಿ ಜೊತೆ ಇದ್ದ ಹಳೆಯ ಫೋಟೋಗಳನ್ನು ತೋರಿಸಿ ನಿಶ್ಚಯವಾಗಿದ್ದ ಮದುವೆಯನ್ನೆಲ್ಲಾ ರದ್ದು ಮಾಡುತ್ತಾ ಬಂದಿದ್ದ ಈ ಹಿನ್ನೆಲೆಯಲ್ಲಿ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಕೆರಗೋಡು ಪೊಲೀಸ್ ಠಾಣೆಯಲ್ಲಿ ಬಾಲಕೃಷ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಯುವತಿಯ ರಕ್ಷಣೆಗೆ ಬದ್ಧ: ಹಿಂದೂ ಸಂಘಟನೆಯ ಮುಖಂಡ ಚಿಕ್ಕಬಳ್ಳಿ ಬಾಲಕೃಷ್ಣ ಕೊಲೆ ಮಾಡುವ ಅಥವಾ ಆಸಿಡ್ ಹಾಕುವ ಬೆದರಿಕೆ ಹಾಕುತ್ತಿದ್ದು, ನನಗೆ ಮತ್ತು ಕುಟುಂಬಸ್ಥರಿಗೆ ರಕ್ಷಣೆ ನೀಡುವಂತೆ ನೊಂದ ಯುವತಿ ಶಾಸಕ ಪಿ.ರವಿಕುಮಾರ್ ಗಣಿಗ ಅವರಲ್ಲಿ ಮನವಿ ಮಾಡಿದರು.



ಶಾಸಕ ರವಿ ಗಣಿಗ ಅವರಿಗೆ ತನಗಾಗುತ್ತಿರುವ ಕಿರುಕುಳವನ್ನು ವಿವರಿಸುತ್ತಿರುವ ಯುವತಿ

ಮಿಮ್ಸ್ ಆವರಣದಲ್ಲಿ ಶಾಸಕರನ್ನು ಭೇಟಿ ಮಾಡಿದ ಯುವತಿ ಚಿಕ್ಕಬಳ್ಳಿ ಗ್ರಾಮದ ಬಾಲಕೃಷ್ಣ ನನಗೆ ಬಹಿರಂಗವಾಗಿ ಬೆದರಿಕೆ ಹಾಕಿ, ಮದುವೆ ಆಗುವಂತೆ ಒತ್ತಾಯಿಸುತ್ತಿದ್ದಾರೆ. ನನಗೆ ಹಾಗೂ ಕುಟುಂಬಸ್ಥರಿಗೆ ಪ್ರಾಣ ಬೆದರಿಕೆ ಇದ್ದು, ಈ ಸಂಬಂಧ ಕೆರಗೋಡು ಠಾಣೆಯಲ್ಲಿ ದೂರು ದಾಖಲಿಸಿದ್ದರೂ ಯಾವುದೇ ಕ್ರಮವಾಗಿಲ್ಲ ಎಂದು ಅಲವತ್ತುಗೊಂಡರು.

ಯುವತಿಯನ್ನು ಸಮಾಧಾನಿಸಿದ ಶಾಸಕ ರವಿಕುಮಾರ್ ಅವರು ಪೊಲೀಸ್ ವರಿಷ್ಠಾಧಿಕಾರಿಯನ್ನು ಸಂಪರ್ಕಿಸಿ ಸೂಕ್ತ ರಕ್ಷಣೆ ನೀಡುವಂತೆ ಸೂಚಿಸಿದರು. ತರುವಾಯ ಮಾತನಾಡಿದ ಶಾಸಕರು, ಯುವತಿ ನನ್ನ ಸಹೋದರಿ ಸಮಾನಳಾಗಿದ್ದು, ಯುವತಿಯ ರಕ್ಷಣೆಗೆ ಅಗತ್ಯ ಕ್ರಮ ವಹಿಸಲು ಪೊಲೀಸ್ ಇಲಾಖೆಗೆ ತಿಳಿಸಲಾಗಿದೆ ಎಂದರು.

ಪೊಲೀಸರು ಯಾರದೋ ಪ್ರಭಾವಕ್ಕೆ ಒಳಗಾಗಿ ಆರೋಪಿಗೆ ರಕ್ಷಣೆ ನೀಡುವುದು ಸರಿಯಲ್ಲ. ಆರೋಪಿ ಎಷ್ಟೇ ಪ್ರಭಾವಿಯಾಗಿದ್ದರೂ ಯುವತಿಗೆ ನ್ಯಾಯ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಮಂಡ್ಯದಲ್ಲಿ ಸಂಭ್ರಮಾಚರಣೆ, ಟ್ರಾಫಿಕ್ ಜಾಮ್, ಪರದಾಟ



ಗುಜರಾತಿನ ಅಹ್ಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮಂಗಳವಾರ ನಡೆದ ಐಪಿಎಲ್ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ಭರ್ಜರಿ ಗೆಲುವು ಸಾಧಿಸಿ ಐಪಿಎಲ್ ಕಪ್ ತನ್ನದಾಗಿಸಿಕೊಂಡ ಹಿನ್ನೆಲೆಯಲ್ಲಿ ಮಂಡ್ಯದ ಸಂಜಯ್ ವೃತ್ತದಲ್ಲಿ ಸಾವಿರಾರು ಅಭಿಮಾನಿಗಳು ಸಂಭ್ರಮಾಚರಣೆಯಲ್ಲಿ ತೊಡಗಿದ್ದರಿಂದ ಸುಮಾರು ಹೊತ್ತು ಕಿಲೋ ಮೀಟರ್‌ಗಟ್ಟಲೆ ಟ್ರಾಫಿಕ್ ಜಾಮ್‌ಗೊಂಡು ಪ್ರಯಾಣಿಕರು ಪರದಾಡುವಂತಾಯಿತು. ಅಭಿಮಾನಿಗಳು ಆರ್‌ಸಿಬಿ ಮತ್ತು ವಿರಾಟ್ ಕೊಹ್ಲಿ ಪರ ಜಯಕಾರ ಕೂಗುತ್ತಾ, ಪಟಾಕಿ ಸಿಡಿಸಿ, ಸಿಹಿ ಹಂಚಿ ಪರಸ್ಪರ ಅಪ್ಪಿಕೊಂಡು ಸಂತೋಷ ವಿನಿಮಯ ಮಾಡಿಕೊಳ್ಳುತ್ತಿದ್ದುದು ಕಂಡು ಬಂದಿತು. ಇಷ್ಟೇ ಅಲ್ಲದೆ ಸಾರ್ವಜನಿರಿಗೂ ಸಿಹಿ ಹಂಚಿ ಡಾನ್ಸ್ ಮಾಡುತ್ತಾ ಎಂಜಾಯ್ ಮಾಡಲಾರಂಭಿಸಿದರು. ಎಷ್ಟೇ ಹೊತ್ತಾದರೂ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗಲಿಲ್ಲ ಕೊನೆಗೆ ಪೊಲೀಸರು ಲಘು ಲಾಠಿ ಪ್ರಹಾರ ಮಾಡಿ ಅಭಿಮಾನಿಗಳ ಗುಂಪನ್ನು ಚದುರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ನಾಗಮಂಗಲ ಬಳಿ ಹೆಬ್ಬಾಗಿಲಿನ ಪಿಲ್ಲರ್ ಕುಸಿದು ಓರ್ವ ಸಾವು, ಮೂವರಿಗೆ ಗಾಯ

ನಾಗಮಂಗಲ, ಜೂ.3– ನಿರ್ಮಾಣ ಹಂತದಲ್ಲಿದ್ದ ಊರಿನ ಹೆಬ್ಬಾಗಿಲು ಕುಸಿದು ಓರ್ವ ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೇವರಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ. ಕಲ್ಬುರ್ಗಿ ಜಿಲ್ಲೆಯ ಗುಂಡಿ ಗ್ರಾಮದ ಶರಣು(35) ಸ್ಥಳದಲ್ಲೇ ಸಾವನ್ನಪ್ಪಿದರೆ, ಗಂಭೀರವಾಗಿ ಗಾಯಗೊಂಡಿರುವ ಮೂವರನ್ನು ಬೆಳ್ಳೂರಿನ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ದೇವಲಾಪುರ ಹೋಬಳಿಯ ದೇವರಹಳ್ಳಿ ಗ್ರಾಮದ ಹೆಬ್ಬಾಗಿಲು ನಿರ್ಮಾಣ ಹಂತದಲ್ಲಿತ್ತು. ಈ ಹೆಬ್ಬಾಗಿಲಿಗೆ ಎರಡು ಕಡೆ ಪಿಲ್ಲರ್ ನಿರ್ಮಿಸಿದ್ದರು. ಅದರ ಮೇಲೆ ಕಬ್ಬಿಣ ಕಟ್ಟಿ ಕಾಂಕ್ರೀಟ್ ಹಾಕಲಾಗಿತ್ತು. ಈ ವೇಳೆ ಕಾರ್ಮಿಕರು ಕೆಲಸ ಮಾಡುವಾಗ ಭಾರದಿಂದ ಏಕಾಏಕಿ ಪಿಲ್ಲರ್ ಕುಸಿದು ಈ ದುರ್ಘಟನೆ ಸಂಭವಿಸಿದೆ. ನಾಗಮಂಗಲ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅರೆಬೆಂದ ಸ್ಥಿತಿಯಲ್ಲಿ ವ್ಯಕ್ತಿಯ ಶವಪತ್ತೆ

ಹಲಗೂರು, ಜೂ.3– ವ್ಯಕ್ತಿಯೊಬ್ಬನ ಶವವು ಅರೆಬೆಂದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಹಾಡ್ಲಿ ಗ್ರಾಮದಲ್ಲಿ ಜರುಗಿದೆ.

ವ್ಯಕ್ತಿಯನ್ನು ಕೊಲೆ ಮಾಡಿ, ಸುಟ್ಟುಹಾಕುವ ಯತ್ನ ನಡೆದಿದೆ ಎಂದು ಶಂಕಿಸಲಾಗಿದ್ದು, ಹಾಡ್ಲಿ ಗ್ರಾಮದ ಸುಶೀಲಮ್ಮ ಎಂಬುವವರು ಗ್ರಾಮದ ಜಮೀನಿನ ಬಳಿ ಕುರಿ ಮೇಯಿಸುತ್ತಿದ್ದಾಗ ದುರ್ವಾಸನೆ ಬಂದಿದೆ. ಆಗ ಹತ್ತಿರ ಹೋಗಿ ನೋಡಿದಾಗ ಮೃತ ದೇಹ ಇರುವುದು ಪತ್ತೆಯಾಗಿದೆ.

ಈ ವಿಚಾರವನ್ನು ಗ್ರಾಮದ ಮುಖಂಡ ಪ್ರಕಾಶ್ ಎಂಬುವವರಿಗೆ ಸುಶೀಲಮ್ಮ ತಿಳಿಸಿದ್ದು, ಬಳಿಕ ಪ್ರಕಾಶ್ ಹಲಗೂರು ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಹಲಗೂರು ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ಹಾಗೂ ಪಿಎಸ್‌ಐ ಲೋಕೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಶ್ವಾನದಳ, ಬೆರಳಚ್ಚು ತಜ್ಞರು ಆಗಮಿಸಿ, ಮಾಹಿತಿ ಕಲೆ ಹಾಕಿದ್ದು, ಹಲಗೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಎಎಸ್ಪಿ ತಿಮ್ಮಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಿಂದಿನ ಸರ್ಕಾರ ನೀಡಿದ್ದ ಹಕ್ಕು ಪತ್ರಗಳು ಅನಧಿಕೃತ

15 ದಿನಗಳಲ್ಲಿ ಮನೆ-ಮನೆಗಳಿಗೆ ತೆರಳಿ ಹೊಸ ಹಕ್ಕು ಪತ್ರ ವಿತರಣೆ

ಶ್ರೀರಂಗಪಟ್ಟಣ, ಜೂ.3– ಈ ಹಿಂದಿನ ಅವಧಿಯಲ್ಲಿ ಇಲ್ಲಿನ ನಿವಾಸಿಗಳಿಗೆ ವಿತರಿಸಲಾಗಿದ್ದ ಹಕ್ಕುಪತ್ರಗಳು ಕ್ರಮಬದ್ಧವಾಗಿಲ್ಲ, ಜೊತೆಗೆ ಅಧಿಕೃತವಲ್ಲದ ಹಕ್ಕುಪತ್ರಗಳನ್ನು ವಿತರಿಸಲಾಗಿದೆ ಎಂದು ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ತಿಳಿಸಿದ್ದಾರೆ.

ತಾಲೂಕಿನ ಕೆಆರ್‌ಎಸ್ ಗ್ರಾಮದಲ್ಲಿ 10 ಕೋಟಿ ರೂ. ವೆಚ್ಚದ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೆಆರ್‌ಎಸ್ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಈ ಹಿಂದೆ ನೀಡಲಾಗಿದ್ದ ಹಕ್ಕುಪತ್ರಗಳು ಸಿಂಧುವಲ್ಲ. ಹಾಗಾಗಿ ಈ ಹಕ್ಕುಪತ್ರಗಳು ಸಿಂಧುವಲ್ಲದ ಕಾರಣ ಮುಂದಿನ 15 ದಿನಗಳಲ್ಲಿ ಪ್ರತಿ ಮನೆ, ಮನೆಗಳಿಗೆ ತೆರಳಿ ಹೊಸ ಹಕ್ಕುಪತ್ರ ವಿತರಿಸುವುದಾಗಿ ತಿಳಿಸಿದರು.

ಕೆಆರ್‌ಎಸ್ ವೀಕ್ಷಣೆಗೆ ಬರುವ ಪ್ರವಾಸಿಗರಿಂದ ಅಧಿಕ ಶುಲ್ಕ ವಸೂಲಿ ಹಾಗೂ ಟೋಲ್ ಸಂಗ್ರಹ ಮಾಡುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಶಾಸಕರು, ಶುಲ್ಕ ವಸೂಲಿ ಇಂದು ನಿನ್ನೆಯದಲ್ಲ. ಹಿಂದಿನಿಂದಲೂ ವಸೂಲಿ ಮಾಡುತ್ತಾ ಬಂದಿದ್ದು ನಾವೇನು 500 ರೂ. ಶುಲ್ಕ ವಿಧಿಸುತ್ತಿಲ್ಲ. ಒಂದು ಒಳ್ಳೆಯ ಹೋಟೆಲ್‌ನಲ್ಲಿ ಕಾಫಿ ಕುಡಿದರೆ 250 ರೂ. ಕೊಡಬೇಕು ಎಂದು ಶುಲ್ಕ ಏರಿಕೆಯನ್ನು ಸಮರ್ಥಿಸಿಕೊಂಡರು.



ಗುದ್ದಲಿ ಪೂಜೆ ನೆರವೇರಿಸುತ್ತಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ.

ಇತ್ತೀಚೆಗಷ್ಟೆ ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯರವರು ಪ್ರವೇಶದರ ಹಾಗೂ ಟೋಲ್ ಸಂಗ್ರಹದ ವಿರುದ್ಧ ಕೆಆರ್‌ಎಸ್ ಪ್ರವೇಶ ದ್ವಾರದ ಮುಂಭಾಗ ಧರಣಿ ನಡೆಸಿದ್ದರು. ಆದರೆ ಸ್ಥಳೀಯ ಶಾಸಕ ರಮೇಶಬಂಡಿಸಿದ್ದೇಗೌಡ ಸರ್ಕಾರ ಬೆಲೆ ಏರಿಸಿದ್ದ ಕ್ರಮ ಸರಿಯಾಗಿದೆ ಎಂದರು.

ಕಾವೇರಿ ನದಿ ತೀರದ ಒತ್ತುವರಿ ಬಗ್ಗೆ ಪ್ರತಿಕ್ರಿಯಿಸಿ, ಬಫರ್ ಝೋನ್‌ನಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರನ್ನು ತೆರವು ಮಾಡಿಸಲೇಬೇಕು. ಪ್ರಕೃತಿಗಿಂತ ಯಾರೂ ದೊಡ್ಡವರಲ್ಲ ಎಂದು ಬಫರ್ ಝೋನ್‌ನಲ್ಲಿ ಅಕ್ರಮ ಕಟ್ಟಡ ನಿರ್ಮಿಸಿಕೊಂಡಿರುವವರಿಗೆ ಖಡಕ್ ಎಚ್ಚರಿಕೆ ನೀಡಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ಜನಪರವಾಗಿದ್ದು, ಸರ್ಕಾರ ಗ್ಯಾರಂಟಿ ಯೋಜನೆಗಳ ಹೊರತಾಗಿಯೂ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಮುಂದಾಗಿದೆ. ವಿರೋಧ ಪಕ್ಷದವರ ಹೇಳಿಕೆಗಳಿಗೆ ಕಿವಿಗೊಡಬೇಡಿ. ಸರ್ಕಾರ ಇಲ್ಲಿನ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅಮ್ಯೂಸ್ ಮೆಂಟ್ ಪಾರ್ಕ್ ಹಾಗೂ ಕಾವೇರಿ ಆರತಿ ಯೋಜನೆಗಳಿಗೆ ಶೀಘ್ರದಲ್ಲೇ ಚಾಲನೆ ನೀಡುವುದಾಗಿ ಅವರು ತಿಳಿಸಿದರು.

ನಂತರ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ 4.98 ಕೋಟಿ ರೂ. ವೆಚ್ಚದಲ್ಲಿ ದೇವರಾಯ ಮುಖ್ಯ ಕಾಲುವೆಯಡಿ ಬರುವ ಉಪ ಶಾಖೆಗಳಾದ ಬೇವಿನತಾಳು, ಪೇಟೆ ಗದ್ದೆ, ಬೊಮ್ಮರು ಶಾಖೆ ನಾಲೆಗಳಿಗೆ ಸಿಸಿ ಗ್ರೌಂಡ್ ಟ್ರಫ್ ಅಭಿವೃದ್ಧಿ ಕಾಮಗಾರಿ, ಪಟ್ಟಣದ ದರಿಯಾ ದೌಲತ್ ಬಾಗ್ ಮುಂಭಾಗದ ಚಂದಗಾಲು ರಸ್ತೆ ಹಾಗೂ 5 ಕೋಟಿ ರೂ. ವೆಚ್ಚದಲ್ಲಿ ತಾಲೂಕಿನ ಕೂಡಲಕುಪ್ಪೆ ಬಳಿಯ ಎರಮಣಿ ಪಿಕಪ್ ನಾಲೆಯ ಆಧುನೀಕರಣ ಕಾಮಗಾರಿಗೆ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಇಂದು ಮಂಡ್ಯದಲ್ಲಿ ವಿದ್ಯುತ್ ವ್ಯತ್ಯಯ

ಮಂಡ್ಯ, ಜೂ.3– ಕೋಲಕಾರನ ದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಜೂನ್ 4 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ನಿಲುಗಡೆಗೊಳಿಸಲಾಗುವುದು.



ಕೊಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗನಹಳ್ಳಿ, ಪುರ, ಲೋಕಸರ, ಹಳುವಾಡಿ, ಕಮ್ನಾಯಕನಹಳ್ಳಿ, ಟಿ. ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನಹೊಸೂರು, ಬಿ.ಹೊಸೂರು , ಗೋಪನಹಳ್ಳಿ ಯಡಗನಹಳ್ಳಿ, ಮಾದರಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಕಂಪನಿಯೊಂದಿಗೆ ಸಹಕರಿಸಬೇಕೆಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

18 ವರ್ಷ, 18 ಆವೃತ್ತಿ, ನಂ.18; ಜೆರ್ಸಿ ಆರ್‌ಸಿಬಿ ರೋಚಕ ಇತಿಹಾಸ

ಅಹಮದಾಬಾದ್: ಕೋಟ್ಯಾಂತರ ಅಭಿಮಾನಿಗಳ ಪ್ರಾರ್ಥನೆ ಕೊನೆಗೂ ನೆರವೇರಿದೆ. ಒಂದು ಬಾರಿ ಯಾದರೂ ಕಪ್ ಗೆಲ್ಲಬೇಕೆಂಬ 18 ವರ್ಷಗಳ ಕನಸು ಈ ಬಾರಿ ನನಸಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮೊದಲ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸುವ ಮೂಲಕ ಈ ಸಲ ಕಪ್ ನಮ್ದೇ ಎಂದು ಹುರಿದುಂಬಿಸುತ್ತಿದ್ದ ಅಭಿಮಾನಿಗಳಿಗೆ ಗಿಫ್ಟ್ ನೀಡಿದೆ. 17 ವರ್ಷ, 6,256 ದಿನಗಳು, 90,08,640 ಬಳಿಕ ಟ್ರೋಫಿ ಮುಡಿಗೇರಿಸಿಕೊಂಡಿದ್ದು, ಇತಿಹಾಸ ಪುಟ ಸೇರಿಕೊಂಡಿದೆ.

ಚೊಚ್ಚಲ ಆವೃತ್ತಿಯಲ್ಲಿ ಹೀನಾಯ ಸೋಲು: 2008ರ ಚೊಚ್ಚಲ ಐಪಿಎಲ್ ಆವೃತ್ತಿಯಲ್ಲಿ 8 ತಂಡ ಗಳು ಮಾತ್ರ ಭಾಗವಹಿಸಿದ್ದವು. ರಾಜಸ್ಥಾನ್ ರಾಯಲ್ಸ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಆಗ ವಿಜಯ್ ಮಲ್ಯ ಮಾಲೀಕತ್ವದಲ್ಲಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 14 ಪಂದ್ಯಗಳಲ್ಲಿ ಕೇವಲ 4 ಪಂದ್ಯಗಳನ್ನು ಗೆದ್ದು, ಲೀಗ್ ಸುತ್ತಿನಲ್ಲೇ ಹೊರಬಿದ್ದಿತ್ತು. ಚುಟುಕು ಕ್ರಿಕೆಟ್‌ಗೆ ಆಗಷ್ಟೇ ಚಾಲನೆ ಸಿಕ್ಕಿದ್ದರಿಂದ ಆರ್‌ಸಿಬಿ ಅಷ್ಟೇನು ಜನಪ್ರಿಯತೆ ಗಳಿಸಿರಲಿಲ್ಲ.

ಫೈನಲ್‌ನಲ್ಲಿ ವಿರೋಚಿತ ಸೋಲು: 2009ರ ಆವೃತ್ತಿಯಲ್ಲೂ 8 ತಂಡಗಳು ಭಾಗವಹಿಸಿದ್ದವು. 2ನೇ ಆವೃತ್ತಿಯಲ್ಲಿ ಆರ್‌ಸಿಬಿ ಪುಟಿದೆದ್ದಿತ್ತು. 14 ಪಂದ್ಯಗಳಲ್ಲಿ 8 ಪಂದ್ಯಗಳಲ್ಲಿ ಗೆಲುವು ಸಾಧಿಸಿ 16 ಅಂಕ ಗಳಿಸಿ ಪ್ಲೇ ಆಫ್‌ಗೆ ಅರ್ಹತೆ ಪಡೆದುಕೊಂಡಿತ್ತು. ಆಗ ಎಲಿಮಿನೇಟರ್ ಪಂದ್ಯ ಇರಲಿಲ್ಲ, 2 ಸೆಮಿಫೈನಲ್ ಪಂದ್ಯಗಳು ಮಾತ್ರ ಇದ್ದವು. ಮೊದಲ ಸೆಮಿಫೈನಲ್‌ನಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ (ಇಂದಿನ ಡೆಲ್ಲಿ ಕ್ಯಾಪಿಟಲ್ಸ್), ಹೈದರಾಬಾದ್ ಡೆಕ್ಕನ್ ಚಾರ್ಜಸ್ ಕಾದಾಟ ನಡೆಸಿದರೆ, 2ನೇ ಸೆಮಿಸ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ಸೆಣಸಾಡಿತ್ತು. ಈ ವೇಳೆ ಸೆಮಿಸ್‌ನಲ್ಲಿ ಗೆದ್ದು ಫೈನಲ್ ಪ್ರವೇಶಿಸಿದ್ದ ಆರ್‌ಸಿಬಿ ಫೈನಲ್‌ನಲ್ಲಿ ಡೆಕ್ಕನ್ ಚಾರ್ಜಸ್ ವಿರುದ್ಧ 6 ರನ್‌ಗಳ ಅಂತರದಿಂದ ಸೋಲು ಕಂಡಿತ್ತು. ಟ್ರೋಫಿ ಗೆಲ್ಲುವ ಕನಸೂ ಕಮರಿತ್ತು.

3ನೇ ಸ್ಥಾನಕ್ಕೆ ತೃಪ್ತಿ: 2010ರ ಐಪಿಎಲ್ ವೇಳೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಜನಪ್ರಿಯತೆ ಗಳಿಸಿತ್ತು. ಈ ಆವೃತ್ತಿಯಲ್ಲಿ ಆರ್‌ಸಿಬಿ ಪ್ಲೇ ಆಫ್ ಪ್ರವೇಶಿಸಿದ್ರೂ, ಮೊದಲ ಸೆಮಿಫೈನಲ್‌ನಲ್ಲೇ ಮುಂಬೈ ಇಂಡಿಯನ್ಸ್ ವಿರುದ್ಧ 35 ರನ್‌ಗಳ ಅಂತರದಿಂದ ಹೀನಾಯವಾಗಿ ಸೋತಿತ್ತು. ಆದರೆ ಡೆಲ್ಲಿ ವಿರುದ್ಧ ಗೆದ್ದು 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಚೆನ್ನೈ ಸೂಪರ್ ಕಿಂಗ್ಸ್ ಮೊದಲ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಚೆನ್ನೈ ವಿರುದ್ಧ ಎರಡೆರಡುಬಾರಿ ಸೋಲು: 2011ರ ಆವೃತ್ತಿ ಆರ್‌ಸಿಬಿ ಪಾಲಿಗೆ ಅತ್ಯಂತ ರೋಚಕ ಘಟ್ಟ, ಲೀಗ್ ಸುತ್ತಿನಲ್ಲಿ 14ರಲ್ಲಿ 9 ಪಂದ್ಯ ಗೆದ್ದು ಪ್ಲೇ ಆಫ್ ಪ್ರವೇಶಿಸಿತ್ತು. ಈ ವೇಳೆಗೆ ಪ್ಲೇ ಆಫ್ ಸ್ವರೂಪ ಸಂಪೂರ್ಣ ಬದಲಾಗಿತ್ತು. ಮೊದಲ ಸೆಮಿಫೈನಲ್‌ನಲ್ಲಿ ಚೆನ್ನೈ ವಿರುದ್ಧ 6 ವಿಕೆಟ್‌ಗಳ ಹೀನಾಯ ಸೋಲು ಕಂಡಿದ್ದ ಆರ್‌ಸಿಬಿಗೆ ಮತ್ತೊಂದು ಅವಕಾಶ ಸಿಕ್ಕಿತ್ತು ಆಗ 2ನೇ ಕಾಲಿಫೈಯರ್ ಪಂದ್ಯದಲ್ಲಿ ಮುಂಬೈ ವಿರುದ್ಧ ಭರ್ಜರಿ ಗೆಲುವು ಕಂಡಿದ್ದ ಆರ್‌ಸಿಬಿ ಪುನಃ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 58 ರನ್‌ಗಳಿಂದ ಸೋಲು ಕಂಡಿತ್ತು. ಆಗ ಚೆನ್ನೈ ಸೂಪರ್ ಕಿಂಗ್ಸ್ ಸತತ 2ನೇ ಬಾರಿಗೆ ಟ್ರೋಫಿ ಮುಡಿಗೇರಿಸಿಕೊಂಡಿತ್ತು.

ಆರ್‌ಸಿಬಿ ಪಾಲಿಗೆ ಕಹಿ: 2012ರ ಐಪಿಎಲ್ ಆವೃತ್ತಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಹಾಗೂ ಅಭಿಮಾನಿಗಳ ಪಾಲಿಗೆ ಕಹಿಯಾಗಿತ್ತು. ಏಕೆಂದರೆ ಈ ಆವೃತ್ತಿಯಲ್ಲಿ ಪ್ಲೇ ಆಫ್ ಪ್ರವೇಶಿಸುವ ಅವಕಾಶವಿತ್ತು. 16 ಪಂದ್ಯಗಳಲ್ಲಿ ಆರ್‌ಸಿಬಿ ಮತ್ತು ಸಿಎಸ್‌ಕೆ ತಲಾ 8 ಪಂದ್ಯ ಗೆದ್ದು 17 ಅಂಕ ಪಡೆದುಕೊಂಡಿದ್ದವು. ಆದರೆ ನೆಟ್‌ರನ್ ರೇಟ್ ಕೊರತೆಯಿಂದ ಆರ್‌ಸಿಬಿ ಪ್ಲೇ ಆಫ್‌ನಿಂದ ಹೊರಗುಳಿಯಿತು. ಚೆನ್ನೈಗೆ ಗಿಫ್ಟ್ ಸಿಕ್ಕಿತು. ಆದರೆ ಫೈನಲ್ಲಿ ಕೆಕೆಆರ್ ಸಿಎಸ್‌ಕೆ ಸೋಲಿಸಿ ಮೊದಲ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು.

ಲೀಗ್‌ನಲ್ಲೇ ಹೊರಬಿದ್ದ ಬೆಂಗಳೂರು ಬಾಯ್ಸ್: 2013ರ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಲೀಗ್ ಸುತ್ತಿನಲ್ಲೇ ಹೊರಬಿದ್ದಿತ್ತು. 16 ಪಂದ್ಯಗಳ ಪೈಕಿ 9 ಪಂದ್ಯ ಗೆದ್ದು 18 ಅಂಕ ಗಳಿಸಿದ್ರೂ ಪ್ಲೇ ಆಫ್ ಪ್ರವೇಶಿಸುವಲ್ಲಿ ವಿಫಲವಾಯಿತು. ಈ ಆವೃತ್ತಿಯಲ್ಲಿ 2ನೇ ಬಾರಿಗೆ ಚೆನ್ನೈ–ಮುಂಬೈ 2ನೇ ಬಾರಿಗೆ ಮುಖಾಮುಖಿಯಾಗಿದ್ದವು. ಮುಂಬೈ 23 ರನ್‌ಗಳಿಂದ ಗೆದ್ದು ಮೊದಲ ಬಾರಿಗೆ ಚಾಂಪಿಯನ್ ಪಟ್ಟ ಧಕ್ಕಿಸಿಕೊಂಡಿತ್ತು.

ಸತತ ಹೀನಾಯ ಸೋಲು: 2014ರ ಆವೃತ್ತಿಯಲ್ಲಿ ವಿರಾಟ್ ಕೊಹ್ಲಿ ನಾಯಕತ್ವದಲ್ಲಿದ್ದ ಆರ್‌ಸಿಬಿ ಪ್ಲೇ ಆಫ್ ಸಮೀಪವೂ ಸುಳಿಯಲಿಲ್ಲ. ಅರಂಭಿಕ 2 ಪಂದ್ಯಗಳನ್ನು ಗೆದ್ದು ಶುಭಾರಂಭ ಕಂಡಿದ್ದ ಆರ್‌ಸಿಬಿ ಬಳಿಕ ಸತತ ಹೀನಾಯ ಸೋಲುಗಳನ್ನು ಅನುಭವಿಸಿತು. 14 ಪಂದ್ಯಗಳಲ್ಲಿ ಕೇವಲ 5 ಪಂದ್ಯ ಗೆದ್ದ ಆರ್‌ಸಿಬಿ 8 ತಂಡಗಳ ಪೈಕಿ 7ನೇ ಸ್ಥಾನಕ್ಕೆ ಕುಸಿದು, ಲೀಗ್‌ನಲ್ಲೇ ಮಕಾಡೆ ಮಲಗಿತು. ಈ ಆವೃತ್ತಿಯಲ್ಲಿ ಗೌತಮ್ ಗಂಭೀರ್ ನಾಯಕತ್ವದ ಕೋಲ್ಕತ್ತಾ ನೈಟ್ ರೈಡರ್ಸ್ ಗೆದ್ದು 2ನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿತು.



2008 2025

ಬೆಂಗಳೂರಿಗೆ ಸಿಹಿ–ಕಹಿ: 2015ರಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದ ಆರ್‌ಸಿಬಿಗೆ ಟ್ರೋಫಿ ಗೆಲ್ಲುವ ಕನಸು ನಿರಾಸೆಯಾಯಿತು. ಏಕೆಂದರೆ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 71 ರನ್‌ಗಳ ಭರ್ಜರಿ ಗೆಲುವು ಸಾಧಿಸಿದ್ದ ಬೆಂಗಳೂರು ತಂಡ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಸಿಎಸ್‌ಕೆ ವಿರುದ್ಧ 3 ವಿಕೆಟ್‌ಗಳ ವಿರೋಚಿತ ಸೋಲು ಕಂಡು ನಿರಾಸೆ ಅನುಭವಿಸಿತು. ಈ ಆವೃತ್ತಿಯಲ್ಲಿ 3ನೇ ಬಾರಿಗೆ ಮುಂಬೈ–ಚೆನ್ನೈ ಫೈನಲ್‌ನಲ್ಲಿ ಮುಖಾಮುಖಿಯಾಗಿತ್ತು. ರೋಹಿತ್ ಶರ್ಮಾ ನಾಯಕತ್ವದ ಮುಂಬೈ ಇಂಡಿಯನ್ಸ್ 41 ರನ್‌ಗಳಿಂದ ಪಂದ್ಯ ಗೆದ್ದು 2ನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿತು.

8 ರನ್‌ಗಳಿಂದ ಕೈತಪ್ಪಿದ ಟ್ರೋಫಿ: 2016 ಐಪಿಎಲ್ ಆವೃತ್ತಿ ಆರ್‌ಸಿಬಿ ಅಭಿಮಾನಿಗಳ ಪಾಲಿಗೆ ಹಬ್ಬವಾಗಿತ್ತು. ಅಂಕಪಟ್ಟಿಯಲ್ಲಿ ಟಾಪ್–2 ಸ್ಥಾನದೊಂದಿಗೆ ಪ್ಲೇ ಆಫ್ ಪ್ರವೇಶಿಸಿದ್ದ ಆರ್‌ಸಿಬಿ ಮೊದಲ ಕ್ವಾಲಿಫೈಯರ್‌ನಲ್ಲಿ ಗುಜರಾತ್ ಲಯನ್ಸ್ ವಿರುದ್ಧ ಗೆದ್ದು ಫೈನಲ್ ತಲುಪಿತ್ತು. ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ಸನ್ ರೈಸರ್ಸ್ ಹೈದರಾಬಾದ್ ತಂಡ 7 ವಿಕೆಟ್ ನಷ್ಟಕ್ಕೆ 208 ರನ್ ಸಿಡಿಸಿತ್ತು. ಆದರೆ ಚೇಸಿಂಗ್ ಮಾಡಿದ್ದ ಆರ್‌ಸಿಬಿ ಕ್ರಿಸ್‌ಗೇಲ್ ಮತ್ತು ಕಿಂಗ್ ಕೊಹ್ಲಿ ಆರ್ಭಟದ ಹೊರತಾಗಿ 8 ರನ್‌ಗಳ ವಿರೋಚಿತ ಸೋಲು ಅನುಭವಿಸಿತು. ಆಗ ಸನ್ ರೈಸರ್ಸ್ ಡೇವಿಡ್ ವಾರ್ನರ್ ನಾಯಕತ್ವದಲ್ಲಿ ಟ್ರೋಫಿ ಎತ್ತಿ ಹಿಡಿದಿತ್ತು.

ಅಡ್ರೆಸ್‌ಗಿಲ್ಲದಂತೆ ಮಕಾಡೆ ಮಲಗಿತ್ತು ಬೆಂಗಳೂರು: ಪ್ರತಿ ಬಾರಿಯಂತೆ 2017ರ ಆವೃತ್ತಿಯಲ್ಲೂ 'ಈ ಸಲ ಕಪ್ ನಮ್ದೇ' ಎಂಬ ಧ್ಯೇಯದೊಂದಿಗೆ ಆರ್‌ಸಿಬಿ ಕಣಕ್ಕಿಳಿದಿತ್ತು. ಈ ಆವೃತ್ತಿಯಲ್ಲಿ 8 ತಂಡಗಳು ಪಾಲ್ಗೊಂಡಿದ್ದವು. ಕ್ರಿಸ್‌ಗೇಲ್, ವಿರಾಟ್ ಕೊಹ್ಲಿ, ಎಬಿ ಡಿ ವಿಲಿಯರ್ಸ್, ಶೇನ್ ವಾಟ್ಸನ್, ಕೆ.ಎಲ್ ರಾಹುಲ್ ಅವರಂತಹ ದಿಗ್ಗಜ ಬ್ಯಾಟರ್‌ಗಳಿದ್ದರೂ ಹೀನಾಯ ಸೋಲುಗಳು ಅನುಭವಿಸಿತು. 14ರಲ್ಲಿ ಕೇವಲ 3 ಪಂದ್ಯಗಳನ್ನ ಗೆದ್ದು ಕೊನೆಯ ಸ್ಥಾನದೊಂದಿಗೆ ಹೊರನಡೆಯಿತು. ಈ ಆವೃತ್ತಿಯ ಫೈನಲ್‌ನಲ್ಲಿ ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ ವಿರುದ್ಧ ಗೆದ್ದು ಮುಂಬೈ ಇಂಡಿಯನ್ಸ್ ಚಾಂಪಿಯನ್ ಆಯಿತು.

2018ರಲ್ಲಿ ವಿಫಲ ಪ್ರಯತ್ನ: ರಣಕಲಿಗಳ ಬ್ಯಾಟಿಂಗ್ ಪಡೆಯೊಂದಿಗೆ ಟ್ರೋಫಿ ಗೆಲ್ಲಲೇಬೇಕೆಂಬ ಛಲದೊಂದಿಗೆ ಕಣಕ್ಕಿಳಿದಿದ್ದ ಆರ್‌ಸಿಬಿಗೆ 2018ರ ಆವೃತ್ತಿಯಲ್ಲೂ ನಿರಾಸೆಯಾಯಿತು. ಈ ಆವೃತ್ತಿಯಲ್ಲೂ 8 ತಂಡಗಳಷ್ಟೇ ಭಾಗವಹಿಸಿದ್ದವು. ಜಿದ್ದಾಜಿದ್ದಿ ಹೋರಾಟದ ಹೊರತಾಗಿಯೂ ವಿರೋಚಿತ ಸೋಲುಗಳಿಂದಲೇ ಆರ್‌ಸಿಬಿ ಪ್ಲೇ ಆಫ್ ಪ್ರವೇಶಿಸುವಲ್ಲಿ ವಿಫಲವಾಯಿತು. 14 ಪಂದ್ಯಗಳಲ್ಲಿ ಕೇವಲ 6 ಪಂದ್ಯ ಗೆದ್ದು 6ನೇ ಸ್ಥಾನ ಪಡೆಯುವ ಮೂಲಕ ಲೀಗ್ ಸುತ್ತಿನಲ್ಲೇ ಹೊರಬಿದ್ದಿತು. ಈ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿತು.

2019ರಲ್ಲೂ ಹೀನಾಯ ಸೋಲು: ಅಭಿಮಾನಿಗಳ ಘೋಷಣೆಯಂತೆ 'ಈ ಸಲ ಕಪ್ ನಮ್ದೇ' ಎನ್ನುವ ಉತ್ಸಾಹದಲ್ಲಿದ್ದ ಆರ್‌ಸಿಬಿ 14 ಪಂದ್ಯಗಳಲ್ಲಿ ಗೆದ್ದಿದ್ದು ಕೇವಲ 5 ಪಂದ್ಯ ಮಾತ್ರ, 8 ತಂಡಗಳು ಪಾಲ್ಗೊಂಡಿದ್ದ ಈ ಆವೃತ್ತಿಯಲ್ಲಿ ಆರ್‌ಸಿಬಿ ಕೊನೆಯ ಸ್ಥಾನ ಬಿಟ್ಟು ಮೇಲೇಳಲೇ ಇಲ್ಲ. ಇನ್ನೂ ಈ ಆವೃತ್ತಿಯಲ್ಲಿ ಫೈನಲ್ ಪ್ರವೇಶಿಸಿದ್ದ ಸಮಬಲ ಎದುರಾಳಿಗಳ ನಡುವೆ ರೋಚಕ ಕಾದಾಟ ನಡೆದಿತ್ತು. ಆದರೆ ಚೆನ್ನೈ ಸೂಪರ್ ಕಿಂಗ್ಸ್ ಕೊನೆಯಲ್ಲಿ ಬ್ಯಾಟಿಂಗ್ ವೈಫಲ್ಯದಿಂದಾಗಿ ಮುಂಬೈ ವಿರುದ್ಧ 1 ರನ್‌ನಿಂದ ಸೋತಿತ್ತು. ಮುಂಬೈ ಇಂಡಿಯನ್ಸ್ ಟ್ರೋಫಿ ಎತ್ತಿಹಿಡಿಯಿತು.

2020ರಲ್ಲಿ ಪ್ಲೇ ಆಫ್‌ನಲ್ಲಿ ಎಲಿಮಿನೇಟ್: 2020ರ ಐಪಿಎಲ್ ಆವೃತ್ತಿಯಲ್ಲೂ 'ಈ ಸಲ ಕಪ್ ನಮ್ದೇ' ಅನ್ನೋ ಧ್ಯೇಯದೊಂದಿಗೇ ಆರ್‌ಸಿಬಿ ಅಖಾಡಕ್ಕಿಳಿದಿತ್ತು. ಈ ಆವೃತ್ತಿಯಲ್ಲಿ ಒಟ್ಟು 8 ಫ್ರಾಂಚೈಸಿಗಳು ಪಾಲ್ಗೊಂಡಿದ್ದವು. ಲೀಗ್ ಸುತ್ತಿನ ಮುಕ್ತಾಯದ ವೇಳೆಗೆ 14 ಪಂದ್ಯಗಳಲ್ಲಿ 7 ಪಂದ್ಯ ಗೆದ್ದು 14 ಅಂಕ ಪಡೆದಿದ್ದ ಆರ್‌ಸಿಬಿ ನಾಲ್ಕನೇ ಸ್ಥಾನದೊಂದಿಗೆ ಪ್ಲೇ ಆಫ್‌ಗೆ ಎಂಟ್ರಿ ಕೊಟ್ಟಿತು. ಆದರೆ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಹೀನಾಯ ಸೋಲಿ ಅನುಭವಿಸಿ ಹೊರ ನಡೆಯಿತು. ಈ ಆವೃತ್ತಿಯಲ್ಲಿ ಮುಂಬೈ ಡೆಲ್ಲಿ ವಿರುದ್ಧ ಫೈನಲ್‌ನಲ್ಲಿ ಗೆದ್ದು ಟ್ರೋಫಿ ಎತ್ತಿ ಹಿಡಿಯಿತು.

2021ರಲ್ಲಿ ಮತ್ತೆ ಹೀನಾಯ ಸೋಲು: 2021ರ ಆವೃತ್ತಿಯಲ್ಲಿ 18 ಅಂಕಗಳೊಂದಿಗೆ 3ನೇ ಸ್ಥಾನ ಪಡೆದು ಪ್ಲೇ ಆಫ್ ಪ್ರವೇಶಿಸಿದ್ದ ಆರ್‌ಸಿಬಿ ಎಲಿಮಿನೇಟರ್ ಪಂದ್ಯದಲ್ಲಿ ಇಯಾನ್ ಮಾರ್ಗನ್ ನಾಯಕತ್ವದ ಕೆಕೆಆರ್ ವಿರುದ್ಧ ಸೋಲಿನೊಂದಿಗೆ ಹೊರಬಿದ್ದಿತು. ಅಂತಿಮವಾಗಿ ಚೆನ್ನೈ ಸೂಪರ್ ಕಿಂಗ್ಸ್ ಟ್ರೋಫಿ ಗೆದ್ದುಕೊಂಡಿತು. ವಿಶ್ವದಾದ್ಯಂತ ಕೋವಿಡ್ ಉಲ್ಬಣಗೊಂಡಿದ್ದರಿಂದ ಈ ಆವೃತ್ತಿಯನ್ನು ಕೆಲ ದಿನಗಳ ವರೆಗೆ ಸ್ಥಗಿತಗೊಳಿಸಲಾಗಿತ್ತು.

2022ರ ಕ್ವಾಲಿಫೈಯರ್–2ನಲ್ಲಿ ರಾಜಸ್ಥಾನ್ ಕೊಕ್ಕೆ: 2022ರ ಆವೃತ್ತಿಯಲ್ಲಿ ಆರ್‌ಸಿಬಿ ಭರ್ಜರಿ ಪ್ರದರ್ಶನವನ್ನೇ ನೀಡಿತ್ತು. ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆಯುವ ಮೂಲಕ ಪ್ಲೇ ಆಫ್‌ಗೆ ಪ್ರವೇಶಿಸಿತ್ತು. ಎಲಿಮಿನೇಟರ್ ಪಂದ್ಯದಲ್ಲಿ ರಜತ್ ಪಾಟಿದಾರ್ ಅವರ ಭರ್ಜರಿ ಶತಕದ ನೆರವಿನಿಂದ ಆಗಷ್ಟೇ ಪದಾರ್ಪಣೆ ಮಾಡಿದ್ದ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಗೆದ್ದು ಬೀಗಿತ್ತು. ಆದರೆ ಕ್ವಾಲಿಫೈಯರ್–2ನಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೋತು ನಿರಾಸೆ ಅನುಭವಿಸಿತು. 2022ರಲ್ಲೇ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟಾನ್ಸ್ ತಂಡ ಚೊಚ್ಚಲ ಆವೃತ್ತಿಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡಿತು.

2023: ಲೀಗ್ ಸುತ್ತಿನಲ್ಲೇ ಹೊರಬಿದ್ದ ಬೆಂಗಳೂರು ಬಾಯ್ಸ್: ಪ್ರಶಸ್ತಿ ಗೆಲ್ಲುವ ಉತ್ಸಾಹದೊಂದಿಗೆ ಕಣಕ್ಕಿಳಿದಿದ್ದ ಆರ್‌ಸಿಬಿ 2023ರ ಆವೃತ್ತಿಯಲ್ಲಿ ಭಾರೀ ನಿರಾಸೆ ಅನುಭವಿಸಿತ್ತು. ಈ ಆವೃತ್ತಿಯಲ್ಲಿ ತಂಡಗಳ ಅಂಖ್ಯೆ 10ಕ್ಕೇರಿತ್ತು. ಲೀಗ್‌ನಲ್ಲಿ 14ರಲ್ಲಿ 7 ಪಂದ್ಯ ಗೆದ್ದಿದ್ದ ಆರ್‌ಸಿಬಿ 14 ಅಂಕ ಗಳಿಸುವ ಮೂಲಕ 6ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಈ ಆವೃತ್ತಿಯ ರೋಚಕ ಫೈನಲ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಗೆದ್ದು ಚೆನ್ನೈ ಸೂಪರ್ ಕಿಂಗ್ಸ್ 5ನೇ ಬಾರಿಗೆ ಟ್ರೋಫಿ ತನ್ನದಾಗಿಸಿಕೊಂಡಿತು.

2024: ರಾಜಸ್ಥಾನ್ ವಿರುದ್ಧ ಆರ್‌ಸಿಬಿ ಎಲಿಮಿನೇಟ್: ಇದು ಆರ್‌ಸಿಬಿಯ ಹೊಸ ಅಧ್ಯಾಯ ಎನ್ನುವ ಹೊಸ ಘೋಷ ವಾಕ್ಯದೊಂದಿಗೆ ಕಣಕ್ಕಿಳಿದಿದ್ದ ಆರ್‌ಸಿಬಿ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಾಕೌಟ್ ಕದನದಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಆದರೆ ರಾಜಸ್ಥಾನ್ ರಾಯಲ್ಸ್ ವಿರುದ್ಧ ಎಲಿಮಿನೇಟರ್ ಪಂದ್ಯದಲ್ಲಿ ಸೋತು ಹೊರ ನಡೆಯಿತು. ಈ ಆವೃತ್ತಿಯಲ್ಲಿ ಪ್ರಬಲ ಪಡೆ ರಚಿಸಿಕೊಂಡಿದ್ದ ಶ್ರೇಯಸ್ ಅಯ್ಯರ್ ನಾಯಕತ್ವದ ಕೆಕೆಆರ್ ತಂಡವು ಟ್ರೋಫಿ ಗೆದ್ದು ಬೀಗಿತು.

ಮೈದಾನದಲ್ಲಿ ಭಾವುಕರಾದ ಕೊಹ್ಲಿ

ಅಹಮದಾಬಾದ್: 18 ವರ್ಷಗಳ ವನವಾಸ ಕೊನೆಗೂ ಅಂತ್ಯಗೊಂಡಿದೆ. 18ರ ನಂಟಿಗೆ ಜಯ ಸಿಕ್ಕಿದೆ. ಆರ್‌ಸಿಬಿ ಕಪ್ ಗೆಲ್ಲುತ್ತಿದ್ದಂತೆ ಆರ್‌ಸಿಬಿ ಅಭಿಮಾನಿಗಳಲ್ಲಿ ಆನಂದಬಾಷ್ಪ ಉಕ್ಕಿ ಹರಿಯಿತು. ಗೆಲುವು ಖಚಿತವಾಗುತ್ತಿದ್ದಂತೆ ವಿರಾಟ್ ಕೊಹ್ಲಿ ಕಣ್ಣೀರು ತಡೆಯಲಾಗಲಿಲ್ಲ. ಕಣ್ಣಲ್ಲಿ ನೀರು ತುಂಬಿ ಕೊಂಡರು. 18 ಆವೃತ್ತಿಗಳಲ್ಲಿ ಯಾವುದೇ ತಂಡಕ್ಕೆ ಹೋಗದೇ ಹಠ ಹಿಡಿದು ಆರ್‌ಸಿಬಿಯಲ್ಲೇ ಇದ್ದ ವಿರಾಟ್ ಕೊಹ್ಲಿ ಟ್ರೋಫಿ ಗೆಲ್ಲುವ ಆಸೆ ಕೊನೆಗೂ ಈಡೇರಿದೆ. ಕಪ್ ಗೆಲುವು ಖಚಿತವಾಗುತ್ತಿದ್ದಂತೆ ಕೊಹ್ಲಿ ಭಾವುಕರಾದರು. ಆ ಒಂದು ಕ್ಷಣ ಅಭಿಮಾನಗಳು ತೃಪ್ತಿ ಭಾವದ ಕಣ್ಣೀರು ಹರಿಸಿದರು. ಪಂಜಾಬ್ ವಿರುದ್ಧದ ಪಂದ್ಯ ಕೊನೆವರೆಗೂ ರೋಚಕತೆಯಿಂದ ಕೂಡಿತ್ತು. ಗೆಲುವು ಖಚಿತವಾಗುತ್ತಿದ್ದಂತೆ ಆರ್‌ಸಿಬಿ ಆಟಗಾರರೆಲ್ಲರೂ ಮೈದಾನದಲ್ಲಿ ಭಾವುಕರಾದರು. ಯಾರಲ್ಲೂ ಕಣ್ಣೀರು ತಡೆಯಲು ಆಗಲಿಲ್ಲ. ಈ ಕ್ಷಣ ನೋಡಿ ಅಭಿಮಾನಿಗಳಲ್ಲು ಕೂಡ ಸಂತಸದ ಹೊನಲು ಕಣ್ಣಲ್ಲಿ ಹರಿಯಿತು. ಈ ವೇಳೆ ಮೈದಾನಕ್ಕೆ ಎಂಟ್ರಿ ಕೊಟ್ಟ ದಂತಕಥೆ ಎಬಿ ಡಿವಿಲಿಯರ್ಸ್ ಅವರನ್ನು ಬಿಗಿದಪ್ಪಿಕೊಂಡು ವಿರಾಟ್ ಕೊಹ್ಲಿ ಕಣ್ಣೀರು ಹಾಕಿದರು. ಎಬಿಡಿ ಕೂಡ ಅಷ್ಟೇ ಭಾವುಕತೆಯಿಂದ ಕೊಹ್ಲಿಯನ್ನು ತಬ್ಬಿಕೊಂಡರು. ಈ ಸನ್ನಿವೇಶ ಕೂಡ ವಿಶೇಷವಾಗಿತ್ತು. ವಿರಾಟ್ ಕೊಹ್ಲಿಗೆ ನಿಜವಾಗಿಯೂ ಇದು ವಿಶೇಷ ದಿನ. ಐಪಿಎಲ್‌ನ 18ನೇ ಆವೃತ್ತಿ ಇದು. ಕೊಹ್ಲಿ ಜೆರ್ಸಿ ನಂಬರ್ 18. ಒಂದಕ್ಕೊಂದು ವಿಶೇಷ ನಂಟು. ಕೊಹ್ಲಿಗೆ ಸಂದ ಗೌರವ ಆರ್‌ಸಿಬಿಗೆ ಸಿಕ್ಕ ಗೆಲುವು.



ಮೂರನೇ ಪುಟದಿಂದ

ಈ ಸಲ ಕಪ್ ನಮ್ದೇ...

ಮೊದಲ ಎಸೆತಕ್ಕೆ ಸಿಕ್ಸರ್ ಬಾರಿಸಿದರಾದರೂ ಎರಡನೇ ಎಸೆತಕ್ಕೆ ಔಟಾದರು. ಭುವನೇಶ್ವರ್‌ಕುಮಾರ್ ಒಂದೇ ಓವರ್‌ನಲ್ಲಿ 2 ವಿಕೆಟ್ ಕಿತ್ತು ಪಂದ್ಯದ ಗತಿ ಬದಲಿಸಿದರು. ಮತ್ತೊಂದೆಡೆ ಅಬ್ಬರಿಸಿದ ಶಶಾಂಕ್ ಸಿಂಗ್ 30 ಎಸೆತಗಳಲ್ಲಿ 6 ಸಿಕ್ಸರ್, 1 ಬೌಂಡರಿ ಒಳಗೊಂಡ ಮಿಂಚಿನ ಅಜೇಯ 61 ರನ್ ಗಳಿಸಿದರಾದರೂ ತಂಡಕ್ಕೆ ಜಯ ತಂದು ಕೊಡಲು ಸಾಧ್ಯವಾಗಲಿಲ್ಲ. ಅಲ್ಲದೇ ನಂತರ ಬಂದ ಬಾಲಂಗೋಚಿಗಳಿಂದ ಯಾವ ರೀತಿಯ ಮ್ಯಾಜಿಕ್ ಸಹ ನಡೆಯಲಿಲ್ಲ. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್, ಕೃನಾಲ್ ಪಾಂಡ್ಯ ತಲಾ 2, ಯಶ್ ದಯಾಳ್, ಜೋಶ್ ಹ್ಯಾಸೆಲ್‌ವುಡ್ ಹಾಗೂ ರೊಮಾರಿಯೋ ಶೆಫರ್ಡ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಪರ ಫಿಲ್ ಸಾಲ್ಟ್ 1 ಸಿಕ್ಸರ್, 2 ಬೌಂಡರಿ ಒಳಗೊಂಡ 16 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದ ಮಯಾಂಕ್ ಅಗರ್ವಾಲ್ ವಿರಾಟ್ ಕೊಹ್ಲಿ ಜೊತೆಗೂಡಿ ಪವರ್ ಪ್ಲೇಯನ್ನು ಬಹಳ ಜಾಣ್ಮೆಯಿಂದ ನಿಭಾಯಿಸಿದರು. ಹೀಗಾಗಿ 6 ಓವರ್ ಗಳು ಮುಗಿದಾಗ ಆರ್ ಸಿಬಿಗೆ 55 ರನ್ ಗಳು ಹರಿದು ಬಂದಿದ್ದವು. ಈ ಹಂತದಲ್ಲಿ 18 ಎಸೆತಗಳಲ್ಲಿ 1 ಸಿಕ್ಸರ್, 2 ಬೌಂಡರಿ ಒಳಗೊಂಡ 24 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಮಾಯಾಂಕ್ ಅಗರ್ವಾಲ್ ಅವರನ್ನು ಯುಜುವೇಂದ್ರ ಚಹಲ್ ಔಟ್ ಮಾಡಿದರು. ಈ ವೇಳೆ ಜೊತೆಗೂಡಿದ ವಿರಾಟ್ ಕೊಹ್ಲಿ ಮತ್ತು ರಜತ್ ಪಾಟೀದಾರ್‌ಭರ್ಜರಿ ಹೊಡೆತಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಜೊತೆಗೆ ಉತ್ತಮ ಸ್ಕೋರ್ ಬೋರ್ಡನ್ನು ಶತಕದತ್ತ ಕೊಂಡೊಯ್ಯುತ್ತಿದ್ದರು. ಈ ಹಂತದಲ್ಲಿ 16 ಎಸೆತಗಳಿಂದ 26 ರನ್ ಗಳಿಸಿದ್ದ ಆರ್‌ಸಿಬಿ ನಾಯಕನನ್ನು ಜಾಮಿಸನ್ ಎಲ್ ಬಿಡಬ್ಲ್ಯೂ ಬಲೆಗೆ ಕೆಡವಿದರು.

ವಿರಾಟ್ ಕೊಹ್ಲಿ ತಾಳ್ಮೆಯ ಇನ್ನಿಂಗ್ಸ್: ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ವಿರಾಟ್ ಕೊಹ್ಲಿ ತಾಳ್ಮೆಯ ಆಟವಾಡಿದರು. ಆದರೆ 15ನೇ ಓವರ್‌ನಲ್ಲಿ ತಂಡದ ಮೊತ್ತ 131 ಆಗಿದ್ದ ವೇಳೆ ಅಜ್ಮತುಲ್ಲಾ ಒಮರಾಜೈ ಅವರು ವಿರಾಟ್ ಕೊಹ್ಲಿ ಅವರನ್ನು ಪೆವಿಲಿಯನ್‌ಗೆ ಅಟ್ಟುವಲ್ಲಿ ಯಶಸ್ವಿಯಾದರು. ಕೊಹ್ಲಿ ಅವರು 39 ಎಸೆತಗಳಿಂದ 3 ಬೌಂಡರಿಗಳಿದ್ದ 45 ರನ್ ಗಳಿಸಿದರು. ಮಧ್ಯಮ ಕ್ರಮಾಂಕದಲ್ಲಿ ಲಿಯಾಮ್ ಲಿವಿಂಗ್ ಸ್ಟನ್ 25, ಜಿತೇಶ್ ಶರ್ಮಾ 24, ರೊಮಾರಿಯೋ ಶೆಫರ್ಡ್ 17 ರನ್ ಗಳಿಸಿದರು. ಪಂಜಾಬ್ ಪರ ಅರ್ಶದೀಪ್ ಸಿಂಗ್, ಜೇಮಿಸನ್ ತಲಾ 3, ಅಜ್ಮತುಲ್ಲಾ ಒಮರಾಜೈ, ವೈಶಾಖ್ ವಿಜಯ್ ಕುಮಾರ್ ಹಾಗೂ ಯಜುವೇಂದ್ರ ಚಹಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಕೃನಾಲ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸೂರ್ಯಕುಮಾರ್ ಯಾದವ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ಮೂರೂವರೆ ಸಾವಿರ ಪೌರಕಾರ್ಮಿಕರಿಗೆ ತಿಂಗಳಿಗಾಗುವಷ್ಟು ದಿನಸಿ ಪದಾರ್ಥ ವಿತರಣೆ; ಮೈಸೂರು ರಾಜವಂಶಸ್ಥ ಯದುವೀರ್ ಮಾಹಿತಿ


ನಾಲ್ವಡಿ ಕೃಷ್ಣರಾಜ ಒಡೆಯರ್

ಮೈಸೂರು, ಜೂ.3(ಬಿಎಲ್‌ಯು)– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ನಾಳೆ (ಜೂನ್ 4) ಮೈಸೂರಿನ ಮೂರೂವರೆ ಸಾವಿರ ಪೌರಕಾರ್ಮಿಕರಿಗೆ ಒಂದು ತಿಂಗಳಿಗಾಗುವಷ್ಟು ದಿನಸಿ ಪದಾರ್ಥಗಳನ್ನು ವಿತರಿಸಲಾಗುವುದು ಎಂದು ಮೈಸೂರು ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಹೆರಿಟೇಜ್ ಹೋಟೆಲ್‌ನಲ್ಲಿ ಮಂಗಳವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ನಗರದ ಮಹಾರಾಣಿ ಕಾಲೇಜು ಮೈದಾನದಲ್ಲಿ ನಾಳೆ ಬೆಳಗ್ಗೆ ಸುಮಾರು 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ದಿನಸಿ ಪದಾರ್ಥಗಳನ್ನು ವಿತರಣೆ ಮಾಡಲಾಗುವುದು. ಈ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅನ್ನದಾತರಾಗಿದ್ದರು. ಈ ಹಿನ್ನೆಲೆ ಅವರ ನೆನಪಿನಲ್ಲಿ ನಮ್ಮ ನಗರ ಸ್ವಚ್ಛ ಮಾಡುವ ಪೌರಕಾರ್ಮಿಕರಿಗೆ ದಿನಸಿ ವಸ್ತುಗಳನ್ನು ನೀಡಿ, ಗೌರವಿಸಲಾಗುವುದು ಎಂದು ತಿಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಸರ್ಕಾರ ಹಾಗೂ ಅರಸು ಮಂಡಳಿಯಿಂದ ಕಾರ್ಯಕ್ರಮ ಆಯೋಜಿಸಿದ್ದು, ಅದರಲ್ಲಿ ನಾನು ಪಾಲ್ಗೊಳ್ಳುತ್ತೇನೆ ಎಂದರು.

ಕಮಲ್‌ಹಾಸನ್ ಸಿನಿಮಾ ಬಹಿಷ್ಕರಿಸಿ: ಕನ್ನಡ ಭಾಷೆಯ ಬಗ್ಗೆ ಅಸಂಬದ್ಧವಾಗಿ ಮಾತನಾಡಿರುವ ನಟ ಕಮಲ್ ಹಾಸನ್ ಸಿನಿಮಾಗೆ ಬಹಿಷ್ಕಾರ ಹಾಕುವ ಮೂಲಕ ಜನರೇ ತಕ್ಕ ಪಾಠ ಕಲಿಸಬೇಕು ಎಂದು ಯದುವೀರ್ ಸಲಹೆ ನೀಡಿದರು.

ತಾವು ನೀಡಿರುವ ಹೇಳಿಕೆಗೆ ಕ್ಷಮೆ ಕೇಳದೆ ಹಠಕ್ಕೆ ಬಿದ್ದು, ಮೊಂಡುವಾದ ಮಾಡುತ್ತಿರುವ ಕಮಲ್‌ಹಾಸನ್ ವರ್ತನೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ತಮ್ಮ ನಟನೆಯ ಸಿನಿಮಾ ಬಿಡುಗಡೆ ಕೋರಿ ಹೈಕೋರ್ಟ್ ಮೊರೆ ಹೋಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್ ಅವರು, ಸಿನಿಮಾ ವಿಚಾರಕ್ಕೆ ಮೊರೆ ಹೋಗಿರಬಹುದು. ಆದರೆ ಕನ್ನಡದ ಬಗ್ಗೆ ಹಗುರವಾಗಿ ಮಾತನಾಡಿರುವ ಕಮಲ್‌ಹಾಸನ್ ಸಿನಿಮಾ ಬಹಿಷ್ಕರಿಸಿ ಜನರು ತಕ್ಕ ಪಾಠ ಕಲಿಸಬೇಕು ಎಂದು ಹೇಳಿದರು.

ನಾಲ್ವಡಿ ಪ್ರತಿಮೆ ಮೇಲೆ ಅರ್ಧ ಗಂಟೆ ಕುಳಿತಿದ್ದರೂ ಪೊಲೀಸರು ಬಾರದಿರುವುದು ಖಂಡನೀಯ!


ಯದುವೀರ್

ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಮೇಲೆ ವ್ಯಕ್ತಿಯೊಬ್ಬ ಸುಮಾರು ಅರ್ಧ ತಾಸು ಕುಳಿತಿದ್ದರೂ ಯಾವೊಬ್ಬ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಬಾರದಿರುವುದು ಖಂಡನೀಯ ಎಂದು ಯದುವೀರ್ ಅಸಮಾಧಾನ ವ್ಯಕ್ತಪಡಿಸಿದರು. ಕೆ.ಆರ್.ವೃತ್ತ ನಗರದ ಹೃದಯ ಭಾಗವಾಗಿದ್ದು, ಇಲ್ಲಿ ಪೊಲೀಸರು ಕರ್ತವ್ಯದಲ್ಲಿದ್ದರೂ ಅವರ ಗಮನಕ್ಕೆ ಬಾರದಿರುವುದು ಹೇಗೆ ಎಂದು ಪ್ರಶ್ನಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಮೇಲೆ ಕುಳಿತ ವ್ಯಕ್ತಿ ಮಾನಸಿಕ ಅಸ್ವಸ್ಥ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಆದರೆ ಮುಂದೆ ಇಂತಹ ಘಟನೆ ಆಗದಂತೆ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ಸೂಚಿಸಿದ್ದೇನೆ ಎಂದು ಯದುವೀರ್ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸೇರಿದಂತೆ ನಗರದಲ್ಲಿರುವ ಹಲವು ಸಾಧಕರ ಪ್ರತಿಮೆಗಳಿಗೆ ಪೊಲೀಸರು ಸೂಕ್ತ ರಕ್ಷಣೆ ನೀಡಬೇಕು. ಈ ಸಂಬಂಧ ಪ್ರತಿಮೆ ಬಳಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು. ಸಾಧಕರ ಪ್ರತಿಮೆಗಳನ್ನು ಅವಮಾನಿಸುವ ಇಂತಹ ಕೃತ್ಯಗಳು ಮುಂದೆ ನಡೆಯಬಾರದು. ಒಂದು ವೇಳೆ ನಡೆದರೆ ಅಂತಹ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಯದುವೀರ್ ಆಗ್ರಹಿಸಿದರು.

ಕಡಕೊಳ ಕಂಟೈನರ್ ಯಾರ್ಡ್ ಕಾರ್ಯಾರಂಭಕ್ಕೆ ಗಮನಹರಿಸುವೆ

ಮೈಸೂರು ಹೊರವಲಯ ಕಡಕೊಳದಲ್ಲಿರುವ ಕಂಟೈನರ್ ಯಾರ್ಡ್ ಕಾರ್ಯಾರಂಭ ಮಾಡಲು ಕೇಂದ್ರ ಸರ್ಕಾರದ ಕಸ್ಟಮ್ಸ್ ಇಲಾಖೆ ಕ್ಲಿಯರೆನ್ಸ್ ನೀಡದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದ ಸಂಬಂಧಿಸಿದ ಅಧಿಕಾರಿಗಳ ಬಳಿ ಚರ್ಚೆ ಮಾಡುತ್ತೇನೆ ಎಂದರು.



'ಮೈಸೂರು ಮಿತ್ರ'ನ ಸೋಮವಾರದ ಸಂಚಿಕೆಯಲ್ಲಿ 'ಲೋಕಾರ್ಪಣೆಗೊಂಡು ವರ್ಷ ಕಳೆದರೂ ಅನುಮತಿ ನೀಡದ ಕಸ್ಟಮ್ಸ್ ಇಲಾಖೆ- ಜಿಕೋ ಎನ್ನುತ್ತಿರುವ ಮೈಸೂರಿನ ಕಡಕೊಳದ ಕಂಟೈನರ್' ಶೀರ್ಷಿಕೆಯ ವರದಿ ಬಗ್ಗೆ ಯದುವೀರ್ ಪ್ರತಿಕ್ರಿಯೆ ನೀಡಿದರು. ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಈಗ ನಮ್ಮ ಗಮನಕ್ಕೆ ತಂದಿದ್ದೀರಾ. ಸಮಗ್ರ ಮಾಹಿತಿ ಪಡೆದು ಸಂಬಂಧಿಸಿದ ಇಲಾಖಾ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ ಎಂದು ಯದುವೀರ್ ತಿಳಿಸಿದರು.

ಶೇ.5 ರಿಯಾಯ್ತಿಯಡಿ 2 ತಿಂಗಳಲ್ಲಿ ಪಾಲಿಕೆಗೆ 150 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹ

ಮೈಸೂರು, ಜೂ.3(ಆರ್‌ಕೆ)–ಶೇ.5 ರಿಯಾಯಿತಿ ಸೌಲಭ್ಯ ಬಳಸಿಕೊಂಡು ಏ.1ರಿಂದ ಮೇ 31ರವರೆಗೆ ಮೈಸೂರು ಮಹಾನಗರಪಾಲಿಕೆಗೆ ಒಟ್ಟು 150 ಕೋಟಿ ರೂ. ಆಸ್ತಿ ತೆರಿಗೆ ಪಾವತಿಸಲಾಗಿದೆ.

ಆರಂಭದಲ್ಲಿ ಸರ್ಕಾರ ಏಪ್ರಿಲ್ ಮಾಹೆಗೆ ಮಾತ್ರ ರಿಯಾಯಿತಿ ಘೋಷಿಸಿದ್ದರಿಂದ ಒಂದೇ ತಿಂಗಳಲ್ಲಿ ಸುಮಾರು 90 ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು. ಆಸ್ತಿ ಮಾಲೀಕರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸರ್ಕಾರವು ಜೂನ್ 30ರವರೆಗೂ ರಿಯಾಯಿತಿ ವಿಸ್ತರಿಸಿದೆ. ಈ ನಡುವೆ ಮೇ 31ರವರೆಗೆ ಒಟ್ಟು 150 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾದಂತಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಜೂನ್ 30ರವರೆಗೂ ರಿಯಾಯಿತಿ ಇರುವುದರಿಂದ ಇನ್ನೂ 50 ಕೋಟಿ ರೂ. ತೆರಿಗೆ ಸಂಗ್ರಹವಾಗಬಹುದೆಂದು ನಿರೀಕ್ಷಿಸಲಾಗಿದೆ. ನಮ್ಮ ಗುರಿ ಇನ್ನೂ 100 ಕೋಟಿ ಸಂಗ್ರಹಿಸುವುದಾಗಿದ್ದು, ಆಸ್ತಿಗಳ ಮಾಲೀಕರು ಯಾವ ರೀತಿ ಸ್ಪಂದಿಸುತ್ತಾರೆಂದು ನೋಡಬೇಕು ಎಂದು ತಿಳಿಸಿದರು.



ನಾಗರಿಕರ ಅನುಕೂಲಕ್ಕಾಗಿ ಎಲ್ಲಾ 9 ವಲಯ ಕಚೇರಿಗಳಲ್ಲಿ ತೆರಿಗೆದಾರರ ಅನುಕೂಲಕ್ಕಾಗಿ ಪೆಂಡಾಲ್, ಆಸನ ವ್ಯವಸ್ಥೆ ಮಾಡಿದ್ದೇವೆ. ಹೆಚ್ಚುವರಿ ಕೌಂಟರ್‌ಗಳನ್ನು ತೆರೆದಿದ್ದು, ಸಿಬ್ಬಂದಿ ತೆರಿಗೆ ಪಾವತಿಸುವವರಿಗೆ ಅಗತ್ಯ ಮಾಹಿತಿ ನೀಡಿ ಸಹಕರಿಸುತ್ತಿರುವುದರಿಂದ ಜನರ ಪ್ರತಿಕ್ರಿಯೆ ಉತ್ತಮವಾಗಿದೆ ಎಂದು ಸೋಮಶೇಖರ್ ತಿಳಿಸಿದರು.



ಅಭಿನಂದನೆ...
ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಇತ್ತೀಚೆಗೆ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಉದ್ಯಮಿ ಹಾಗೂ ಯುವ ಕಾಂಗ್ರೆಸ್ ಮುಖಂಡ ಎನ್.ಸಂದೇಶ್ ಅವರನ್ನು ತಮ್ಮ ನಿವಾಸದಲ್ಲಿ ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಇನ್ನಿತರರು ಉಪಸ್ಥಿತರಿದ್ದರು.

ಶಾಂತಿ ಕದಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

ಬಕ್ರೀದ್ ಹಿನ್ನೆಲೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಎಚ್ಚರಿಕೆ

ಮೈಸೂರು, ಜೂ.3(ಆರ್‌ಕೆ)–ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಬೇಕೆಂದು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಸರ್ವ ಧರ್ಮಗಳ ಮುಖಂಡರೊಂದಿಗೆ ಇಂದು ಬೆಳಗ್ಗೆ ಶಾಂತಿ ಸಭೆ ನಡೆಸಿದ ಅವರು, ಮುಂಬರುವ ಬಕ್ರೀದ್ ಹಬ್ಬವನ್ನು ಶಾಂತಿ, ಸಂತೋಷದಿಂದ ಆಚರಿಸಬೇಕು. ಆ ವೇಳೆ ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡಬಾರದು ಎಂದು ಸಲಹೆ ನೀಡಿದರು.


ಮೈಸೂರಿನ ನಗರ ಪೊಲೀಸ್ ಕಮಿಷ್ನರ್ ಕಚೇರಿ ಸಭಾಂಗಣದಲ್ಲಿ ಸೀಮಾ ಲಾಟ್ಕರ್ ಬಕ್ರೀದ್ ಹಿನ್ನೆಲೆಯಲ್ಲಿ ಶಾಂತಿ ಸಭೆ ನಡೆಸಿದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಕೆ.ಎಸ್.ಸುಂದರರಾಜ್, ಮೈಸೂರು ಮಹಾನಗರಪಾಲಿಕೆ ಕಮಿಷ್ನರ್ ಶೇಖ್ ತನ್ವೀರ್ ಆಸಿಫ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸಮಾಜದಲ್ಲಿ ಶಾಂತಿ ಕಾಪಾಡಿ ಜನರು ನೆಮ್ಮದಿಯಿಂದಿರಲು ಸರ್ವ ಧರ್ಮಗಳ ಮುಖಂಡರು ಸಹಕರಿಸಬೇಕು. ಸಾಮಾಜಿಕ ಜಾಲತಾಣಗಳ ಮೂಲಕ ಊಹಾಪೋಹ ಸುದ್ದಿಗಳನ್ನು ಬಿತ್ತರಿಸಿ ಸಮಾಜದಲ್ಲಿ ಶಾಂತಿ ಕದಡುವವರ ವಿರುದ್ಧ ಜಾಗೃತ ತಂಡ ಕಾರ್ಯ ನಿರ್ವಹಿಸುತ್ತಿರುತ್ತದೆ ಎಂದು ಕಮಿಷ್ನರ್ ತಿಳಿಸಿದರು.

ನಾಳೆ (ಜೂ.4)ಯಿಂದ ಮೈಸೂರು ನಗರದಾದ್ಯಂತ ಚೆಕ್‌ಪೋಸ್ಟ್ ಮಾಡಿ ಎಲ್ಲಾ ಬಗೆಯ ವಾಹನಗಳನ್ನು ತಪಾಸಣೆ ಮಾಡಲಾಗುತ್ತದೆ. ಸಿಸಿ ಕ್ಯಾಮರಾಗಳ ಮೂಲಕ ಚಲನ–ವಲನಗಳನ್ನು ಗಮನಿಸಿ ಸಂಶಯ ಬಂದಲ್ಲಿ ಆಯಾ ಠಾಣಾ ಇನ್ಸ್‌ಪೆಕ್ಟರ್ ಮತ್ತು ತಂಡದ ಸಿಬ್ಬಂದಿ ಕಾರ್ಯಪ್ರವೃತ್ತರಾಗಿ ಅಗತ್ಯ ಕ್ರಮ ವಹಿಸಲಿದ್ದಾರೆ ಎಂದು ಸೀಮಾ ಲಾಟ್ಕರ್ ನುಡಿದರು.

ಬಕ್ರೀದ್ ಹಬ್ಬದ ಸಂದರ್ಭ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿ, ಸ್ವಚ್ಛತೆ, ಕಸ ಸಂಗ್ರಹ ಮಾಡಲು ಹೆಚ್ಚುವರಿ ಸಿಬ್ಬಂದಿ ಮತ್ತು ವಾಹನಗಳ ವ್ಯವಸ್ಥೆ ಮಾಡಬೇಕೆಂದು ಮುಖಂಡರು ಮನವಿ ಮಾಡಿದರು. ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಸ್ವಚ್ಛತೆ, ಕುಡಿಯುವ ನೀರು, ತ್ಯಾಜ್ಯ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮನೆಯಲ್ಲೇ ಹಸಿ ಮತ್ತು ಒಣ ಕಸ ವಿಂಗಡಿಸಿ ಪಾಲಿಕೆ ವಾಹನಗಳಿಗೆ ಕೊಡಬೇಕು. ಕಸವನ್ನು ಎಲ್ಲೆಂದರಲ್ಲಿ ಎಸೆಯಬಾರದು. ಸ್ವಚ್ಛತೆಗೆ ಪಾಲಿಕೆ ಸಿಬ್ಬಂದಿಯೊಂದಿಗೆ ಸಹಕರಿಸಬೇಕೆಂದು ಪಾಲಿಕೆ ಕಮಿಷ್ನರ್ ಇದೇ ವೇಳೆ ತಿಳಿಸಿದರು.

ಡಿಸಿಪಿಗಳಾದ ಎಂ.ಮುತ್ತುರಾಜ್, ಕೆ.ಎಸ್.ಸುಂದರರಾಜ್, ಸಿದ್ದನಗೌಡ ವೈಪಾಟೀಲ್, ವಿವಿಧ ಧರ್ಮಗಳ ಮುಖಂಡರು ಶಾಂತಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಸ್ವಚ್ಛತಾ ಕಾರ್ಯ



ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಅಂಗವಾಗಿ ಪ್ರಸಿದ್ಧ ರಾಜ ಮನೆತನದ ಶ್ರೀ ನಂಜುಂಡೇಶ್ವರ ದೇವಸ್ಥಾನ ಸಂತೆಪೇಟೆ ಆವರಣದಲ್ಲಿ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಸಂಸದ ಯದುವೀರ್ ಒಡೆಯರ್, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಸುದರ್ಶನ್, ಬಾಬಣ್ಣ, ಶ್ರೀನಿವಾಸ್, ಚರಣ್, ಜನಾರ್ಧನ್, ಅಶೋಕ್, ಪ್ರವೀಣ್, ಪಾಪಣ್ಣ, ವಿನೋದ್ ಮತ್ತಿತರರಿದ್ದರು.

ಬೃಹತ್–ಮಧ್ಯಮ ಕೈಗಾರಿಕೆ ಸಚಿವರ ಮೈಸೂರು ಜಿಲ್ಲಾ ಪ್ರವಾಸ ಇಂದು

ಮೈಸೂರು, ಜೂ.3– ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಜೂ.4ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಮಧ್ಯಾಹ್ನ 1.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿರುವ ಕರ್ನಾಟಕ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯ ವತಿಯಿಂದ ಸಿ.ಎಸ್.ಆರ್. ಅನುದಾನದಡಿ ಅರಣ್ಯ ಇಲಾಖೆ ಸಿಬ್ಬಂದಿಗೆ ಉಪಯುಕ್ತ ಪರಿಕರಗಳಿರುವ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುವರು.



ನಾಳೆ ಚೈತನ್ಯ ಪ್ರತಿಭಾ ಪುರಸ್ಕಾರ

ಮೈಸೂರು, ಜೂ.3(ಎಂಟಿವೈ)– ಮೈಸೂರಿನ ನಾದ ಬ್ರಹ್ಮ ಸಂಗೀತ ಸಭಾಂಗಣದಲ್ಲಿ ಜೂ.5ರಂದು ಸಂಜೆ 4.30ಕ್ಕೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 100ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಚೈತನ್ಯ ಪ್ರತಿಭಾ ಪುರಸ್ಕಾರ' ನೀಡಲಾಗುತ್ತಿದೆ ಎಂದು ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೂ ವಿವಿಧ ಶೀರ್ಷಿಕೆಯಲ್ಲಿ ಗೀತ ಗಾಯನ ಕಾರ್ಯಕ್ರಮ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದ ಜನ ಚೈತನ್ಯ ಫೌಂಡೇಷನ್, ಪ್ರತಿವರ್ಷವೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಚೈತನ್ಯ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ. ಈ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಅಗತ್ಯವಿರುವ ಪರಿಕರಗಳನ್ನು ನೀಡಲಾಗುತ್ತದೆ ಎಂದರು.

ನಾದಬ್ರಹ್ಮ ಸಂಗೀತ ಸಭಾದಲ್ಲಿ ಜೂ.5ರಂದು ಸಂಜೆ 4.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ ಡಾ.ಎಂ.ಎನ್.ವೆಂಕಟರಾಜು, ಶಿಕ್ಷಣ ತಜ್ಞೆ ಡಾ.ಎಲ್.ಸವಿತ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಎಸ್.ಅಮರ್, ಜಾಯ್ಸ್ ವೈಶಾಕ್, ಅರಕಲವಾಡಿ ನಾಗೇಂದ್ರ, ಎನ್.ಶ್ರೀನಿವಾಸಲು, ಬಿ.ಎಸ್.ವಿಜಯ್ ಆನಂದ್ ಇದ್ದರು.

ಇಂದು ಶೈವಾಗಮ ರೀತ್ಯಾ ಅರ್ಚಕರ ಪೂಜಾ ತರಬೇತಿ; ಪಂಚಾಂಗ ಪರಿಚಯ

ಮೈಸೂರು,ಜೂ.3(ಎಂಟಿವೈ)–ಮೈಸೂರಿನ ಶಿವಾರ್ಚಕರ ಹಾಸ್ಟೆಲ್‌ನಲ್ಲಿ ನಾಳೆ(ಜೂ.4) ಬೆಳಗ್ಗೆ 11 ಗಂಟೆಗೆ ಶೈವಾಗಮ ರೀತ್ಯಾ ಅರ್ಚಕರ ಪೂಜಾ ತರಬೇತಿ ಹಾಗೂ ಪಂಚಾಂಗ ಪರಿಚಯ, ಉಪನಯನ ಶಿಬಿರದ ಸಮಾರೋಪ ಸಮಾರಂಭ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ವತಿಯಿಂದ ಶೈವಾಗಮ ರೀತ್ಯಾ ಅರ್ಚಕರ ಪೂಜಾ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ತರಬೇತಿ ಶಿಬಿರ ಸಮಾಪ್ತಿಯಾಗಿದ್ದು, ಸಮಾರೋಪ ಸಮಾರಂಭ ಆಯೋಜಿಸಲಾಗಿದೆ. ಹುಣಸೂರು ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಶಾಸಕ ಅನಿಲ್ ಚಿಕ್ಕಮಾದು ಪಾಲ್ಗೊಳ್ಳಲಿದ್ದಾರೆ. ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಸ್.ಟಿ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು, ಮಹಾರಾಜ ಸಂಸ್ಕೃತ ಪಾಠಶಾಲೆ ಪ್ರಾಂಶುಪಾಲ ಪಿ.ಸತ್ಯನಾರಾಯಣ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಿದ್ದಾರೆ. ಮಹಾರಾಜ ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಎಂ.ಮಲ್ಲಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ 7.30ಕ್ಕೆ ಶ್ರೀ ಬಂದಂತಮ್ಮ ದೇವಾಲಯದ ಮುಂಭಾಗದಿಂದ ದಕ್ಷಿಣಾಮೂರ್ತಿ, ಶಿವಾದ್ವೈತ ಪ್ರವರ್ತಕರಾದ ಶ್ರೀಕಂಠ ಶಿವಾಚಾರ್ಯ ಗುರುಗಳ ಭಾವಚಿತ್ರ ಮೆರವಣಿಗೆ ನಡೆಯಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಪುಷ್ಪಾರ್ಚನೆ ಮಾಡಲಿದ್ದಾರೆ. ವೀರಗಾಸೆ ಕಲಾತಂಡ, ಕಳಶ ಹೊತ್ತ ಮಹಿಳೆಯರು, ಮಕ್ಕಳಿಂದ ವೇದಘೋಷ ಮೊಳಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಕಾರ್ಯದರ್ಶಿ ನಾಗೇಂದ್ರ, ಕೋಶಾಧ್ಯಕ್ಷ ಗಿರೀಶ್ ಶಿವಾರ್ಚಕ, ನಿರ್ದೇಶಕರಾದ ಟಿ.ಮಂಜುನಾಥ್, ಶಂಕರ ಉಪಸ್ಥಿತರಿದ್ದರು.

ಮೈಸೂರು ಸಂತೆಪೇಟೆಯಲ್ಲಿ ಎರಡು ಗೋದಾಮುಗಳ ಮೇಲೆ ದಾಳಿ 458 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶ; 15 ಸಾವಿರ ದಂಡ

ಪಾಲಿಕೆ ವಲಯ ಕಚೇರಿ 6ರ ಅಧಿಕಾರಿಗಳಿಂದ ಕಾರ್ಯಾಚರಣೆ

ಮೈಸೂರು,ಜೂ.3(ಪಿಎಂ)– ಮೈಸೂರಿನ ಸಂತೆಪೇಟೆಯ ಎರಡು ಗೋದಾಮುಗಳ ಮೇಲೆ ಮಂಗಳವಾರ ದಾಳಿ ನಡೆಸಿದ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 6ರ ಅಧಿಕಾರಿಗಳ ತಂಡವು ಒಟ್ಟು 458 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು ಒಟ್ಟಾರೆ 15 ಸಾವಿರ ರೂ. ದಂಡ ವಿಧಿಸಿದೆ.

ಇಂದು ಮಧ್ಯಾಹ್ನ 12ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳ ತಂಡವು, ಸಂತೆಪೇಟೆಯ ಗೋದಾಮುಗಳಲ್ಲಿ ತಪಾಸಣೆ ನಡೆಸಿತು. ಈ ವೇಳೆ ರಾಮ್‌ದೇವ್ ಬ್ಯಾಗ್ಸ್‌ನ ಗೋದಾಮಿನಲ್ಲಿ ನಿಷೇಧಿತ ಪ್ಲಾಸ್ಟಿಕ್‌ನಲ್ಲಿ ಸಿದ್ಧಪಡಿಸಿರುವ ಸಿಲ್ವರ್ ಕೋಟೆಡ್ ಪ್ಲೇಟ್‌ಗಳು 280 ಕೆಜಿ ಪ್ರಮಾಣದಲ್ಲಿ ಪತ್ತೆಯಾದವು.

ಅದೇ ರೀತಿಯಲ್ಲಿ ಬಾಲಾಜಿ ಮಾರ್ಕೇಟಿಂಗ್‌ನ ಗೋದಾಮಿನಲ್ಲಿ ನಿಷೇಧಿತ ಪ್ಲಾಸ್ಟಿಕ್‌ನಲ್ಲಿ ತಯಾರಿಸಿರುವ ಕವರ್, ಚಮಚ ಸೇರಿದಂತೆ ಮೊದಲಾದ ಸಾಮಗ್ರಿಗಳು 178 ಕೆಜಿ ಪ್ರಮಾಣದಲ್ಲಿ ಪತ್ತೆಯಾಯಿತು. ಇವುಗಳನ್ನು ವಶಪಡಿಸಿಕೊಂಡ ಅಧಿಕಾರಿಗಳ ತಂಡವು, ಗೋದಾಮುಗಳ ಮಾಲೀಕರಿಗೆ ದಂಡ ವಿಧಿಸಿತು.


ಮೈಸೂರಿನ ಸಂತೆಪೇಟೆಯಲ್ಲಿ ನಗರಪಾಲಿಕೆ ವಲಯ ಕಚೇರಿ 6ರ ಅಧಿಕಾರಿಗಳು ಮತ್ತು ಸಿಬ್ಬಂದಿ ಮಂಗಳವಾರ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡರು.

ಕಾರ್ಯಾಚರಣೆ ನೇತೃತ್ವ ವಹಿಸಿದ್ದ ಪಾಲಿಕೆ ವಲಯ ಕಚೇರಿ 6ರ ಪರಿಸರ ಇಂಜಿನಿಯರ್ ಮೈತ್ರಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸಂತೆಪೇಟೆಯ ಎಲ್ಲಾ ಗೋದಾಮುಗಳಲ್ಲಿ ತಪಾಸಣೆ ನಡೆಸಲಾಯಿತು. ಈ ವೇಳೆ ನಿಷೇಧಿತ ಪ್ಲಾಸ್ಟಿಕ್‌ನಲ್ಲಿ ತಯಾರಿಸಿರುವ ವಿವಿಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಮ್‌ದೇವ್ ಬ್ಯಾಗ್ಸ್‌ನ ಗೋದಾಮಿನಲ್ಲಿ ಇದೇ ಮೊದಲ ಬಾರಿಗೆ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳು ಪತ್ತೆಯಾದ ಹಿನ್ನೆಲೆಯಲ್ಲಿ ಇದರ ಮಾಲೀಕರಿಗೆ 5 ಸಾವಿರ ರೂ. ದಂಡ ವಿಧಿಸಲಾಗಿದೆ ಎಂದರು.

ಆದರೆ ಸತತ 2ನೇ ಬಾರಿಗೆ ನಿಷೇಧಿತ ಪ್ಲಾಸ್ಟಿಕ್ ಪತ್ತೆಯಾದ ಕಾರಣ ಬಾಲಾಜಿ ಮಾರ್ಕೇಟಿಂಗ್ ಗೋದಾಮು ಮಾಲೀಕರಿಗೆ 10 ಸಾವಿರ ರೂ. ದಂಡ ವಿಧಿಸಲಾಗಿದೆ ಎಂದರು. ವಲಯ ಕಚೇರಿ 6ರ ವಲಯ ಆಯುಕ್ತೆ ಪ್ರತಿಭಾ, ಹೆಲ್ತ್ ಇನ್ಸ್‌ಪೆಕ್ಟರ್ ಕೃಷ್ಣ ಮಂಜುಕುಮಾರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ದೇಶ - ವಿದೇಶ

ಪಾಕಿಸ್ತಾನದ ಟಿಕ್‌ಟಾಕರ್ ಸನಾ ಯುಸೂಫ್ ಗುಂಡಿಕ್ಕಿ ಹತ್ಯೆ!

ಇಸ್ಲಾಮಾಬಾದ್: ಪಾಕಿಸ್ತಾನದ ಜನಪ್ರಿಯ ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್ ಸನಾ ಯುಸೂಫ್ ಅವರನ್ನು ಅವರ ನಿವಾಸದಲ್ಲಿಯೇ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. 17 ವರ್ಷದ ಸನಾ ಯುಸೂಫ್, ಇನ್‌ಸ್ಟಾಗ್ರಾಮ್‌ನಲ್ಲಿ ಸುಮಾರು 5 ಲಕ್ಷ ಹಿಂಬಾಲಕರನ್ನು ಹೊಂದಿದ್ದು, ಟಿಕ್‌ಟಾಕ್ ಮೂಲಕ ಭಾರಿ ಜನಪ್ರಿಯತೆ ಪಡೆದಿದ್ದರು. ಮಹಿಳಾ ಹಕ್ಕುಗಳು ಮತ್ತು ಶೈಕ್ಷಣಿಕ ಜಾಗೃತಿ ಬಗ್ಗೆ ತಮ್ಮ ವಿಡಿಯೋಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದರು. 'ಇಸ್ಲಾಮಾಬಾದ್‌ನ ಸೆಕ್ಟರ್ ಜಿ–13ನಲ್ಲಿರುವ ಅವರ ನಿವಾಸದಲ್ಲಿ ಈ ಘಟನೆ ನಡೆದಿದೆ. ಮನೆಗೆ ಪ್ರವೇಶಿಸಿದ್ದ ಆರೋಪಿ ಸನಾ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದಾನೆ. ಆಕೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಸನಾ ಅವರದ್ದು ಮರ್ಯಾದೆಗೇಡು ಹತ್ಯೆಯಾಗಿರಬಹುದು ಎಂದು ಅವರು ಶಂಕಿಸಿದ್ದಾರೆ. ಸನಾ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಪಾಕಿಸ್ತಾನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸ್ಥಳಾಂತರಿಸಲಾಗಿದೆ. ಪ್ರಕರಣ ಸಂಬಂಧ ಈವರೆಗೆ ಯಾರನ್ನು ಬಂಧಿಸಿಲ್ಲ ಎಂದು ವರದಿಗಳು ತಿಳಿಸಿವೆ.



ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಉಲ್ಬಣ: 5 ಲಕ್ಷಕ್ಕೂ ಅಧಿಕ ಮಂದಿಗೆ ತೊಂದರೆ


ಗುವಾಹಟಿ: ಅಸ್ಸಾಂನಲ್ಲಿ ಮಂಗಳವಾರವೂ ಮಳೆಯ ಅಬ್ಬರ ಮುಂದುವರಿದಿದ್ದು, ಪ್ರವಾಹ ಪರಿಸ್ಥಿತಿ ಉಲ್ಬಣಗೊಂಡಿದೆ. 22 ಜಿಲ್ಲೆಗಳ 5.35 ಲಕ್ಷಕ್ಕೂ ಹೆಚ್ಚು ಜನರು ಪ್ರವಾಹದಿಂದ ತೊಂದರೆಗೀಡಾಗಿದ್ದು, ಹವಾಮಾನ ಇಲಾಖೆಯು ರಾಜ್ಯದ ಕೆಲವು ಭಾಗಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ನೀಡಿದೆ. ಪ್ರಧಾನಿ ಮೋದಿ ಮಂಗಳವಾರ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಿಗೆ ಕರೆ ಮಾಡಿ, ಪ್ರವಾಹ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದು, ಕೇಂದ್ರದ ಸಂಪೂರ್ಣ ಬೆಂಬಲದ ಭರವಸೆ ನೀಡಿದ್ದಾರೆ. ಹಿಮಂತ ಅವರು ಪ್ರವಾಹದಿಂದ ಅತಿ ಹೆಚ್ಚು ಹಾನಿಗೊಳಗಾದ ಪ್ರದೇಶಗಳಲ್ಲಿ ಒಂದಾಗಿರುವ ಕಛಾರ್ ಜಿಲ್ಲೆಗೆ ಭೇಟಿ ನೀಡಿ ಸಂತ್ರಸ್ತರ ಜತೆ ಮಾತುಕತೆ ನಡೆಸಿದ್ದಾರೆ. ಗುವಾಹಟಿಯ ಪ್ರಾದೇಶಿಕ ಹವಾಮಾನ ಕೇಂದ್ರವು ಧುಬ್ರಿ, ದಕ್ಷಿಣ ಸಲ್ಮಾರ ಮನಕಚಾರ್, ಗೋಲ್‌ಪಾರಾ ಮತ್ತು ಕೊಕ್ರಝಾರ್ ಜಿಲ್ಲೆಗಳಿಗೆ ಮಂಗಳವಾರ 'ಆರೆಂಜ್ ಅಲರ್ಟ್' ನೀಡಿದೆ. ಪ್ರವಾಹ ಮತ್ತು ಭೂಕುಸಿತ ಸೇರಿದಂತೆ ಮಳೆ ಸಂಬಂಧಿ ಅವಘಡಗಳಿಂದ ಒಟ್ಟು 11 ಮಂದಿ ಮೃತಪಟ್ಟಿದ್ದು ಇಬ್ಬರು ನಾಪತ್ತೆಯಾಗಿದ್ದಾರೆ. ಒಟ್ಟಾರೆ ಪ್ರವಾಹ ಪರಿಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಷ್ಯಾದ ಅಂಡರ್‌ವಾಟರ್ ಸೇತುವೆ ಧ್ವಂಸ ಮಾಡಿದ ಉಕ್ರೇನ್


ಕೀವ್: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಮತ್ತೆ ಉಕ್ರೇನ್ ಸೇನೆ ಮುನ್ನಡೆ ಸಾಧಿಸಿದ್ದು, ಇದೀಗ ರಷ್ಯಾದ ಅಂಡರ್‌ವಾಟರ್ ಸೇತುವೆಯನ್ನೇ ಧ್ವಂಸ ಮಾಡಿರುವುದಾಗಿ ಉಕ್ರೇನ್ ಘೋಷಿಸಿದೆ.

ರಷ್ಯಾದ ಅತ್ಯಂತ ಪ್ರಮುಖ ಸೇತುವೆಗಳಲ್ಲಿ ಒಂದಾದ ರಷ್ಯಾದಿಂದ ಕ್ರೈಮಿಯಾಗೆ ಸಂಪರ್ಕ ಕಲ್ಪಿಸುವ ಅಂಡರ್‌ವಾಟರ್ ಸೇತುವೆಯನ್ನು ತನ್ನ ಸ್ಫೋಟಕಗಳನ್ನು ಬಳಸಿ ಧ್ವಂಸ ಮಾಡಿರುವುದಾಗಿ ಉಕ್ರೇನ್ ಘೋಷಿಸಿದೆ. ಉಕ್ರೇನ್‌ನ SBU ಭದ್ರತಾ ಸೇವೆಯು ಮಂಗಳವಾರ, ನೀರಿನ ಮಟ್ಟಕ್ಕಿಂತ ಕೆಳಗಿರುವ ರಷ್ಯಾ ಮತ್ತು ಕ್ರಿಮಿಯನ್ ಪರ್ಯಾಯ ದ್ವೀಪವನ್ನು ಸಂಪರ್ಕಿಸುವ ರಸ್ತೆ ಮತ್ತು ರೈಲು ಸೇತುವೆ ಮೇಲೆ ಸ್ಫೋಟಕಗಳೊಂದಿಗೆ ಡಿಕ್ಕಿ ಹೊಡೆದಿದೆ ಎಂದು ಹೇಳಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಉಕ್ರೇನ್, 'SBU ಮಂಗಳವಾರ ಬೆಳಿಗ್ಗೆ 1,100 ಕಿಲೋಗ್ರಾಂಗಳಷ್ಟು (2,420 ಪೌಂಡ್‌ಗಳು) ಸ್ಫೋಟಕಗಳನ್ನು ಬಳಸಿ ಸೇತುವೆ ನೀರೊಳಗಿನ ಕಂಬಗಳನ್ನು ಹಾನಿಗೊಳಿಸಿದೆ. ಇದು ಈ ಹಿಂದೆ ಉಕ್ರೇನ್‌ನಲ್ಲಿ ರಷ್ಯಾದ ಪಡೆಗಳಿಗೆ ಪ್ರಮುಖ ಪೂರೈಕೆ ಮಾರ್ಗವಾಗಿತ್ತು ಎಂದು ಹೇಳಿದೆ.



ಸಿಕ್ಕಿಂ ಭೂಕುಸಿತ: 6 ಮಂದಿ ಸೇನಾ ಸಿಬ್ಬಂದಿಗಾಗಿ ಶೋಧ

ಕೋಲ್ಕತ್ತಾ: ಸಿಕ್ಕಿಂನ ಸೇನಾ ಶಿಬಿರದ ಮೇಲೆ ಸೋಮವಾರ ಸಂಭವಿಸಿದ ಭೂಕುಸಿತದಲ್ಲಿ ನಾಪತ್ತೆಯಾಗಿರುವ 6 ಮಂದಿ ಸೇನಾ ಸಿಬ್ಬಂದಿಗಳಿಗಾಗಿ ಕಾರ್ಯಾಚರಣೆ ಮುಂದುವರೆದಿದ್ದು, ಕಾರ್ಯಾಚರಣೆಗೆ ಇದೀಗ 23 ಮಂದಿ ಎನ್‌ಡಿಆರ್‌ಎಫ್ ಸಿಬ್ಬಂದಿ ಕೂಡ ಕೈಜೋಡಿಸಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಬಳಿ ಕಾರ್ಯಾಚರಣೆಗೆ ಅಗತ್ಯವಿರುವ ಸ್ಯಾಟಲೈಟ್ ಫೋನ್ ಹಾಗೂ ಅಗತ್ಯ ತುರ್ತು ಉಪಕರಣಗಳಿದ್ದು, ಕಾರ್ಯಾಚರಣೆಗೆ ಸಾಕಷ್ಟು ಸಹಾಯಕವಾಗಲಿದೆ ಎನ್ನಲಾಗಿದೆ. ಭಾರಿ ಮಳೆಯಿಂದಾಗಿ ಭಾನುವಾರ ಸಂಜೆ 7 ಗಂಟೆ ಸುಮಾರಿಗೆ ಸೇನಾ ಶಿಬಿರದ ಮೇಲೆ ಭೂಕುಸಿತ ಸಂಭವಿಸಿತ್ತು. ಘಟನೆಯಲ್ಲಿ ಮೂವರು ಸಿಬ್ಬಂದಿ ಸಾವನ್ನಪ್ಪಿದ್ದರೆ, ನಾಲ್ವರು ಗಾಯಗೊಂಡಿದ್ದರು. ಅಲ್ಲದೆ 6 ಮಂದಿ ಸೇನಾ ಸಿಬ್ಬಂದಿ ಕೂಡ ನಾಪತ್ತೆಯಾಗಿದ್ದಾರೆಂದು ಅಧಿಕಾರಿಗಳು ತಿಳಿಸಿದ್ದರು. ಈ ನಡುವೆ ಹವಾಮಾನ ಪರಿಸ್ಥಿತಿಗಳನ್ನು ಅವಲಂಬಿಸಿ ಪರ್ಯಾಯ ಪಾದಚಾರಿ ಮಾರ್ಗಗಳನ್ನು ಅನ್ವೇಷಿಸಲು ಮತ್ತು ಹೆಲಿಪ್ಯಾಡ್ ಕಾರ್ಯಾಚರಣೆಗಳ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವಂತೆ ಆಡಳಿತ ಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದೆ.



ಪಾಕಿಸ್ತಾನ: ಸ್ಥಳಾಂತರದ ವೇಳೆ 200ಕ್ಕೂ ಹೆಚ್ಚು ಕೈದಿಗಳು ಪರಾರಿ

ಕರಾಚಿ: ಭೂಕಂಪನದ ಮುನ್ಸೂಚನೆ ಕಾರಣದಿಂದ ಕರಾಚಿಯ ಮಾಲೀರ್ ಕಾರಾಗೃಹದಿಂದ ಬಂದಿಗಳನ್ನು ಸ್ಥಳಾಂತರಿಸುತ್ತಿದ್ದ ವೇಳೆ ನಡೆದ ಗದ್ದಲದ ಸಂದರ್ಭದಲ್ಲಿ ಕನಿಷ್ಠ 216 ಕೈದಿಗಳು ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಘಟನೆಯಲ್ಲಿ ಒಬ್ಬ ಕೈದಿ ಮೃತಪಟ್ಟಿದ್ದು, ಅರೆಸೇನಾ ಪಡೆಯ ಮೂವರು ಮತ್ತು ಕಾರಾಗೃಹದ ಒಬ್ಬ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ಹೇಳಿದೆ.

ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾಚಿಯಲ್ಲಿ ಹಲವು ಬಾರಿ ಭೂಮಿ ಕಂಪಿಸಿತ್ತು. ಈ ಕಾರಣದಿಂದ 600ಕ್ಕೂ ಹೆಚ್ಚು ಕೈದಿಗಳನ್ನು ಬ್ಯಾರಕ್‌ಗಳಿಂದ ಸ್ಥಳಾಂತರ ಮಾಡಲಾಗಿತ್ತು. ಗದ್ದಲದ ಸಮಯದಲ್ಲಿ 216 ಕೈದಿಗಳು ಪರಾರಿಯಾಗಿದ್ದರು. ತಪ್ಪಿಸಿಕೊಂಡವರ ಪೈಕಿ ಸುಮಾರು 80ಕ್ಕೂ ಹೆಚ್ಚು ಕೈದಿಗಳನ್ನು ಪುನಃ ಬಂಧಿಸಲಾಗಿದೆ ಎಂದು ಕಾರಾಗೃಹದ ಅಧೀಕ್ಷಕ ಅರ್ಷದ್ ಶಾ ತಿಳಿಸಿದ್ದಾರೆ. 135ಕ್ಕೂ ಹೆಚ್ಚು ಕೈದಿಗಳು ಇನ್ನೂ ಪತ್ತೆಯಾಗಿಲ್ಲ. ಅವರ ಬಂಧನಕ್ಕೆ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಪರಾರಿಯಾದ ಕೈದಿಗಳ ಪತ್ತೆಗಾಗಿ ವಿವಿಧ ಇಲಾಖೆಗಳು ಜಂಟಿ ಕಾರ್ಯಾಚರಣೆ ನಡೆಸುತ್ತಿವೆ ಎಂದು ತಿಳಿಸಿದರು.

ಅವಧಿಗೆ ಮೊದಲೇ ಹಾರಂಗಿ ಜಲಾಶಯ ಬಹುತೇಕ ಭರ್ತಿ



ಅವಧಿಗೆ ಮೊದಲೇ ಮೈದುಂಬುತ್ತಿರುವ ಹಾರಂಗಿ ಜಲಾಶಯ.

ಮಡಿಕೇರಿ, ಜೂ 3– ಹಾರಂಗಿ ಜಲಾಶಯದ ನೀರಿನ ಮೂಲವಾದ ಮಡಿಕೇರಿ, ಮಾದಾಪುರ, ಸೋಮವಾರಪೇಟೆ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿರುವ ಕಾರಣ ಹಾರಂಗಿ ಜಲಾಶಯದ ಒಳ ಹರಿವಿನ ಪ್ರಮಾಣ ತೀವ್ರ ಗತಿಯಲ್ಲಿ ಏರಿಕೆ ಕಾಣುತ್ತಿದೆ. ಹಟ್ಟಿಹೊಳೆ, ಮಾದಾಪುರ ನದಿಗಳಲ್ಲೂ ನೀರಿನ ಪ್ರಮಾಣ ಏರಿದ್ದು, ಸುಂಟಿಕೊಪ್ಪ ಸಮೀಪದ ಗರಗಂದೂರು ಬಳಿ ಹಾರಂಗಿ ಹಿನ್ನೀರು ಶೇಖರಣೆಯಾಗಿ ಸಮುದ್ರದಂತೆ ಭಾಸವಾಗುತ್ತಿದೆ.

ಜಲಾಶಯ ಬಹುತೇಕ ಭರ್ತಿ : ಮೇ ಕೊನೆಯ ವಾರ ಹಾಗೂ ಜೂನ್ ಪ್ರಾರಂಭದಲ್ಲೇ ಕುಂಬದ್ರೋಣ ಮಳೆ ಅಬ್ಬರಿಸಿದ ಪರಿಣಾಮ ಹಾರಂಗಿ ಜಲಾಶಯಕ್ಕೆ ಉತ್ತಮ ನೀರು ಹರಿದು ಬಂದಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಪ್ರಸ್ತುತ 2851.13 ಅಡಿ ನೀರು ಸಂಗ್ರಹವಾಗುವ ಮೂಲಕ ಜಲಾಶಯ ಜೂನ್ ತಿಂಗಳ ಆರಂಭದಲ್ಲೇ ಬಹುತೇಕ ಭರ್ತಿಯಾದಂತಾಗಿದೆ. ಜಲಾಶಯಕ್ಕೆ 1541 ಕ್ಯೂಸೆಕ್ ನೀರಿನ ಒಳ ಹರಿವು ದಾಖಲಾಗಿದ್ದು, ಸಂಪೂರ್ಣವಾಗಿ ತುಂಬಲು 8 ಅಡಿಗಳಷ್ಟೇ ನೀರಿನ ಅಗತ್ಯವಿದೆ. ಜಲಾಶಯದಿಂದ 100 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದ್ದು, ಮಳೆ ಮತ್ತಷ್ಟು ಮುಂದುವರೆದು ಒಳ ಹರಿವಿನಲ್ಲಿ ಏರಿಕೆ ಕಂಡಲ್ಲಿ ಜಲಾಶಯದ ಭದ್ರತೆಯ ದೃಷ್ಟಿಯಿಂದ ಹೆಚ್ಚಿನ ನೀರನ್ನು ನದಿ ಪಾತ್ರಕ್ಕೆ ಹರಿಸಲಾಗುತ್ತದೆ.

ಪ್ರವಾಹ ಮುನ್ನೆಚ್ಚರಿಕೆ: ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಹೀಗಾದಲ್ಲಿ ಒಳ ಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಜಲಾಶಯದಲ್ಲಿ ಶೀಘ್ರವೇ ಗರಿಷ್ಠ ಮಟ್ಟ ತಲುಪುವುದರಿಂದ ಯಾವುದೇ ಕ್ಷಣದಲ್ಲೂ ನದಿಗೆ ಹೆಚ್ಚುವರಿ ನೀರನ್ನು ಹರಿಸಲಾಗುತ್ತದೆ. ಈಗಾಗಲೇ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಏರಿಕೆ ಯಾಗಿದ್ದು, ಹಾರಂಗಿ ಜಲಾಶಯದಿಂದ ಹೆಚ್ಚುವರಿ ನೀರು ಹರಿಸಿದಲ್ಲಿ ಕೂಡಿಗೆ ಬಳಿ ಕಾವೇರಿ ನದಿ ನೀರು ಹಾಗೂ ಹಾರಂಗಿ ಜಲಾಶಯದ ನೀರು ಸಂಗಮವಾಗಿ ಪ್ರವಾಹ ಏರ್ಪಡುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿಯ ಪಾತ್ರದಲ್ಲಿರುವ ಮತ್ತು ನದಿಯ ಎರಡು ದಂಡೆಯಲ್ಲಿ ವಾಸಿಸುತ್ತಿರುವ ಜನರು ತಮ್ಮ ಆಸ್ತಿಪಾಸ್ತಿ ಹಾಗೂ ಜಾನುವಾರು ರಕ್ಷಣೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹಾರಂಗಿ ಪುನರ್ವಸತಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಐ.ಕೆ.ಪುಟ್ಟಸ್ವಾಮಿ ಮನವಿ ಮಾಡಿದ್ದಾರೆ.

'ಝಿಪ್ ಲೈನ್ ರೋಪ್' ಮೂಲಕ ಕೊಠಡಿಗೆ ಬಂದಿಳಿದ ವಿದ್ಯಾರ್ಥಿಗಳು



'ಝಿಪ್ ಲೈನ್ ರೋಪ್' ಮೂಲಕ ಶಾಲಾ ಕೊಠಡಿಗೆ ಬರುತ್ತಿರುವ ವಿದ್ಯಾರ್ಥಿಗಳು

ಮಡಿಕೇರಿ, ಜೂ. 3–ಶನಿವಾರಸಂತೆ ಬಳಿಯ ಮುಳ್ಳೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಆರಂಭೋತ್ಸವ ವಿನೂತನ ಹಾಗೂ ಸಾಹಸಮಯವಾಗಿ ನಡೆಯಿತು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಹೂಗುಚ್ಚ ನೀಡಿ ಸ್ಪಾರ್ಕ್ಸ್ ಲೈಟ್ ಹೊತ್ತಿಸಿ ಅದ್ಧೂರಿಯಾಗಿ ಸ್ವಾಗತಿಸಿದ್ದು ಒಂದು ಕಡೆಯಾದರೆ, ಸಾಹಸ ಕ್ರೀಡೆಗಳಲ್ಲಿ ಒಂದಾದ 'ಝಿಪ್ ಲೈನ್ ರೋಪ್' ಮೂಲಕ ವಿದ್ಯಾರ್ಥಿಗಳು ಶಾಲಾ ತರಗತಿ ಕೊಠಡಿಗೆ ಬಂದಿಳಿದರು.

ಸುಮಾರು 20 ಅಡಿ ಎತ್ತರದ ಝಿಪ್ ಲೈನ್ ರೋಪ್‌ನಲ್ಲಿ ವಿದ್ಯಾರ್ಥಿಗಳು ಸ್ವಲ್ಪವೂ ಹೆದರದೆ 100 ಅಡಿ ದೂರ ಕ್ರಮಿಸುವ ಮೂಲಕ ಸಾಹಸ ಮೆರೆದರು. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಮುಖ್ಯ ಶಿಕ್ಷಕ ಸತೀಶ್ ಶೇಡ್ ನೆಟ್, ಹೆಲ್ಮೆಟ್ ಬಳಸಿ ಮಕ್ಕಳಲ್ಲಿ ಸಾಹಸ ಕ್ರೀಡೆಗಳಲ್ಲಿ ಆಸಕ್ತಿ ಮೂಡುವಂತೆ ಅತ್ಯು ತ್ತಮವಾಗಿ ಕ್ರೀಡೆಯನ್ನು ಆಯೋಜಿಸಿದ್ದರು. ವಿದ್ಯಾರ್ಥಿಗಳಂತೂ ಈ ಕಾರ್ಯಕ್ರಮದಲ್ಲಿ ಉತ್ಸುಕರಾಗಿ ಭಾಗವಹಿಸಿ ಸಂಭ್ರಮಿಸಿದರು.

ಮುಖ್ಯ ಶಿಕ್ಷಕ ಸತೀಶ್, ಸಾಹಸ ಕ್ರೀಡೆಗಳು ನಿಯಂತ್ರಿತ ಅಪಾಯವನ್ನು ಒಳಗೊಂಡಿರುವುದರಿಂದ, ಮಕ್ಕಳಿಗೆ ಜೀವನದ ಅಪಾಯಗಳನ್ನು ಸುರಕ್ಷಿತವಾಗಿ ಹೇಗೆ ನಿಭಾಯಿಸಬೇಕು ಎಂಬ ಜ್ಞಾನ ಬೆಳೆಸುತ್ತದೆ. ಶಾಲೆಗಳು ಇಂತಹ ಚಟುವಟಿಕೆಗೆ ಹೆಚ್ಚಿನ ಒತ್ತು ನೀಡಬೇಕು. ಇದರಿಂದ ಮಕ್ಕಳಲ್ಲಿ ಧೈರ್ಯ, ಆತ್ಮ ವಿಶ್ವಾಸ, ಆರೋಗ್ಯ ಮತ್ತು ಮಾನಸಿಕ ಶಕ್ತಿಯ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು

ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ಯಾವೆಲ್ಲ ಮಾರ್ಗಸೂಚಿಗಳನ್ನು ಅನುಸರಿಸಬೇಕು. ಕಲಿಕೆಯಲ್ಲಿ ಹೇಗೆ ತೊಡಗಿಸಿಕೊಳ್ಳಬೇಕು ಎಂಬುದನ್ನು ಶಿಕ್ಷಕ ಜಾನ್ ಪಾಲ್ಸ್ ಡಿಸೋಜ ತಿಳಿಸಿದರು. ಶಿಕ್ಷಕಿ ಶೀಲಾ, ಎಸ್‌ಡಿಎಂಸಿ ಅಧ್ಯಕ್ಷೆ ಪಂಕಜ ಹಾಗೂ ವಿದ್ಯಾರ್ಥಿಗಳ ಪೋಷಕರು ಹಾಜರಿದ್ದರು.

ಕುಶಾಲನಗರ: ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪೌರನೌಕರರ ಪ್ರತಿಭಟನೆ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪೌರಕಾರ್ಮಿಕರು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು

ಕುಶಾಲನಗರ, ಜೂ.3– ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪೌರಕಾರ್ಮಿಕರು ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಇಂದಿನಿಂದ ಪುರಸಭೆ ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ

ಪೌರ ಸೇವಾ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ಆರ್. ಗಣೇಶ್ ಮಾತನಾಡಿ, ನೌಕರರ ಹಲವಾರು ಬೇಡಿಕೆಗಳು ಸುಮಾರು ದಶಕಗಳಿಂದ ಬಾಕಿ ಉಳಿದಿದ್ದು, ಈ ಬೇಡಿಕೆಗಳನ್ನು ಈವರೆಗೂ ಈಡೇರಿಸಿಲ್ಲ. ಈ ಕುರಿತಂತೆ ಸರ್ಕಾರಕ್ಕೆ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬೆಳಗಾವಿ ಜಿಲ್ಲೆಯ ರಾಯಭಾಗ ಪಟ್ಟಣದಲ್ಲಿ ಏ. 12ರಂದು ನಡೆದ ರಾಜ್ಯದ ಪರಿಷತ್ ಸಭೆಯಲ್ಲಿ ಮುಷ್ಕರ ನೋಟಿಸ್‌ನ್ನು ಸರ್ಕಾರಕ್ಕೆ ಸಲ್ಲಿಸಿ ಬೇಡಿಕೆಗಳನ್ನು ಈಡೇರಿಸದೇ ಇದ್ದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲು ನಿರ್ಣಯಿಸಲಾಗಿತ್ತು. ಅದರಂತೆ ಗಡುವು ಅಂತ್ಯಗೊಂಡಿರುವುದರಿಂದ ಸೋಮವಾರದಿಂದ ರಾಜ್ಯಾದ್ಯಂತ ಸ್ವಚ್ಛತೆ ಮತ್ತು ಕಚೇರಿ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಮುಷ್ಕರ ಆರಂಭಿಸಲಾಗಿದೆ ಎಂದರು. ತಾಲೂಕು ಪೌರನೌಕರರ ಸಂಘದ ಉಪಾಧ್ಯಕ್ಷೆ, ಕಾರ್ಯದರ್ಶಿ ನಂಜುಂಡ, ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಮೂವರು ಪತ್ರಕರ್ತರಿಗೆ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ



ಆನಂದ್ ಕೊಡಗು



ಇಸ್ಮಾಯಿಲ್



ಹೆಚ್ ಜೆ ರಾಕೇಶ್

ಮಡಿಕೇರಿ, ಜೂ.3– ಕೊಡಗು ಪ್ರೆಸ್ ಕ್ಲಬ್‌ನಿಂದ ಕೊಡಮಾಡುವ ವಾರ್ಷಿಕ ಪ್ರಶಸ್ತಿಗೆ ಮೂವರು ಪತ್ರಕರ್ತರು ಭಾಜನರಾಗಿದ್ದಾರೆ ಎಂದು ಕೊಡಗು ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಎಂ.ಕೆ.ಆದರ್ಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಪತ್ರಕರ್ತ ಕೆ.ಬಿ.ಮಹಂತೇಶ್ ಸ್ಮರಣಾರ್ಥ ಪ್ರೆಸ್ ಕ್ಲಬ್‌ನಿಂದ ನೀಡುವ ಅತ್ಯುತ್ತಮ ಪರಿಣಾಮಕಾರಿ ವರದಿ ಪ್ರಶಸ್ತಿಯನ್ನು ಹೆಚ್.ಜೆ. ರಾಕೇಶ್ ಪಡೆದುಕೊಂಡಿದ್ದಾರೆ. ಕೋವರ್ ಕೊಲ್ಲಿ ಇಂದ್ರೇಶ್ ಮತ್ತು ಕುಟುಂಬವರ್ಗ ತಮ್ಮ ತಂದೆ ಬಿ.ವಿ.ಚಂದ್ರಶೇಖರ್ ಹಾಗೂ ತಾಯಿ ಪುಷ್ಪಲತಾ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಮಾನವೀಯ ವರದಿ ಪ್ರಶಸ್ತಿಗೆ ಕೆ.ಎಂ. ಇಸ್ಮಾಯಿಲ್ ಕಂಡಕರೆ ಗಳಿಸಿಕೊಂಡಿದ್ದಾರೆ.

ಎಂ.ಎನ್.ಚಂದ್ರಮೋಹನ್ ತಮ್ಮ ತಂದೆ ಎಂ.ನಾರಾಯಣ ಹಾಗೂ ತಾಯಿ ಎನ್.ಪದ್ಮಾವತಿ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಪರಿಸರ ವರದಿ ಪ್ರಶಸ್ತಿಗೆ ಆನಂದ್ ಕೊಡಗು ಪಡೆದುಕೊಂಡಿದ್ದಾರೆ. ಪ್ರಶಸ್ತಿಯು ತಲಾ 5 ಸಾವಿರ ರೂಪಾಯಿ ನಗದು ಹಾಗೂ ಫಲಕ ಒಳಗೊಂಡಿದೆ. ಜೂ. 8 ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್. ಎಸ್. ವೆಂಕಟೇಶಮೂರ್ತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದಿಂದ ಖ್ಯಾತ ಕವಿ ಹೆಚ್ ಎಸ್ ವೆಂಕಟೇಶ ಮೂರ್ತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಾಪೋಕ್ಲು, ಜೂ. 3– ಇಲ್ಲಿಗೆ ಸಮೀಪದ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ವತಿಯಿಂದ ಅಗಲಿದ ಚೇತನ ಹೆಚ್. ಎಸ್ ವೆಂಕಟೇಶ ಮೂರ್ತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅಧ್ಯಕ್ಷತೆಯಲ್ಲಿ ಚೇರಂಬಾಣೆ ಗೌಡ ಸಮಾಜದಲ್ಲಿ ನಡೆದ ಮಾಸಿಕ ಸಭೆಯಲ್ಲಿ ಹೆಚ್ ಎಸ್ ವೆಂಕಟೇಶ ಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ಮೌನ ಪ್ರಾರ್ಥನೆ ಸಲ್ಲಿಸಲಾಯಿತು.

ಒಕ್ಕೂಟದ ವತಿಯಿಂದ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಅಗಲಿದ ಅಮೂಲ್ಯ ಚೇತನಗಳ ಪರಿಚಯ ಸಾಧನೆಗಳನ್ನು ಮೆಲುಕು ಹಾಕಿದಂತಾಗುತ್ತದೆ ಹಾಗೂ ಅವರ ಬದುಕು ಬರಹಗಳಿಗೆ ಗೌರವ ನೀಡಿದಂತಾಗುತ್ತದೆ ಎಂದು ತುಳಸಿ ಮೋಹನ್ ಹೇಳಿದರು.

ಹೆಚ್ ಎಸ್ ವಿ ಅವರ ಭಾವಗೀತೆಗಳನ್ನು ಕೇಕಡ ಪೂಜಾ ನಾಗೇಂದ್ರ, ಬೈಮನ ಜ್ಯೋತಿ ತಿಮ್ಮಯ್ಯ ಸುಶ್ರಾವ್ಯವಾಗಿ ಹಾಡಿದರು. ಕೂಡಕಂಡಿ ಸೋನಿ ಸುದೀಪ್ ಕವನ ವಾಚಿಸಿದರು. ಒಕ್ಕೂಟದ ಉಪಾಧ್ಯಕ್ಷೆ ಹೊಸೊಕ್ಲು ಲತಾ ಮೊಣ್ಣಪ್ಪ, ಕೂರನ ಸುಶೀಲ ಅಪ್ಪಾಜಿ ಭಾಗವಹಿಸಿದ್ದರು.

ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಆಗ್ರಹಿಸಿ ಮಂಗಲ ಗ್ರಾಮಸ್ಥರ ಪ್ರತಿಭಟನೆ

24 ತಾಸಿನೊಳಗೆ ರೆಕಾರ್ಡ್ ನೀಡಲು ಜಿಪಂ ಸಿಇಓ ಸೂಚನೆ



ತಾಲೂಕಿನ ಮಂಗಲ ಗ್ರಾಮದಲ್ಲಿ ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡುವಂತೆ ಒತ್ತಾಯಿಸಿ ಗ್ರಾಮಸ್ಥರು ಮನವಿ ಸಲ್ಲಿಸಿದರು.

ಚಾಮರಾಜನಗರ, ಜೂ 3– ತಾಲೂಕಿನ ಮಂಗಲ ಗ್ರಾಮದಲ್ಲಿ ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡುವಂತೆ ಒತ್ತಾಯಿಸಿ ಗ್ರಾಮಸ್ಥರು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.


ಪ್ರತಿಭಟನಾಕಾರರನ್ನು ತಮ್ಮ ಕಚೇರಿಗೆ ಬರಮಾಡಿಕೊಂಡು ಮನವಿ ಆಲಿಸಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೋನಾರೋತ್, 24 ತಾಸಿನೊಳಗೆ ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್‌ನ ಕಾಮಗಾರಿ ರೆಕಾರ್ಡ್ ಕೊಡುವಂತೆ ಸ್ಥಳದಲ್ಲೇ ಹಾಜರಿದ್ದ ಪ್ರಭಾರ ಕಾರ್ಯಪಾಲಕ ಅಭಿಯಂತರ ಜಗದೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆದಿಶೇಷರವರಿಗೆ ಆದೇಶಿಸಿದರು.

ಗ್ರಾಮಸ್ಥರಿಗೆ ಅನುಕೂಲವಾಗಲೆಂದು ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಲು ಮಂಜೂರಾಗಿದ್ದು, ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡಿದೆ. ಮಂಜೂರಾತಿ ಆದೇಶದಂತೆ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಆರ್ ಡಬ್ಲ್ಯೂಎಸ್ ಇಲಾಖೆಯ ಅಧಿಕಾರಿಗಳು ಗುದ್ದಲಿಪೂಜೆ ಮಾಡಿಸಿದ್ದಾರೆಂದು ಒತ್ತಾಯಿಸಿದರು.

ಟ್ಯಾಂಕ್ ನಿರ್ಮಾಣ ಮಾಡಲು ಹೋದಾಗ ಗ್ರಾಮದ ಆರ್.ಶಿವಣ್ಣ ಡ್ರಾಮಾ ಮಾಸ್ಟರ್ ಮತ್ತವರ ಸಂಬಂಧಿಕರಾದ ನಾಗಭೂಷಣ್, ಆಶಾ ಕಾರ್ಯಕರ್ತೆ ಮಾಲತಿ, ಅವರ ಪತಿ ಬಸವರಾಜು ಮತ್ತು ಕುಟುಂಬ ವರ್ಗದವರು ಕೂಡ ತೊಂದರೆ ಕೊಡುತ್ತಿದ್ದಾರೆ. ಈ ಜಾಗವನ್ನು ಶಿವಣ್ಣ ಅವರು ತಮ್ಮ ತಾಯಿಯ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ. ಬೇರೆಯವರಿಗೆ ಕುಮ್ಮಕ್ಕು ನೀಡಿ ಕಾಮಗಾರಿ ಸ್ಥಗಿತಗೊಳಿಸುತ್ತಾರೆ. ಆಗಾಗಿ ಅಕ್ರಮ ಖಾತೆ ರದ್ದು ಪಡಿಸಿ ಅದೇ ಸ್ಥಳದಲ್ಲೇ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡಿ ಗ್ರಾಮಕ್ಕೆ ಕುಡಿಯುವ ನೀರಿನ ಅನುಕೂಲ ಮಾಡಿಕೊಡಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗ್ರಾ.ಪಂ. ಉಪಾಧ್ಯಕ್ಷ ಸುಮ, ಮಾಜಿ ಸದಸ್ಯ ರವಿ, ಕಾನ್ಸಿರಾಂ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹೊಂಡರಬಾಳು ವಾಸು, ಬಿಎಸ್‌ಪಿ ರಾಜ್ಯ ಕಾರಕಾರಿಣಿ ಸಮಿತಿ ಸದಸ್ಯ ಬ್ಯಾಡಮೂಡ್ಲು ಬಸವಣ್ಣ, ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ರಮೇಶ್, ಗ್ರಾಮದ ಮುಖಂಡರಾದ ರವಿಕುಮಾರ್, ಕೃಷ್ಣಮೂರ್ತಿ, ನಾಗೇಶ್, ಮಲ್ಲು, ಮಂಜು, ಭಾಗ್ಯಮ್ಮ, ಮಹದೇವಮ್ಮ, ಪಾರ್ವತಿ, ಸಿದ್ದಮ್ಮ, ಶಿವಮ್ಮ ಇತರರು ಭಾಗವಹಿಸಿದ್ದರು.

ಮುಖ್ಯಮಂತ್ರಿಯವರನ್ನು ರೈತ ಸಂಘ ಅವಮಾನಿಸಿಲ್ಲ: ಹೊನ್ನೂರು ಪ್ರಕಾಶ್



ಚಾಮುಲ್‌ನಲ್ಲಿ ಐಸ್‌ಕ್ರೀಂ ಘಟಕದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ನಿಂದನೆ ಸತ್ಯಕ್ಕೆ ದೂರವಾದದ್ದು ಎಂಬ ಮನವಿ ಪತ್ರವನ್ನು ಮುಖ್ಯಮಂತ್ರಿಯವರಿಗೆ ತಹಸೀಲ್ದಾರ್ ಮೂಲಕ ಸಲ್ಲಿಸಲಾಯಿತು.

ಯಳಂದೂರು, ಜೂ.3(ವಿ.ನಾಗರಾಜು)– ಜಿಲ್ಲೆಯ ಕುದೇರು ಗ್ರಾಮದಲ್ಲಿರುವ ಚಾಮುಲ್‌ನಲ್ಲಿ ನಂದಿನಿ ಐಸ್ ಕ್ರೀಂ ಘಟಕ ಸ್ಥಾಪಿಸುವ ನಿರ್ಧಾರದ ವಿರುದ್ಧ ರೈತ ಸಂಘದಿಂದ ನಡೆದ ಪ್ರತಿಭಟನೆಯಲ್ಲಿ ನಾನು ಮುಖ್ಯಮಂತ್ರಿಯವರನ್ನು ನಿಂದಿಸಿದ್ದೇನೆ ಎಂಬ ಕಾಂಗ್ರೆಸ್ ಕಾರ್ಯಕರ್ತರ ಆರೋಪ ಸತ್ಯಕ್ಕೆ ದೂರವಾದ ಮಾತಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಮುಂಭಾಗ ರೈತರೊಂದಿಗೆ ಆಗಮಿಸಿ ಮುಖ್ಯಮಂತ್ರಿಯವರಿಗೆ ತಹಸೀಲ್ದಾರ್ ಮೂಲಕ ಮನವಿ ಪತ್ರ ಸಲ್ಲಿಸಿ ಮಾತನಾಡಿ, ಪ್ರತಿಭಟನೆಯಲ್ಲಿ ನಾವು ವ್ಯಕ್ತಿಗತವಾಗಿ ಯಾರನ್ನೂ ಬೈದಿಲ್ಲ. ಮುಖ್ಯಮಂತ್ರಿಯವರಿಗೆ ಬಾಲ ಕಟ್ ಮಾಡುತ್ತೇವೆ ಎಂದು ಹೇಳಲು ಹೋಗಿ ಬಾಯ್ತಪ್ಪಿನಿಂದ ಕಾಲು ಕಟ್ ಮಾಡುತ್ತೇನೆ ಎಂದು ಹೇಳಿದ್ದೇನೆ ವ್ಯಕ್ತಿಗತವಾಗಿ ಯಾರನ್ನೂ ನಿಂದಿಸಿಲ್ಲ ಎಂದು ಸ್ಪಷ್ಟೀಕರಿಸಿದ್ದಾರೆ.

ಅಹಿಂಸಾತ್ಮಕ ಪ್ರತಿಭಟನೆಗಳನ್ನೇ ಮಾಡುತ್ತಾ ಬಂದಿರುವ ನಮ್ಮ ಹೋರಾಟಗಳು ಸದಾ ರೈತ ಹಾಗೂ ಜನಪರವಾಗಿರುತ್ತದೆ, ಇಲ್ಲಿ ಅಸಂವಿಧಾನಿಕ ಪದಗಳನ್ನು ಬಳಸಿಲ್ಲ. ರೈತಸಂಘಟನೆಯ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಕೂಡಲೇ ನಿಲ್ಲಿಸುವಂತೆ ಪಕ್ಷದ ಕಾರ್ಯಕರ್ತರಿಗೆ ಬುದ್ಧಿವಾದ ಹೇಳಬೇಕು, ಇಲ್ಲವಾದಲ್ಲಿ ರೈತರೇ ನಿಮಗೆ ಬುದ್ಧಿ ಹೇಳಬೇಕಾಗುತ್ತದೆ ಎಂದು ಎಚ್ಚರಿಸುವ ಮನವಿಪತ್ರವನ್ನು ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್ ಬಸವರಾಜು ಮೂಲಕ ಸಲ್ಲಿಸಿದರು.

ಚಾಮಲಾಪುರ ಸಿದ್ದಲಿಂಗಸ್ವಾಮಿ, ವಿ. ರವಿ. ರಾಜೇಶ್, ಮಲ್ಲಪ್ಪ, ಪುಟ್ಟಮಾದೇಗೌಡ, ಎಂ. ಪ್ರಸನ್ನ, ಶಿವಪ್ರಸಾದ್, ಮಹೇಶ್, ವೃಷಬೇಂದ್ರ, ಪುಟ್ಟಸ್ವಾಮಿ, ಮಂಜುನಾಥ, ಜಿ. ಕೇಶವಮೂರ್ತಿ, ಮಹೇಶ್ ಮೊದಲಾದವರಿದ್ದರು.

ಕಚೇರಿಯಲ್ಲೇ ಸರ್ಕಾರಿ ನೌಕರನ ಸಾವು



ಯಳಂದೂರು, ಜೂ. 3–ಕಚೇರಿಯಲ್ಲಿ ಕೆಲಸ ಮಾಡುತ್ತಿರುವಾಗಲೇ ಸರ್ಕಾರಿ ನೌಕರರೊಬ್ಬರು ಮೃತಪಟ್ಟಿರುವ ಘಟನೆ ಇಂದು ನಡೆ ದಿದೆ. ಪಟ್ಟಣದ ಕಂದಾಯ ಇಲಾಖೆಯ ಡಿ. ಗ್ರೂಪ್ ನೌಕರ ಶ್ರೀನಿವಾಸನಾಯಕ (51) ಎಂಬವರೆ ಮೃತಪಟ್ಟ ವ್ಯಕ್ತಿಯಾಗಿದ್ದಾರೆ.

ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಎದೆ ನೋವು ಕಾಣಿಸಿಕೊಂಡಿದೆ. ಕೂಡಲೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಇವರನ್ನು ಕರೆದೊಯ್ದರಾದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ, ಒಬ್ಬ ಪುತ್ರ ಮತ್ತು ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವ ಸೈಕಲ್ ದಿನಾಚರಣೆ: ಜಾಥಾ ಮೂಲಕ ಜಾಗೃತಿ ಮೂಡಿಸಿದ ಶಾಲಾಮಕ್ಕಳು



ಪಟ್ಟಣದ ಎಸ್‌ಡಿವಿಎಸ್ ಶಾಲೆಯ ವಿದ್ಯಾರ್ಥಿಗಳು ವಿಶ್ವ ಸೈಕಲ್ ದಿನದ ನಿಮಿತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸೈಕಲ್ ಜಾಥಾ ನಡೆಸಿದರು.

ಯಳಂದೂರು, ಜೂ.3– ವಿಶ್ವ ಸೈಕಲ್ ದಿನಾಚರಣೆ ನಿಮಿತ್ತ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಸೈಕಲ್ ಜಾಥಾ ಮೂಲಕ ಜಾಗೃತಿ ಮೂಡಿಸಿದರು.

ಶಾಲೆಯಿಂದ ಶಿಕ್ಷಕರೊಂದಿಗೆ ಸೈಕಲ್‌ನಲ್ಲಿ ಸಾಲಾಗಿ ತೆರಳಿದ ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಬಸ್ ನಿಲ್ದಾಣದ ಬಳಿ ಧ್ವನಿವರ್ಧಕದ ಮೂಲಕ ಸಾರ್ವಜನಿಕರಲ್ಲಿ ಸೈಕಲ್ ತುಳಿಯುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಘೋಷಣೆಗಳನ್ನು ಕೂಗಿ ಜಾಗೃತಿ ಮೂಡಿಸಿದರು.

ಕನ್ನಡ ಭಾಷಾ ಶಿಕ್ಷಕ ಗುಂಬಳ್ಳಿ ಬಸವರಾಜು ಮಾತನಾಡಿ, ಸೈಕಲ್ ಪರಿಸರ ಸ್ನೇಹಿ ವಾಹನವಾಗಿದೆ. ಇದು ಯಾವುದೇ ಇಂಧನ ಬೇಡದ, ಹೊಗೆಯನ್ನು ಬಿಡದ ವಾಹನವಾಗಿದೆ. ಸೈಕಲ್ ತುಳಿಯುವುದರಿಂದ ಕಾಲಿನ ಸ್ನಾಯುಗಳು ಸದೃಢಗೊಳ್ಳುತ್ತದೆ. ದೇಹದಲ್ಲಿರುವ ಅಧಿಕ ಕೊಬ್ಬಿನಾಂಶವು ಕರಗುತ್ತದೆ. ಹೃದಯದ ಆರೋಗ್ಯಕ್ಕೂ ಇದು ಸಹಕಾರಿಯಾಗಿದೆ. ಸೈಕಲ್ ಬಳಸಿದ್ದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಬಹುದು. ಇದರಿಂದ ನಮ್ಮ ಪರಿಸರ ಶುದ್ಧವಾಗುವ ಜೊತೆಗೆ ದೇಹಕ್ಕೆ ವ್ಯಾಯಾಮವೂ ಲಭಿಸುತ್ತದೆ. ಹಾಗಾಗಿ ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯೂ ಹೆಚ್ಚು ಹೆಚ್ಚು ಸೈಕಲ್‌ಗಳನ್ನು ಬಳಸುವಂತಾಗಬೇಕು ಎಂದು ಸಲಹೆ ನೀಡಿದರು. ವಿದ್ಯಾಸಂಸ್ಥೆಯ ಅಧ್ಯಕ್ಷ ವಿ. ಮಲ್ಲಿಕಾರ್ಜುನ ಸ್ವಾಮಿ ಜಾಥಾಕ್ಕೆ ಚಾಲನೆ ನೀಡಿದರು. ಶಿಕ್ಷಕರಾದ ದೈಹಿಕ ಶಿಕ್ಷಕ ಮಹಾದೇವ, ಬಂಗಾರು ಸೇರಿದಂತೆ ಅನೇಕರು ಇದ್ದರು.

ಗೆಜ್ಜಗಾರ ಕ್ಷೇಮಾಭಿವೃದ್ಧಿ ಸಂಘ ಅಸ್ತಿತ್ವಕ್ಕೆ

ಗುಂಡ್ಲುಪೇಟೆ, ಜೂ 3 (ಸೋಮ್.ಜಿ)– ಜಿಲ್ಲಾ ಮಟ್ಟದ ಕಮ್ಮಾರ/ ಗೆಜ್ಜಗಾರ ಕ್ಷೇಮಾಭಿವೃದ್ಧಿ ಸಂಘವನ್ನು ನೂತನವಾಗಿ ಅಸ್ತಿತ್ವಕ್ಕೆ ತರಲಾಯಿತು. ಬಡಗಲಪುರ ಸಮೀಪದಲ್ಲಿರುವ ಎಣ್ಣೆಹೊಳೆ ಶ್ರೀ ಮಹದೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನವಾಗಿ ಜಿಲ್ಲಾ ಮಟ್ಟದ ಕಮ್ಮಾರ/ಗೆಜ್ಜಗಾರ ಕ್ಷೇಮಾಭಿವೃದ್ಧಿ ಸಂಘವನ್ನು ನೂತನವಾಗಿ ಅಸ್ತಿತ್ವಕ್ಕೆ ತರಲಾಯಿತು.

ಪದಾಧಿಕಾರಿಗಳು: ಬೆಳ್ಳಶೆಟ್ಟಿ (ಗೌರವ ಅಧ್ಯಕ್ಷರು) ಉಮೇಶ್ (ಅಧ್ಯಕ್ಷರು) ರಂಗಸ್ವಾಮಿ (ಪ್ರಧಾನ ಕಾರ್ಯದರ್ಶಿ), ಸೋಮಣ್ಣ (ಖಜಾಂಚಿ) ಹಾಗೂ ಸಲಹೆಗಾರರಾಗಿ ಎಲ್‌ಐಸಿ ಸಿದ್ದಶೆಟ್ಟಿ, ರಾಮಶೆಟ್ಟಿ, ರೇವಣ್ಣ, ವೆಂಕಟೇಶ್, ನಂಜುಂಡಶೆಟ್ಟಿ, ರಾಚಶೆಟ್ಟಿ, ರಂಗಸ್ವಾಮಿ ಗೋಳೂರು. ರಮೇಶ್ ಮೈಸೂರು ಆಯ್ಕೆಯಾದರು. ಈ ವೇಳೆ ಸಮುದಾಯದ ಮುಖಂಡರು ಮತ್ತು ಸಂಘದ ನಿರ್ದೇಶಕರು ಭಾಗವಹಿಸಿದ್ದರು.

ನಿಟ್ರೆ ಗ್ರಾಪಂ ಅಧ್ಯಕ್ಷರ ಅವಿರೋಧ ಆಯ್ಕೆ



ನಿಟ್ರೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಅಭಿಲಾಷ್ ಆಯ್ಕೆಯಾದರು

ಬೇಗೂರು, ಜೂ.3– ಸಮೀಪದ ನಿಟ್ರೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಅಭಿಲಾಷ್ ಎಸ್.ಆರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಟ್ರೆ ಗ್ರಾಪಂ ಅಧ್ಯಕ್ಷೆ ಮಂಗಳಮ್ಮ ರಾಜೀನಾಮೆಯಿಂದ ನಡೆದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಭಿಲಾಷ ಕುಮಾರ್ ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿ ಭಾಸ್ಕರ್, ಅಭಿಲಾಷ ಕುಮಾರ್ ಆಯ್ಕೆಯನ್ನು ಘೋಷಿಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡಪ್ರಸಾದ್, ಜಿಪಂ ಮಾಜಿ ಸದಸ್ಯ ಡಿ.ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಎಚ್.ಎನ್. ಬಸವರಾಜು, ಮುಖಂಡರಾದ ಪಟೇಲ್ ನಂಜುಂಡಸ್ವಾಮಿ, ರೇವಣ್ಣ, ಪುಟ್ಟ ಸ್ವಾಮಿ, ಬಿ. ನಾಗಪ್ಪ, ಮೋಹನ್ ಕುಮಾರ್ ನಿಟ್ರೆ, ಗ್ರಾಪಂ ಉಪಾಧ್ಯಕ್ಷ ಶಿವೇಗೌಡ, ಸದಸ್ಯರಾದ ನಂದೀಶ್, ಮೀನಾಕ್ಷಿ ಮಹೇಶ್, ರತ್ನಮ್ಮ, ಮರಿಸ್ವಾಮಿ, ಲಕ್ಷಮ್ಮ, ಮರಿಸ್ವಾಮಿ, ಸ್ವಾಮಿ ಹಾಲಹಳ್ಳಿ, ಮಂಗಳಮ್ಮ, ಮಹೇಶ್ ರಂಗನಾಥಪುರ ಮೊದಲಾದವರಿದ್ದರು

ಬಸವಯ್ಯ



ಗುಂಡ್ಲುಪೇಟೆ, ಜೂ.3– ತಾಲೂಕಿನ ಹೊನ್ನೇಗೌಡನಹಳ್ಳಿ ಗ್ರಾಮದ ದಸಂಸದ ಹಿರಿಯ ಕಾರ್ಯಕರ್ತ ರಾಚಯ್ಯ ಬಸವಯ್ಯ(97) ನಿಧನರಾಗಿದ್ದಾರೆ.

ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ನೆರವೇರಿತು. ಇವರ ನಿಧನಕ್ಕೆ ದಸಂಸದ ಹಿರಿಯ ಹೋರಾಟಗಾರ ಬಿ.ಡಿ.ಶಿವಬುದ್ಧಿ ಸಂತಾಪ ವ್ಯಕ್ತಪಡಿಸಿದ್ದಾರೆ.


ಮೈಸೂರಿನ ಕೆ.ಆರ್.ವೃತ್ತದಲ್ಲಿ ಆರ್‌ಸಿಬಿ ಅಭಿಮಾನಿಗಳ ಸಂಭ್ರಮಾಚರಣೆ.

ಮೋದಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಫ್ಯಾನ್ಸ್ ಹವಾ



ಅಹಮದಾಬಾದ್: ಫೈನಲ್ ಪಂದ್ಯ ನಡೆದ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಆರ್‌ಸಿಬಿ ಅಭಿಮಾನಿಗಳ ಮಹಾಸಾಗರವೇ ಹರಿದು ಬಂದಿತು.

ದೇಶದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿರುವ ಆರ್‌ಸಿಬಿ ಹಾಗೂ ಕಿಂಗ್ ವಿರಾಟ್ ಕೊಹ್ಲಿ ಅಭಿಮಾನಿಗಳು ಸಾಗರೋಪಾದಿಯಲ್ಲಿ ಕನ್ನಡ ಬಾವುಟದೊಂದಿಗೆ ತಂಡವನ್ನು ಬೆಂಬಲಿಸಿದರು. ಅಲ್ಲದೇ ಇತ್ತೀಚೆಗೆ ಟೆಸ್ಟ್ ಕ್ರಿಕೆಟ್‌ಗೆ ಕೊಹ್ಲಿ ನಿವೃತ್ತಿ ಘೋಷಿಸಿದ ಹಿನ್ನೆಲೆಯಲ್ಲಿ ಅವರ 18ನೇ ನಂಬರ್‌ನ ಜೆರ್ಸಿಯನ್ನು ತೊಟ್ಟು ಕ್ರೀಡಾಂಗಣದಲ್ಲಿ ಜಮಾಯಿಸಿದ್ದು ವಿಶೇಷವಾಗಿತ್ತು. ಇನ್ನು ಆರ್‌ಸಿಬಿ ಅಭಿಮಾನಿಗಳು ಕ್ರೀಡಾಂಗಣದ ವಿಡೀಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಇಲ್ಲಿ ಆರ್‌ಸಿಬಿ ಅಭಿಮಾನಿಗಳೇ ಹೆಚ್ಚಿದ್ದಾರೆ. ಪಂಜಾಬ್ ಫ್ಯಾನ್ಸ್ ತುಂಬಾ ಕಡಿಮೆ ಇದ್ದಾರೆ ಎಂದಿದ್ದಾರೆ. ಅಲ್ಲದೇ ಕನ್ನಡದ ಹಿರಿಯ ನಟ ಸಾಯಿಕುಮಾರ್ ಕೂಡ ಮೈದಾನದಲ್ಲಿ ವೀಡಿಯೋ ಮಾಡಿ ಹಂಚಿಕೊಂಡಿದ್ದಾರೆ. ಅಲ್ಲಿನ ಆರ್‌ಸಿಬಿ ಕ್ರೇಜ್ ಬಗ್ಗೆ ಖುಷಿ ಹಂಚಿಕೊಂಡಿದ್ದಾರೆ. ಸ್ಟೇಡಿಯಂ ತುಂಬಾ ಜನ ಆರ್‌ಸಿಬಿ.. ಆರ್‌ಸಿಬಿ ಘೋಷಣೆ ಕೂಗುತ್ತಿದ್ದರು. ಬಹುಪಾಲು ಬೆಂಗಳೂರು ಫ್ಯಾನ್ಸ್ ಇಲ್ಲಿದ್ದಾರೆಂದು ತಿಳಿಸಿದ್ದಾರೆ.

ಇನ್ನೂ ಆರ್‌ಸಿಬಿ ಗೆಲುವಿಗಾಗಿ ಸಿಎಂ ಸಿದ್ದರಾಮಯ್ಯ, ಬ್ರಿಟನ್ ಮಾಜಿ ಪ್ರಧಾನಿ ಹಾಗೂ ಕರ್ನಾಟಕದ ಅಳಿಯ ರಿಷಿ ಸುನಕ್, ಚಿತ್ರನಟ ರಮೇಶ್ ಅರವಿಂದ್, ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಕ್ರಿಕೆಟಿಗ ಅನಿಲ್ ಕುಂಬ್ಳೆ ಸೇರಿದಂತೆ ಇತರರು ಶುಭ ಹಾರೈಸಿದ್ದರು. ಅಲ್ಲದೇ ಮೈಸೂರು, ಬೆಂಗಳೂರು, ಮಂಡ್ಯ, ಚಾಮರಾಜನಗರ, ಹುಬ್ಬಳ್ಳಿ, ಹಾವೇರಿ, ಶಿವಮೊಗ್ಗ, ದಾವಣಗೆರೆ ಸೇರಿದಂತೆ ರಾಜ್ಯಾದ್ಯಂತ ಅಭಿಮಾನಿಗಳು ಹೋಮ ಹವನ, ವಿಶೇಷ ಪೂಜೆ ಸಲ್ಲಿಸಿ ಆರ್‌ಸಿಬಿ ಗೆಲುವಿಗಾಗಿ ಪ್ರಾರ್ಥನೆ ಸಲ್ಲಿಸಿದರೇ, ಮಹದೇಶ್ವರ ಬೆಟ್ಟದಲ್ಲಿ ಅಭಿಮಾನಿಗಳು ಈಡುಗಾಯಿ ಹೊಡೆದು ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರಲ್ಲಿ ಆರ್‌ಸಿಬಿ ವಿಜಯ ಘೋಷ



• ಸರಿರಾತ್ರಿ ರಸ್ತೆಗಿಳಿದ ಕ್ರಿಕೆಟ್ ಅಭಿಮಾನಿಗಳು • ವಿಜಯೋತ್ಸವದ ಕೇಂದ್ರ ಸ್ಥಾನ ಕೆ.ಆರ್.ಸರ್ಕಲ್‌ನಲ್ಲಿ ಮೊಳಗಿದ 'ಕಪ್ ನಮ್ದೆ' ಘೋಷಣೆ

ಮೈಸೂರು, ಜೂ.3(ಎಸ್‌ಬಿಡಿ)– ಆರ್‌ಸಿಬಿ ಮೊದಲ ಬಾರಿ 'ಐಪಿಎಲ್ ಟ್ರೋಫಿ' ಗೆದ್ದ ಸಂಭ್ರಮ ಮೈಸೂರಿನಲ್ಲೂ ಮುಗಿಲು ಮುಟ್ಟಿತ್ತು.





ಫೈನಲ್ ಹಣಾಹಣಿಯಲ್ಲಿ ಪಂಜಾಬ್ ತಂಡದ ವಿರುದ್ಧ ವಿರೋಚಿತ ಗೆಲುವು ಸಾಧಿಸುವ ಮೂಲಕ ಆರ್‌ಸಿಬಿ ಚಾಂಪಿಯನ್ ಆಗಿ ಹೊರ ಹೊಮ್ಮುತ್ತಿದ್ದಂತೆ ನಗರದೆಲ್ಲೆಡೆ ಪಟಾಕಿ ಸದ್ದು ಮಾರ್ದನಿಸಿತ್ತು. ಡಿ.ದೇವರಾಜ ಅರಸು ರಸ್ತೆ ವಿದ್ಯಾರಣ್ಯಪುರಂ ಭೂತಾಳೆ ಮೈದಾನ, ಬೋಗಾದಿ ರಸ್ತೆಯ ಆರೋಮ ಬೇಕರಿ ಸೇರಿದಂತೆ ಹಲವೆಡೆ ಬೃಹತ್ ಪರದೆಯಲ್ಲಿ ಪಂದ್ಯ ವೀಕ್ಷಿಸುತ್ತಿದ್ದವರು ಗೆಲುವಿನ ನಂತರ ಕುಣಿದು ಕುಪ್ಪಳಿಸಿದರು. ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಅಭಿಮಾನಿಗಳ ಸಿಟಿ ರೌಂಡ್ಸ್: ಆರ್‌ಸಿಬಿ 'ಐಪಿಎಲ್ ಚಾಂಪಿಯನ್' ಆಗಬೇಕೆಂಬ 18 ವರ್ಷಗಳ ಕನಸು, ನನಸಾಗಿರುವುದನ್ನು ಅಭಿಮಾನಿಗಳು ಹಬ್ಬವಾಗಿ ಸಂಭ್ರಮಿಸಿದರು. ಆರ್‌ಸಿಬಿ ಜೆರ್ಸಿ ಮಾದರಿ ಟಿ–ಶರ್ಟ್ ಧರಿಸಿ, ದ್ವಿಚಕ್ರ ವಾಹನದಲ್ಲಿ ಸಿಟಿ ರೌಂಡ್ಸ್ ಹಾಕುವ ಮೂಲಕ ಖುಷಿಪಟ್ಟರು. ಜೈ ಆರ್‌ಸಿಬಿ ಘೋಷಣೆ ಮೊಳಗಿಸಿದರು. ಮುಂಚಿತವಾಗಿಯೇ ಖರೀದಿಸಿದ್ದ ಸಿಹಿಯನ್ನು ಹಂಚಿದರು. ಮದ್ಯಪ್ರಿಯರು ಆರ್‌ಸಿಬಿ ಗೆಲುವನ್ನು ತಮ್ಮದೇ ರೀತಿಯಲ್ಲಿ ಸಂಭ್ರಮಿಸಿದರು. ಒಟ್ಟಾರೆ ಮೈಸೂರಿನಲ್ಲಿ ಹೊಸವರ್ಷದ ಸಡಗರ ಕಂಡು ಬಂದಿತು. ಕೆ.ಆರ್.ವೃತ್ತದಲ್ಲಿ ತಡರಾತ್ರಿ 1 ಗಂಟೆವರೆಗೂ ಅಭಿಮಾನಿಗಳ ಸಂಭ್ರಮ ಮುಂದುವರೆದಿತ್ತು.



ಪುಂಡಾಟಕ್ಕೆ ಬ್ರೇಕ್: ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ ನೆಪದಲ್ಲಿ ಪುಂಡಾಟ ಮೆರೆದು ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಯುವಕರಿಗೆ ಪೊಲೀಸರು ಲಾಠಿ ರುಚಿ ತೋರಿಸಿದರು. ಹೆಬ್ಬಾಳು ರೈಲ್ವೆ ಬಡಾವಣೆಯಲ್ಲಿ ಬೈಕ್‌ನಲ್ಲಿ ಟ್ರಿಪಲ್ ರೈಡಿಂಗ್ ನಡೆಸಿ, ಪಟಾಕಿ ಹಚ್ಚಿ ಮನೆ ಬಾಗಿಲಿಗೆ ಬಿಸಾಡಿ, ಕಿರುಚಾಡುತ್ತಿದ್ದವರಿಗೆ ಪೊಲೀಸರು ಲಾಠಿ ಬೀಸಿ, ಎಚ್ಚರಿಕೆ ನೀಡಿದರು. ಹಲವು ಕಡೆ ಹೀಗೆ ಟ್ರಿಪಲ್ ರೈಡಿಂಗ್ ಮಾಡಿ, ಬೊಬ್ಬೆ ಇಟ್ಟಿದ್ದರಿಂದ ವಯೋವೃದ್ಧರು, ರೋಗಿಗಳು, ಪುಟ್ಟ ಮಕ್ಕಳಿಗೆ ತೊಂದರೆಯಾಗಿತ್ತು.

ಮನೆ ಮನೆಯಲ್ಲೂ ಜೈಕಾರ: ಮನೆ ಮನೆಗಳಲ್ಲೂ ಕುಟುಂಬದವರೆಲ್ಲಾ ಒಟ್ಟಿಗೆ ಕುಳಿತು ಬೆಂಗಳೂರು ಹಾಗೂ ಪಂಜಾಬ್ ತಂಡಗಳ ನಡುವಿನ ಫೈನಲ್ ಪಂದ್ಯವನ್ನು ವೀಕ್ಷಿಸುತ್ತಿದ್ದರು. ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 200 ರನ್ ಗಡಿ ದಾಟದಿದ್ದಾಗ, ಪಂಜಾಬ್‌ನ ಆರಂಭಿಕ ಆಟಗಾರರು ಉತ್ತಮ ಪ್ರದರ್ಶನ ನೀಡುವ ಆತಂಕದಲ್ಲಿದ್ದರು. ನಂತರದಲ್ಲಿ ಆಟ ತಿರುವು ಪಡೆಯುತ್ತಿದ್ದಂತೆ ಹರ್ಷೋದ್ಗಾರ ಹೆಚ್ಚಾಯಿತು. ಪಂದ್ಯದ ಪ್ರತೀ ಕ್ಷಣವನ್ನೂ ಸಂಭ್ರಮಿಸಿದರು. ಕೊನೆಗೂ ಆರ್‌ಸಿಬಿ ಟ್ರೋಫಿ ಗೆದ್ದಾಗ ಜೈಕಾರದೊಂದಿಗೆ ಕುಣಿದು, ಕುಪ್ಪಳಿಸಿದರು.





ದಿನವಿಡೀ ಪ್ರಾರ್ಥನೆ: 'ಈ ಸಲ ಕಪ್ ನಮ್ದೇ' ಎಂದು ಹೇಳಿಕೊಂಡು 18 ವರ್ಷಗಳಿಂದಲೂ ಆರ್‌ಸಿಬಿ ಮೇಲಿನ ಅಭಿಮಾನ ಮೆರೆದಿರುವ ಅಭಿಮಾನಿಗಳು ಇಂದು ದೀಪಾವಳಿಯನ್ನೇ ಆಚರಿಸಿದರು. ಬೆಳಗ್ಗೆಯಿಂದಲೂ ವಿವಿಧ ದೇವಸ್ಥಾನಗಳಲ್ಲಿ ಆರ್‌ಸಿಬಿ ಗೆಲುವಿಗೆ ಪ್ರಾರ್ಥಿಸಿದರು. ಮೊದಲ ಆವೃತ್ತಿಯಿಂದಲೂ ಆರ್‌ಸಿಬಿ ತಂಡದಲ್ಲೇ ಆಡುತ್ತಿರುವ ವಿರಾಟ್ ಕೊಹ್ಲಿ ಸೇರಿದಂತೆ ತಂಡದ ಆಟಗಾರರ ಫೋಟೋ ಹಿಡಿದು ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದರು. ಮಕ್ಕಳಾದಿಯಾಗಿ ಎಲ್ಲಾ ವಯೋಮಾನದವರೂ ಆರ್‌ಸಿಬಿ ಟಿ–ಶರ್ಟ್ ಧರಿಸಿ, ಪಂದ್ಯ ವೀಕ್ಷಣೆಗೆ ಕಾತುರರಾಗಿದ್ದರು. ಸಂಜೆ 6.30ರ ನಂತರ ರಸ್ತೆಗಳಲ್ಲಿ ವಾಹನ ಸಂಚಾರ ಕಡಿಮೆಯಾಗಿತ್ತು. ಎಲ್ಲರೂ ಟಿವಿ ಮುಂದೆ ಜಮಾಯಿಸಿದ್ದರು.





ಟ್ಯಾಬ್‌ನಲ್ಲೇ ಪಂದ್ಯ ವೀಕ್ಷಿಸಿದ ಸಿಎಂ



ಬೆಂಗಳೂರು: ಐಪಿಎಲ್ 2025ರ ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಹೈವೋಲ್ಟೇಜ್ ಫೈನಲ್ ಪಂದ್ಯವನ್ನು ಸಿಎಂ ಸಿದ್ದರಾಮಯ್ಯ ಅವರು ಟ್ಯಾಬ್‌ನಲ್ಲೇ ವೀಕ್ಷಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗದಗ ಜಿಲ್ಲಾ ಪ್ರವಾಸ ಮುಗಿಸಿ ಬರುತ್ತಿದ್ದಂತೆ ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಟ್ಯಾಬ್‌ನಲ್ಲೇ ಐಪಿಎಲ್ ಫೈನಲ್ ಪಂದ್ಯ ವೀಕ್ಷಿಸಿದರು. ಬೆಂಗಳೂರಿನಲ್ಲಿ ಆರ್‌ಸಿಬಿ ಪಂದ್ಯ ಇದ್ದಾಗಲೂ ಸ್ಟೇಡಿಯಂನಲ್ಲೇ ಪಂದ್ಯ ವೀಕ್ಷಿಸಿದ್ದರು.

ಲಕ್ಕುಂಡಿಯಲ್ಲಿ ಐತಿಹಾಸಿಕ ಪ್ರಾಚ್ಯಾವಶೇಷಗಳ ಉತ್ಖನನಕ್ಕೆ ಚಾಲನೆ ನೀಡಿದ್ದ ಸಂದರ್ಭದಲ್ಲಿ ಆರ್‌ಸಿಬಿಗೆ ಶುಭ ಹಾರೈಸಿದ್ದರು. ಆರ್‌ಸಿಬಿ ನಾಲ್ಕನೆ ಬಾರಿಗೆ ಫೈನಲ್‌ಗೆ ಬಂದಿದೆ. ಈ ಬಾರಿ ಗೆಲ್ಲಲಿ ಎಂದು ಹಾರೈಸುತ್ತೇನೆ. ಗೆದ್ದರೆ ಅಭಿನಂದನೆ ತಿಳಿಸುತ್ತೇನೆ. ಪಂಜಾಜ್ ಗೆದ್ದರೆ ಅವರಿಗೂ ಅಭಿನಂದನೆ ಹೇಳುತ್ತೇನೆ ಎಂದಿದ್ದರು.

ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಐಪಿಎಲ್ 18ನೇ ಆವೃತ್ತಿಯ ಅದ್ಧೂರಿ ಸಮಾರೋಪ

'ಆಪರೇಷನ್ ಸಿಂಧೂರ' ವೀರಯೋಧರಿಗೆ ಗೀತನಮನ

ಮೈನವಿರೇಳಿಸಿದ ದೇಶಭಕ್ತಿ ಗೀತಗಾಯನ, ರೋಮಾಂಚಕ ಏರ್‌ಶೋ



ಅಹಮದಾಬಾದ್, ಜೂ.3– ಕಳೆದ 2 ತಿಂಗಳಿಂದ ಕ್ರಿಕೆಟ್ ಪ್ರಿಯರ ರಂಜಿಸಿದ 18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಸಮಾರೋಪ ಸಮಾರಂಭ ಇಲ್ಲಿನ ಪ್ರತಿಷ್ಠಿತ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ಅದ್ಧೂರಿಯಾಗಿ ನಡೆಯಿತು.

ಇಂದಿನ ಫೈನಲ್ ಪಂದ್ಯವನ್ನು ಭಾರತೀಯ ಸೇನೆಗೆ ಅರ್ಪಿಸಲು ಬಿಸಿಸಿಐ ನಿರ್ಧಾರ ಕೈಗೊಂಡಿತ್ತು. ಅದಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಫೈನಲ್ ಪಂದ್ಯಕ್ಕೂ ಮೊದಲು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಆಪರೇಷನ್ ಸಿಂಧೂರ ಹೀರೋಗಳಿಗೆ ಗೌರವ ಸಲ್ಲಿಸಲಾಯಿತು.

ಖ್ಯಾತ ಗಾಯಕ ಶಂಕರ್ ಮಹಾದೇವನ್ ಮತ್ತು ಅವರ ಮಕ್ಕಳು, ಶ್ರೇಯಾ ಘೋಷಾಲ್ ತಂಡದಿಂದ ಭಾರತೀಯ ಸಶಸ್ತ್ರ ಪಡೆಗಳಿಗೆ



ದೇಶಭಕ್ತಿ ಗೀತೆಗಳ ನಮನ ಸಲ್ಲಿಸಲಾಯಿತು.

45 ನಿಮಿಷಗಳ ಈ ಸಮಾರಂಭದಲ್ಲಿ ಖ್ಯಾತ ಹಿನ್ನೆಲೆ ಗಾಯಕರ ದೇಶಭಕ್ತಿ ಗೀತೆಗಳು ಕ್ರೀಡಾಂಗಣದಲ್ಲಿ ನೆರೆದಿದ್ದ ಅಭಿಮಾನಿಗಳ ಮೈ ನವಿರೇಳುವಂತೆ ಮಾಡಿದವು. ಶಂಕರ್ ಮಹಾದೇವನ್ ಅವರೊಂದಿಗೆ ಅವರ ಪುತ್ರರಾದ ಶಿವಂ ಮತ್ತು ಸಿದ್ಧಾರ್ಥ್ ಮಹಾದೇವನ್ ಸಾಥ್ ನೀಡಿದರು. ಇನ್ನು ಜೈ ಹೋ, ವಂದೇ ಮಾತರಂ, ಹೇ ವತನ್ ಮೇರೆವತನ್ ಮೊದಲಾದ ಗೀತೆಗಳಿಗೆ ಅಭಿಮಾನಿಗಳು ತಲೆದೂಗಿದರು. ಅಲ್ಲದೇ ರಾಷ್ಟ್ರಧ್ವಜ ಹಾರಿಸುತ್ತಾ.. ಎದ್ದು ನಿಂತು ಗೌರವ ಸಲ್ಲಿಸಿದರು. ಇದೇ ವೇಳೆ ವಾಯುಪಡೆಯಿಂದ ಏರ್ ಶೋ ಕೂಡ ನಡೆಯಿತು. ದೇಶದ ಅತಿದೊಡ್ಡ ಕ್ರೀಡಾಂಗಣದ ಮೇಲೆ ವಾಯುಪಡೆಯ ವಿಮಾನಗಳ ಸಾಹಸ ದೃಶ್ಯಗಳು ಅಭಿಮಾನಿಗಳನ್ನು ರೋಮಾಂಚನಗೊಳಿಸಿತು. ಏ.22ರಂದು ಪಹಲ್ಗಾಮ್‌ನಲ್ಲಿ ಉಗ್ರರು 26 ಪ್ರವಾಸಿಗರನ್ನು ಹತ್ಯೆಗೈದಿದ್ದರು. ಇದಕ್ಕೆ ಪ್ರತೀಕಾರವಾಗಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ಮೂಲಕ ಭಾರತ ಪ್ರತೀಕಾರ ತೀರಿಸಿಕೊಂಡಿತ್ತು. ಅಲ್ಲದೇ ಪಾಕಿಸ್ತಾನದ ದಾಳಿಗಳನ್ನು ವಿಫಲಗೊಳಿಸಿತ್ತು. ಭಾರತ ಮತ್ತು ಪಾಕಿಸ್ತಾನ ನಡುವಿನ ಪ್ರತೀಕಾರ ಸಮರ ಜೋರಾಗುತ್ತಿದ್ದಂತೆ ಐಪಿಎಲ್ ಪಂದ್ಯಗಳನ್ನು ಒಂದು ವಾರಗಳ ಕಾಲ ಸ್ಥಗಿತಗೊಳಿಸಲಾಗಿತ್ತು. ಭಾರತ ಮತ್ತು ಪಾಕ್ ನಡುವೆ ಕದನ ವಿರಾಮ ಘೋಷಣೆಯಾಗುತ್ತಿದ್ದಂತೆ ಮೇ 17ರಿಂದ ಟೂರ್ನಿ ಪುನರಾರಂಭಗೊಳಿಸಲಾಯಿತು. ಹೀಗಾಗಿ ಭಾರತೀಯ ಸೇನೆಯ ಈ ಶೌರ್ಯ, ಸಾಹಸಕ್ಕೆ ಗೌರವ ಸಲ್ಲಿಸುವ ಸಲುವಾಗಿ ಐಪಿಎಲ್ ಸಮಾರೋಪ ಸಮಾರಂಭದಲ್ಲಿ ಆಪರೇಷನ್ ಸಿಂಧೂರ ವಿಜಯೋತ್ಸವ ಆಚರಿಸಲು ಬಿಸಿಸಿಐ ನಿರ್ಧರಿಸಿತು. ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಮೂರು ಸೇನಾಪಡೆಗಳ ಮುಖ್ಯಸ್ಥರಾದ ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೇವಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ, ಏರ್‌ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರನ್ನ ವೇದಿಕೆಗೆ ಸೇನಾ ಗೌರವದೊಂದಿಗೆ ಆಹ್ವಾನಿಸಲಾಯಿತು. ಬಳಿಕ ಸೇನೆಗೆ ಗೌರವಾರ್ಥವಾಗಿ ಮಿಲಿಟರಿ ಬ್ಯಾಂಡ್ ಪ್ರದರ್ಶನ ನಡೆಯಿತು.

ಮೈಸೂರು ಮಿತ್ರ

ಸಿಎಂ, ನಾನು ಪ್ರತಿನಿಧಿಸುವ ಕ್ಷೇತ್ರ ಅಭಿವೃದ್ಧಿಯಲ್ಲಿ ಕುಂಠಿತವಾಗಬಾರದು

ತಿ.ನರಸೀಪುರ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ

“ ಸರ್ಕಾರದಿಂದ ರೈತರಿಗೆ ದೊರಕುವ ಸೌಲಭ್ಯವನ್ನು ಪರಿಣಾಮಕಾರಿಯಾಗಿ ತಲುಪಿಸಿ. ಈ ಸಂಬಂಧ ಮಾಹಿತಿಯನ್ನು ಕಾಲಕಾಲಕ್ಕೆ ನನಗೆ ನೀಡಬೇಕು. ಅಗತ್ಯಕ್ಕೆ ತಕ್ಕಂತೆ ಬಿತ್ತನೆ ಬೀಜ ವಿತರಿಸಬೇಕು. ಬೆಳೆಗಳಿಗೆ ನೀರಿನ ಕೊರತೆಯಾಗಬಾರದು. ಜನರ ಸ್ವಾವಲಂಬಿ ಬದುಕಿಗೆ ಹಾಗೂ ಆರ್ಥಿಕವಾಗಿ ಸಬಲತೆಗೆ ಕೃಷಿ ಕ್ಷೇತ್ರ ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ಯಾವುದೇ ಸಮಸ್ಯೆ ಉಂಟಾಗದಂತೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿ. –ಡಾ.ಹೆಚ್.ಸಿ.ಮಹದೇವಪ್ಪ



ಮಂಗಳವಾರ ನಡೆದ ತಿ.ನರಸೀಪುರ ತಾಲೂಕು ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡುತ್ತಿರುವುದು.

“ ಪುರಸಭೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಬೀದಿದೀಪ ಅಳವಡಿಸಬೇಕು. ಬಂಗಾರಪ್ಪ ಬಡಾವಣೆ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು. ಗೋಪಾಲಪುರ ಬಡಾವಣೆಯಲ್ಲಿ ಕಾನೂನುಬಾಹಿರವಾಗಿ ಅತಿಕ್ರಮಿಸಿರುವ ಜಾಗವನ್ನು ತೆರವುಗೊಳಿಸಿ, ಅರ್ಹ ಫಲಾನುಭವಿಗಳಿಗೆ ನಿವೇಶನ ವಿತರಿಸಲು ಕ್ರಮವಹಿಸಿ–ಸುನೀಲ್ ಬೋಸ್, ಸಂಸದ

ತಿ.ನರಸೀಪುರ, ಜೂ.3–ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಈ ತಾಲೂಕನ್ನು ಪ್ರತಿನಿಧಿಸುತ್ತೇವೆ. ಯಾವುದೇ ಕಾರಣಕ್ಕೂ ಇಲ್ಲಿ ಅಭಿವೃದ್ಧಿ ಕುಂಠಿತವಾಗಬಾರದು. ಸರ್ಕಾರದ ಎಲ್ಲಾ ಯೋಜನೆಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಬೇಕು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ಪುರಸಭೆ ಸಭಾಂಗಣದಲ್ಲಿ ಮಂಗಳವಾರ ನಡೆದ ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಕ್ಕೆ ಬರುವ ಮುನ್ನ ನೀಡಿದ ಭರವಸೆಯನ್ನು ಈಡೇರಿಸುವುದು ಸರ್ಕಾರದ ಕರ್ತವ್ಯವಾಗಿದೆ. ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಿಸಲು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಿ ಎಂದು ಹೇಳಿದರು.

ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಎರಡು ದಿನ ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಸರ್ಕಾರವು ಜನರ ಪರ ಇದೇ ಎಂಬ ಆತ್ಮವಿಶ್ವಾಸ ಮೂಡಿಸುವುದರಲ್ಲಿ ಅಧಿಕಾರಿಗಳ ಪಾತ್ರ ಹೆಚ್ಚಿದೆ. ಈ ನಿಟ್ಟಿನಲ್ಲಿ ಕಚೇರಿಯಲ್ಲಿ ಅಧಿಕಾರಿಗಳು ಕೂರಬಾರದು. ಜನರ ಬಳಿಗೆ ತೆರಳಬೇಕು. ಅವರ ಕಷ್ಟಗಳನ್ನು ಆಲಿಸಿ ಪರಿಹರಿಸಬೇಕು ಎಂದರು.

ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯಿಂದ ಅಚ್ಚುಕಟ್ಟಾಗಿ ಕೆಲಸ ಮಾಡಬೇಕು. ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೌಲಭ್ಯ, ಪಡಿತರ ವಿತರಣೆ ಸೇರಿದಂತೆ ಎಲ್ಲಾ ಬಗೆಯ ಮೂಲಭೂತ ಸೌಕರ್ಯಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಶ್ರಮವಹಿಸಬೇಕು. ಸರ್ಕಾರದ ಸೌಲಭ್ಯಗಳಿಂದ ಯಾರೂ ವಂಚಿತರಾಗಬಾರದು ಎಂದು ಹೇಳಿದರು.

ಕೃಷಿ ಇಲಾಖೆ: ತಾಲೂಕಿನಲ್ಲಿ 44,136 ಹೆಕ್ಟೇರ್ ಸಾಗುವಳಿ ವಿಸ್ತೀರ್ಣವಿದೆ. ಕೃಷಿಗೆ ಉಪಯೋಗವಿರುವ ಜಮೀನಿನಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಸಿರೆಲೆ ಬಿತ್ತನೆಗೆ ಕ್ರಮವಹಿಸಿ. ರಸಗೊಬ್ಬರ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ರೈತರಿಗೆ ವ್ಯಾಪಕ ಅರಿವು ಮೂಡಿಸಿ. ಅದಕ್ಕೆ ಪರ್ಯಾಯವಾಗಿ ಸಾವಯವ ಗೊಬ್ಬರ ಬಳಸುವಂತೆ ತಿಳಿಸಿದರು.

ಪುರಸಭೆ: ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಕ್ಕೆ ಕೊರತೆ ಯಾಗಬಾರದು. ಬೀದಿ ದೀಪ, ರಸ್ತೆ ಚರಂಡಿ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡಬೇಕು. ಸ್ವಚ್ಛತೆ ಕಾಪಾಡಬೇಕು. ಈ ಕುರಿತು ಜವಾಬ್ದಾರಿಯಿಂದ ಕೆಲಸ ಮಾಡಿ ಎಂದು ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದರು.

ವಿಧಾನಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಮಾತನಾಡಿ, ಒಳಚರಂಡಿ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ಉಂಟಾಗಬಾರದು. ವಸತಿ ರಹಿತರನ್ನು ಗುರುತಿಸಿ ವಸತಿ ಸೌಲಭ್ಯ ಒದಗಿಸಬೇಕು. ಮೇಲ್ಸೇತುವೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ: ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ವಿಸ್ತರಿಸಿ, ಉತ್ಪಾದನೆಯನ್ನು ಹೆಚ್ಚಿಸಬೇಕು. ಈ ಕುರಿತು ರೈತರಿಗೆ ಹೆಚ್ಚಿನ ಅರಿವು ಮೂಡಿಸಿ. ರಂಗಸಮುದ್ರ ಸಮಗ್ರ ಜೈವಿಕ ಕೇಂದ್ರವನ್ನು ಬಳಸಿಕೊಳ್ಳಿ. ತೋಟಗಾರಿಕೆ ಬೆಳೆಗಳ ವ್ಯವಸಾಯ ಪದ್ಧತಿಯಲ್ಲಿರುವ ತಂತ್ರಜ್ಞಾನವನ್ನು ರೈತರಿಗೆ ಅರ್ಥವಾಗುವಂತೆ ವಿವರಿಸಿ ಎಂದು ತಿಳಿಸಿದರು.

ರೇಷ್ಮೆ ಇಲಾಖೆ: ರೈತರು ರೇಷ್ಮೆ ಬೇಸಾಯದಲ್ಲಿ ಆಸಕ್ತಿ ಹೊಂದುವಂತೆ ಪ್ರೇರೇಪಿಸಿ. ಹಿಪ್ಪು ನೇರಳೆ ಬೆಳೆ ಮತ್ತು ಹುಳು ಸಾಕಾಣಿಕೆಗೆ ಸರ್ಕಾರದಿಂದ ದೊರಕುವ ಸೌಲಭ್ಯದ ಮಾಹಿತಿಯನ್ನು ರೈತರಿಗೆ ನೀಡಿ, ಅದರಂತೆ ಅನುದಾನವನ್ನು ನಿಗದಿತ ವೇಳೆಗೆ ತಲುಪಿಸಬೇಕು ಎಂದು ಹೇಳಿದರು.

ಪಶುಸಂಗೋಪನೆ ಇಲಾಖೆ: ರೈತರು ವ್ಯವಸಾಯದ ಜೊತೆಗೆ ಕುರಿ ಸಾಕಾಣಿಕೆ ಮಾಡುವಂತೆ ಅರಿವು ಮೂಡಿಸಿ. ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಬಾರದು. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಬೇಕು ಹಾಗೂ ಸಾಂಕ್ರಮಿಕ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಆಕಸ್ಮಿಕವಾಗಿ ಮರಣ ಹೊಂದಿದ ಜಾನುವಾರುಗಳಿಗೆ ಸಕಾಲಕ್ಕೆ ಪರಿಹಾರ ಧನ ಒದಗಿಸಬೇಕು ಎಂದರು.

ಮೀನುಗಾರಿಕೆ ಇಲಾಖೆ: ಮೀನುಗಾರರಿಗೆ ಇಲಾಖೆಯಿಂದ ದೊರಕುವ ಸಹಾಯಧನವನ್ನು ಅರ್ಹ ಫಲಾನುಭವಿಗಳಿಗೆ ದೊರಕಿಸಿಕೊಡಿ. ಕಾಲಕಾಲಕ್ಕೆ ಸರ್ಕಾರದ ಸವಲತ್ತನ್ನು ಸಮರ್ಪಕವಾಗಿ ವಿತರಿಸಬೇಕು. ಮೀನುಗಾರರ ಸಹಕಾರ ಸಂಘಗಳ ಸಂಪರ್ಕದಲ್ಲಿರಬೇಕು ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ: ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಎಲ್ಲಾ ಮನೆಗಳಿಗೂ ವ್ಯವಸ್ಥಿತವಾಗಿ ನಳ ಸಂಪರ್ಕ ಕಲ್ಪಿಸಬೇಕು. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ದೊಡ್ಡೆ ಬಾಗಿಲು ಹಾಗೂ ಮೂಗೂರಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಯನ್ನು ತ್ವರಿತವಾಗಿ ಮುಕ್ತಾಯಗೊಳಿಸಿ ಎಂದರು.

ಶಿಕ್ಷಣ ಇಲಾಖೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿಗೆ ನಿರೀಕ್ಷಿತ ಫಲಿತಾಂಶ ಬಂದಿಲ್ಲ. ಫಲಿತಾಂಶ ಕುಸಿಯಲು ಕಾರಣವೇನು?. ಗುಣಮಟ್ಟದ ಶಿಕ್ಷಣ ಪ್ರತಿಯೊಬ್ಬರ ಹಕ್ಕು. ಮಕ್ಕಳ ಭವಿಷ್ಯ ರೂಪಿಸಲು ಶಿಕ್ಷಕರೊಂದಿಗೆ ಕಾಲಕಾಲಕ್ಕೆ ಸಭೆ ನಡೆಸಿ ಚರ್ಚೆ ನಡೆಸಬೇಕು. ಕಾರ್ಯಾಗಾರ ಆಯೋಜಿಸಬೇಕು. ಮುಂದಿನ ಬಾರಿ ಶೇ.100 ರಷ್ಟು ಫಲಿತಾಂಶ ಬರದಿದ್ದರೆ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಣ್ಣ ನೀರಾವರಿ ಇಲಾಖೆ, ವಸತಿ ಇಲಾಖೆ, ಮ–ನರೇಗಾ ಯೋಜನೆಯಡಿ ಸಿಗುವ ಸವಲತ್ತುಗಳು ಜನರಿಗೆ ಸಿಗುವಂತಾಗಬೇಕು. ಆಯಾ ಇಲಾಖೆಯ ಅಧಿಕಾರಿಗಳು, ವೈದ್ಯರು ಉತ್ತಮವಾಗಿ ಕೆಲಸ ಮಾಡಬೇಕು ಎಂದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಪುರಸಭೆ ಅಧ್ಯಕ್ಷರಾದ ವಸಂತ ಶ್ರೀಕಂಠ, ಜಿಲ್ಲಾಧಿಕಾರಿ ಜಿಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್. ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ತಹಸಿಲ್ದಾರ್ ಸುರೇಶ್ ಆಚಾರ್, ತಾಲ್ಲೂಕು ಪಂಚಾಯತ್ ಇಒ ಅನಂತ ರಾಜು, ಕೆಡಿಪಿ ಸದಸ್ಯರಾದ ಬಿ.ಎಂ.ದಿವಾಕರ್, ಉಕ್ಕಲ ಗೆರೆ ಬಸವಣ್ಣ, ವೀಣಾ ಶಿವಕುಮಾರ್, ನವೀನ್, ಮೋಯಿನ್ ಖಾನ್, ನಿಂಗರಾಜು ಸೇರಿದಂತೆ ಎಲ್ಲಾ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಕೆಡಿಪಿ ಸಭೆಯ ನಾಮನಿರ್ದೇಶಿತ ಸದಸ್ಯರು ಹಾಜರಿದ್ದರು.

ಸರಗೂರಲ್ಲಿ ಪೌರ ಕಾರ್ಮಿಕರ ಪ್ರತಿಭಟನೆ



ಪಟ್ಟಣ ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸುತ್ತಿರುವ ಪೌರ ಕಾರ್ಮಿಕರು.


ಸರಗೂರು: ಹಲವು ವರ್ಷಗಳಿಂದ ಸ್ಥಳಿಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ ಪೌರ ಕಾರ್ಮಿಕರು ಹಾಗೂ ಇತರೆ ಕಾರ್ಮಿಕರನ್ನು ಕಾಯಂ ಮಾಡಬೇಕೆಂದು ಒತ್ತಾಯಿಸಿ ಪೌರ ಕಾರ್ಮಿಕರು ಪಟ್ಟಣ ಪಂಚಾಯಿತಿ ಮುಂಭಾಗ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು,

ಪಟ್ಟಣ ಪಂಚಾಯಿತಿ ಮುಂಭಾಗ ನಡೆಸಲಾದ ಪ್ರತಿಭಟನೆಯಲ್ಲಿ ಸಿಬ್ಬಂದಿ ಪಳನಿಸ್ವಾಮಿ ಮಾತನಾಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಪೌರ ಕಾರ್ಮಿಕರು ನಡೆಸಿದ ಪ್ರತಿಭಟನೆ ಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ಶಿವಕುಮಾರ್, ಸರ್ವ ಸದಸ್ಯರು ಬೆಂಬಲ ಸೂಚಿಸಿದರು,

ಪಟ್ಟಣದ ಸ್ವಚ್ಛತೆಗೆ ಪೌರಕಾರ್ಮಿಕರ ಕೊಡುಗೆ ಅಪಾರವಾದದ್ದು, ಪೌರಕಾರ್ಮಿಕರಿಲ್ಲದೆ ನಗರದ ಸೌಂದರ್ಯೀಕರಣ ಅಸಾಧ್ಯ. ಪೌರಕಾರ್ಮಿಕರ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮಗಳ ಸಹಕಾರ ನೀಡಲಾಗುವುದು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್,ತಿಳಿಸಿದರು,

ಪ್ರತಿಭಟನೆಯಲ್ಲಿ ಪಟ್ಟಣ ಪಂಚಾಯಿತಿ ಸಿಬ್ಬಂದಿಗಳಾದ ರಾಮು, ಅನಿತಾ, ಶಿವಪ್ರಸಾದ್, ಅರ್ಜನಾ, ಮೇಗನಾ, ರಂಜಿನಿ, ಚಿನ್ನಸ್ವಾಮಿ ಆರ್ಮುಗಂ, ವೆಂಕಟೇಶ್, ವಿಜಯ್, ಸುಬ್ರಮಣ್ಯ, ಎಸ್.ಆರ್.ರಾಜ, ಸೋಮು, ಹರೀಶ್, ಸಣ್ಣಮ್ಮ, ಶೋಭಾ, ರಂಗನಾಥ್, ಅಕ್ಷಯಕುಮಾರ್, ಮಂಜುನಾಥ್, ನಾಗರಾಜು, ವಾಟರ್ ಮ್ಯಾನ್ ಬಷೀರ್, ಶಿವಣ್ಣ ಭಾಗವಸಿದ್ದರು.

ನಿಜಗುಣರು ಅಪರೂಪದ ಸಂತ ಶ್ರೇಷ್ಠರು: ಸುತ್ತೂರು ಶ್ರೀಗಳು



ಸುತ್ತೂರು ಶ್ರೀಕ್ಷೇತ್ರದಲ್ಲಿ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ಆಶೀರ್ವಚನ ನೀಡಿದರು.

ನಂಜನಗೂಡು, ಜೂ.3– ನಿಜಗುಣ ಶಿವಯೋಗಿಗಳು ಸಂತ ಶ್ರೇಷ್ಠರು, ಮನುಷ್ಯ ಅಹಂಕಾರವನ್ನು ತೊರೆದು ಮೋಕ್ಷ ಸಂಪಾದಿಸಬೇಕು. ಲೌಕಿಕ ಮತ್ತು ಅಲೌಕಿಕ ಮಾರ್ಗವನ್ನು ಸಮನಾಗಿ ಕಾಣುವುದೇ ಸಮಸ್ಥಿತಿ ಎಂದು ನಿಜಗುಣರು ಸಾರಿದ್ದಾರೆ ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಜೀ ಹೇಳಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಭಾನುವಾರ ನಿಜಗುಣ ಶಿವಯೋಗಿಗಳ 'ಅನುಭವಸಾರ' ಕೃತಿಯ ಬಗೆಗೆ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಗವಂತನಲ್ಲಿ ಲೀನವಾಗಲು ಮೋಕ್ಷ ಮಾರ್ಗವನ್ನು ಭೋಧಿಸುವ ಉತ್ತಮ ಗ್ರಂಥ 'ಅನುಭವಸಾರ'ವಾಗಿದೆ. ಮನುಷ್ಯ ಎಲ್ಲಿಂದ ಬಂದಿರುವನೋ ಅಲ್ಲಿಗೆ ಹೋಗಬೇಕು. ಮಳೆಯ ನೀರು ಭೂಮಿಯ ಮೇಲೆ ಬೀಳುತ್ತದೆ. ನೀರಿನ ಗುರಿ ಮಾತ್ರ ಸಮುದ್ರ ಸೇರುವುದೇ ಆಗಿರುತ್ತದೆ, ಅಧ್ಯಯನ ಶಿಬಿರದಲ್ಲಿ ಕೇಳಿದ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಚಿತ್ತದಿಂದ ಬದುಕಬೇಕು ಎಂದು ಹೇಳಿದರು.

ಸಿದ್ಧಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮಿಜಿ ಮಾತನಾಡಿ ಅನುಭವಿಗಳ ಸಂಗದಿಂದ ಮನಸ್ಸು ಶುದ್ಧಿಯಾಗುತ್ತದೆ. ಭಾರತದ ಸನಾತನ ಧರ್ಮ ಶ್ರೇಷ್ಠವಾದುದು. ಸಾಧು, ಸಂತರ ಪಾದ ಸ್ಪರ್ಶದಿಂದ ನಮ್ಮ ನೆಲ ಪಾವನವಾಗಿದೆ. ವಿದೇಶಿಯರು ನಮ್ಮ ದೇಶದಿಂದ ಅನೇಕ ಸಂಪತ್ತನ್ನು ಲೂಟಿ ಮಾಡಿದರೂ ಆಧ್ಯಾತ್ಮಿಕ ಅಸ್ತಿತ್ವವನ್ನು ನಾಶಗೊಳಿಸಲು ಸಾಧ್ಯವಾಗಲಿಲ್ಲ, ದೇಶದ ಯುವ ಜನತೆ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯಲು ಮುಂದಾಗಬೇಕು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ ನಿಜಗುಣರು ತಮ್ಮ ಸಾಧನೆಯ ಮೂಲಕ ಸಮಾಜಕ್ಕೆ ಮಾರ್ಗದರ್ಶನ ಮಾಡಿದರು. ವಿಜ್ಞಾನ ಮತ್ತು ಹಸಿರು ಕ್ರಾಂತಿಗಳು ಆಗಿದೆ. ಈಗ ಆಧ್ಯಾತ್ಮಿಕ ಕ್ರಾಂತಿಯಾಗಬೇಕಿದೆ. ನಂಬಿಕೆಯೇ ದೇವರು, ಪರೋಪಕಾರದಿಂದ ಪುಣ್ಯ ಲಭಿಸುತ್ತದೆ. ಪುಣ್ಯ ಸಂಪಾದನೆಯಿಂದ ಸ್ವರ್ಗ ಪ್ರಾಪ್ತಿಯಾಗುತ್ತದೆ. ಭಕ್ತಿ ಪಂಥಗಳು ಜನಸಾಮಾನ್ಯರಲ್ಲಿ ಆಧ್ಯಾತ್ಮಿಕತೆಯನ್ನು ಜಾಗೃತಗೊಳಿಸಿವೆ. ಇದರಿಂದ ನಮ್ಮ ಸಂಸ್ಕೃತಿ ಉಳಿದಿದೆ ಎಂದು ತಿಳಿಸಿದರು.

ವಿದ್ವಾನ್ ಜಗದೀಶ್ ಶರ್ಮಾ ಸಂಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಶಂಕರ್ ದೇವನೂರು, ಚನ್ನಬಸವ ದೇಶಿಕೇಂದ್ರ ಸ್ವಾಮಿಜಿ, ಅಜಯಾನಂದ ಸ್ವಾಮಿಜೀ, ಮಾತೋಶ್ರೀ ಕಾವ್ಯ, ಮಾತೋಶ್ರೀ ಸರಸ್ವತಿ, ಸೋಮಶೇಖರ್ ಬಿ ಮಗದುಮ್ಮ, ಕಾಶಿನಾಥ್, ಅರುಣಾ ಶಿರಗುಪ್ಪಿ ಉಪಸ್ಥಿತರಿದ್ದರು.

ಪತ್ರಕರ್ತರಿಗೆ ಹೃದಯ ತಪಾಸಣೆ ಶಿಬಿರ



ಹುಣಸೂರು, ಜೂ.3– ಪ್ರತಿನಿತ್ಯ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರಿಗೆ ಅಪೋಲೊ ಆಸ್ಪತ್ರೆ ಉಚಿತ ಚಿಕಿತ್ಸೆ ನೀಡುತ್ತಿರುವುದು ಅಮೂಲ್ಯವಾದದ್ದು ಎಂದು ತಾಲೂಕು ಕಾರ್ಯನಿರ್ವಾಣಾಧಿಕಾರಿ ಕೆ.ಹೊಂಗಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಅಪೋಲೊ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಪತ್ರಕರ್ತರಿಗೆ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ಮಾತನಾಡಿದ ಅವರು, ಪತ್ರಕರ್ತರು ನಿಷ್ಠುರತೆಯಿಂದ ಬದುಕುವುದರಿಂದ, ಅವರ ಬದುಕು ಕೂಡ ಕಷ್ಟಕರವಾಗಿದ್ದು, ಅವರಿಗೂ ಸರಕಾರದ ನೆರವಿನ ಅಗತ್ಯವಿದೆ ಎಂದರು.

ನಂತರ ಮಾತನಾಡಿದ ಅಪೋಲೊ ಆಸ್ಪತ್ರೆಯ ಹೃದಯ ತಜ್ಞ ಡಾ.ವಿನಯ್ ಎನ್. ಮುಗದೂರ್, ಪ್ರತಿ ಮನುಷ್ಯ ಆರೋಗ್ಯವಂತನಾಗಿ ಇರಬೇಕೆಂದರೆ, 40ರ ನಂತರ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ಆಗ ಮಾತ್ರ ಮನುಷ್ಯನ ಆರೋಗ್ಯದ ಚಿತ್ರಣ ಅರಿವಾಗಲಿದೆ ಎಂದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣ ಕುಮಾರ್ ಮಾತನಾಡಿ, ಪತ್ರಕರ್ತರು ಮತ್ತು ಕುಟುಂಬಕ್ಕೂ ಆರೋಗ್ಯ ಸಿಗಬೇಕು ಎಂಬ ಕಾರಣಕ್ಕೆ ವರುಷಕ್ಕೆ ಎರಡು ಮೂರು ಬಾರಿ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಆದ್ಯತೆ ನೀಡಲಾಗುತ್ತಿದೆ. ಅದಕ್ಕೆ ಅಪೋಲೊ ಆಸ್ಪತ್ರೆ ಉಚಿತ ಶಿಬಿರ ನೀಡುತ್ತಿರುವುದು ನಮಗೆ ಸಹಕಾರಿಯಾಗಿದೆ ಎಂದರು.

ಶಿಬಿರದಲ್ಲಿ ಹುಣಸೂರಿನ ಅಪೋಲೊ ಆಸ್ಪತ್ರೆಯ ವ್ಯವಸ್ಥಾಪಕ ಕೇಶವ್, ಪತ್ರಕರ್ತರ ಸಂಘದ ಕಾರ್ಯದರ್ಶಿ ಶಂಕರ್, ಮೈಜಿಪಕ ಸಂಘದ ಕಾರ್ಯದರ್ಶಿ ದಾರಾ ಮಹೇಶ್, ಹಿರಿಯ ಪತ್ರಕರ್ತರಾದ ಎಚ್.ಕೆ.ಕೃಷ್ಣ, ಕೆ.ಕೃಷ್ಣ, ದಯಾಕರ್, ಅರುಣ್ ಕುಮಾರ್, ಮನುಕುಮಾರ್, ಯೋಗಾನಂದ್, ಗಜೇಂದ್ರ ದಾ.ರಾ.ಮಹೇಶ್ ಉಪಸ್ಥಿತರಿದ್ದರು.

ಮನೆ ಬಾಗಿಲಿಗೆ ಸವಲತ್ತು ತಲುಪಿಸಿ ಅಭಿವೃದ್ಧಿಗೆ ಶ್ರಮಿಸುವೆ



ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನೂತನ ನಾಮನಿರ್ದೇಶಕರಿಗೆ ಸನ್ಮಾನ.

ತಿ.ನರಸೀಪುರ, ಜೂ.3– ಸರ್ಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಮೂಲಕ ಪುರಸಭಾ ವ್ಯಾಪ್ತಿಯ ಜನತೆಯ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಪುರಸಭೆಯ ನೂತನ ನಾಮ ನಿರ್ದೇಶಕ ಮುದ್ದು ಬೀರನ ಹುಂಡಿ ಗುರುಸ್ವಾಮಿ ಹೇಳಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಮುದ್ದು ಬೀರನ ಹುಂಡಿ ಗ್ರಾಮದ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದವರು ಕ್ಷೇತ್ರದ ಶಾಸಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯನವರು ನನ್ನ ಮೇಲೆ ನಂಬಿಕೆ ಇಟ್ಟು ನಾಮನಿರ್ದೇಶಕರನ್ನಾಗಿ ಮಾಡಿದ್ದಾರೆ ಅವರ ಹೆಸರಿಗೆ ಕಳಂಕ ಬಂದಂತೆ ಕಾರ್ಯನಿರ್ವಹಿಸಿ ಪುರಸಭೆ ಜನತೆಯ ಪ್ರೀತಿ ವಿಶ್ವಾಸ ಗಳಿಸುವ ಮೂಲಕ ಸರ್ಕಾರದಿಂದ ಪುರಸಭೆಗೆ ಬರುವ ಎಲ್ಲಾ ಸೌಲತ್ತುಗಳನ್ನು ತರುವ ನಿಟ್ಟಿನಲ್ಲಿ ಸದ್ಯಸ್ಯರ ವಿಶ್ವಾಸವನ್ನು ಪಡೆದು ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಪುರಸಭಾ ವ್ಯಾಪ್ತಿಯಲ್ಲಿ ಸಾಕಷ್ಟು ದೂರುಗಳಿದ್ದು, ಅಭಿವೃದ್ಧಿ ಕುಂಠಿತವಾಗಿರುವುದರಿಂದ ಸಾಕಷ್ಟು ತೊಂದರೆಯಾಗುತ್ತದೆ, ಪಟ್ಟಣದಲ್ಲಿ ಸಿಸಿ ರಸ್ತೆ ಚರಂಡಿ ಕುಡಿಯುವ ನೀರು ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮುಖ್ಯ ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ ಮಹದೇವಪ್ಪನವರು ಪುರಸಭೆಗೆ ಸಾಕಷ್ಟು ಅನುದಾನಗಳನ್ನು ನೀಡಿದ್ದು ಅದನ್ನು ಸದ್ಬಳಕೆ ಮಾಡಿಕೊಂಡು ಆದ್ಯತೆಯ ಮೇರೆಗೆ ವಾರ್ಡ್‌ಗಳ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಮಾದರಿ ಪುರಸಭೆಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಶ್ರಮಿಸುವುದಾಗಿ ತಿಳಿಸಿದರು.

ಪ್ರತಿ ವಾರ್ಡ್‌ಗಳಲ್ಲಿ ಸಭೆ ನಡೆಸುವ ಮೂಲಕ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅಗತ್ಯಕ್ಕೆ ತಕ್ಕಂತೆ ಸ್ಪಂದಿಸುವ ಮೂಲಕ ಸಮಸ್ಯೆಗಳಿಗೆ ಕಡಿವಾಣ ಹಾಕಿ, ಅನುದಾನದ ಅವಶ್ಯಕತೆ ಇದ್ದರೆ ಮುಖ್ಯಮಂತ್ರಿಯ ಹಾಗೂ ಡಾ.ಎಸ್‌ಸಿ ಮಹದೇವಪ್ಪನವರ ಬಳಿ ಚರ್ಚಿಸಿ ಪುರಸಭೆಗೆ ಅನುದಾನ ತರುವ ಮೂಲಕ ಪುರಸಭೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು ಎಂದರು.

ಈ ವೇಳೆ ಹೆಳವರಹುಂಡಿ ಪಿಎಸಿಎಸ್ ಮಾಜಿ ಅಧ್ಯಕ್ಷ ಯಜಮಾನ್ ಹೆಚ್ ಮರಿಸ್ವಾಮಿ, ಅಶ್ವಥ್, ಶಂಕರೇಗೌಡರು, ಕುಮಾರ್, ಹುಚ್ಚೇಗೌಡ, ಕಂದಾರಿ, ಬೀರೇಗೌಡ, ರಮೇಶ್, ಮಹದೇವು, ಗೋವಿಂದ, ಹೆಳವರ ಹುಂಡಿ ಮತ್ತಿತರರಿದ್ದರು

ಲಾಭದಲ್ಲಿ ಅರಣ್ಯ, ವಸತಿ, ವಿಹಾರಧಾಮ



ಅರಣ್ಯ, ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ 45ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಪ್ರತಿಯೊಬ್ಬರೂ ಉತ್ತಮವಾಗಿ ಕೆಲಸ ನಿರ್ವಹಿಸಿದರೆ ಆ ಸಂಸ್ಥೆ ಲಾಭದಾಯಕವಾಗಿ ಸಾಗುತ್ತದೆ. ಬರುವ ಲಾಭಾಂಶದಿಂದ ಸಾರ್ವಜನಿಕರ ಸೇವೆಗೆ ಹಣವನ್ನು ವಿನಿಯೋಗಿಸಬೇಕೆಂದು 12 ಕೋಟಿ ರೂ.ಗಳನ್ನು ಮುಖ್ಯಮಂತ್ರಿಗಳ ನಿಧಿಗೆ ನೀಡಲಾಗಿದೆ. ಜೊತೆಗೆ ತಾಲೂಕು ವ್ಯಾಪ್ತಿಯಲ್ಲಿ ಸಮಾಜ ಕಾರ್ಯಕ್ಕೆ ಕೆಲವೊಂದು ವಾಹನಗಳನ್ನು ನೀಡಲಾಗಿದೆ. –ಅನಿಲ್ ಚಿಕ್ಕಮಾದು.


ಹೆಚ್.ಡಿ.ಕೋಟೆ, ಜೂ.3– ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯು ಪೂರಕವಾಗಿ ಕೆಲಸ ನಿರ್ವಹಿಸಿ ಪ್ರವಾಸಿಗರನ್ನು ಆಕರ್ಷಿಸಿ ಲಾಭದಾಯಕವಾಗಿ ಮುಂದುವರಿಯುತ್ತಿದೆ ಎಂದು ಅರಣ್ಯ, ವಸತಿ ಹಾಗೂ ವಿಹಾರ ಧಾಮಗಳ ಅಧ್ಯಕ್ಷ ಹಾಗೂ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಬೆಂಗಳೂರಿನ ಜಂಗಲ್ ಲಾಡ್ಜ್ ರೆಸಾರ್ಟ್ ಪ್ರಧಾನ ಕಚೇರಿ ಸಭಾಂಗಣದಲ್ಲಿ ನಡೆದ ಅರಣ್ಯ, ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ 45ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ತಾಲೂಕು ವನಸಿರಿ ನಾಡು ಎಂಬ ಖ್ಯಾತಿ ಪಡೆದಿರುವ ನಮ್ಮ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ನನಗೆ ಜನತೆ ಎರಡನೇ ಬಾರಿ ಆಶೀರ್ವಾದ ಮಾಡಿದ್ದಾರೆ ನನಗೂ ಕಾಡಿಗೂ ಬಹಳಷ್ಟು ನಂಟು, ಸರ್ಕಾರ ನನಗೆ ಈ ಸಂಸ್ಥೆಯ ಜವಾಬ್ದಾರಿ ವಹಿಸಿ ಅಧ್ಯಕ್ಷನಾಗಿ ಮಾಡಿದೆ ಎಂದರು.

ನನ್ನ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ್ದು, ಇನ್ನಷ್ಟು ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳು ಸಂಭ್ರಮಿಸುತ್ತಿದೆ, ರೆಸಾರ್ಟ್‌ಗಳನ್ನು ಆರಂಭಿಸಿ ಇನ್ನೂ ಹೆಚ್ಚು ಮಂದಿಗೆ ಉದ್ಯೋಗ ನೀಡಿ ಹೊಸ ಯೋಜನೆಗಳ ಮೂಲಕ ಅಭಿವೃದ್ಧಿ ಕೆಲಸಗಳನ್ನು ನಡೆಸಲಾಗಿದೆ. ಸಂಸ್ಥೆಯ ಲಾಭವನ್ನು ಹೆಚ್ಚಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಎಂಎಸ್‌ಐಎಲ್ ಎಂಡಿ ಮನೋಜ್ ಕುಮಾರ್, ಜೆಎಲ್‌ಆರ್ ಸಂಸ್ಥೆಯ ಮಾಜಿ ಅಧ್ಯಕ್ಷಅಪ್ಪಣ್ಣ ಮಹೇಶ್, ಕೆಪಿಸಿಸಿ ವಕ್ತಾರ ಅನಿಲ್, ಕಾಂಗ್ರೆಸ್ ಮುಖಂಡರಾದ ಅಲಿ ಗೊರವನಹಳ್ಳಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೆಹರೂಜ್ ಖಾನ್, ಜೆಎಲ್‌ಆರ್ ಎಂಡಿ ಪ್ರಶಾಂತ್ ಶಂಖಿನ ಮಠ, ಅನುಷಾ, ರೆಸಾರ್ಟ್‌ಗಳ ವ್ಯವಸ್ಥಾಪಕರು, ಜೆಎಲ್‌ಆರ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸೋಮಶೇಖರ್ ಅವರಿಗೆ ಬೀಳ್ಕೊಡುಗೆ



ಸಾಲಿಗ್ರಾಮ ಪಶು ಚಿಕಿತ್ಸಾಲಯದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿಯಾದ ಡಿ.ಗ್ರೂಪ್ ನೌಕರ ಹೆಬ್ಬಾಳು ಸೋಮಶೇಖರ್ ಅವರಿಗೆ ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು. ತಾಲೂಕು ಮುಖ್ಯ ವೈದ್ಯಾಧಿಕಾರಿ ಡಾ.ಬಿ.ಮಂಜುನಾಥ್, ಹೊಸೂರು ಎ.ಕುಚೇಲ್, ಮುಂತಾದವರು ಉಪಸ್ಥಿತರಿದ್ದರು.

ಬಸವಣ್ಣನವರ ತತ್ವ, ಸಿದ್ಧಾಂತ ಅಳವಡಿಸಿಕೊಂಡರೆ ಬಡತನ ಇರದು

ಮಲ್ಕುಂಡಿ: ವಿಶ್ವಗುರು ಬಸವಣ್ಣನವರ ತತ್ವ–ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಬಡತನ ಇರುವುದಿಲ್ಲ ಎಂದು ಗ್ರಾ.ಪಂ ಅಧ್ಯಕ್ಷ ನಾಗೇಶ್ ಅಭಿಪ್ರಾಯಪಟ್ಟಿದ್ದಾರೆ. ಸಮೀಪದ ಹೆಡಿಯಾಲ ಗ್ರಾಮದಲ್ಲಿ ಬಸವ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಸವಣ್ಣನವರು ಕಾಯಕವೇ ಕೈಲಾಸ ಎನ್ನುವ ಮೂಲಕ ದುಡಿಮೆಯನ್ನು ಸಾರಿದರು. ದುಡಿಮೆಗೆ ಬೆಲೆ ನೀಡಿದರೆ ಬಡತನ ನಿರ್ಮೂಲನೆ ಶತಸಿದ್ಧ. ಬುದ್ಧ, ಬಸವ, ಅಂಬೇಡ್ಕರ್ ಮೊದಲಾದ ಮಹಾಪುರುಷರು ಯಾವುದೇ ಒಂದು ಜಾತಿಗೆ ಸೀಮಿತರಲ್ಲ. ಅವರು ಇಡೀ ಮಾನವ ಕುಲಕ್ಕೆ ಮಾದರಿಯಾಗಿದ್ದಾರೆ. ಇಂತಹ ಮಹನೀಯರ ಜಯಂತಿ ಆಚರಿಸುವ ಮೂಲಕ ಅವರ ತತ್ವ ಆದರ್ಶಗಳನ್ನು ಅಳವಡಿಸಿಕೊಂಡರೆ ಮಾತ್ರ ಅವರ ಜಯಂತಿಗೆ ಅರ್ಥ ಸಿಗುತ್ತದೆ ಎಂದು ತಿಳಿಸಿದರು. ದಡದಹಳ್ಳಿ ಮಠಾಧ್ಯಕ್ಷ ಷಡಕ್ಷರಿಸ್ವಾಮಿಜಿ, ಸೇರಿದಂತೆ ಬಸವ ಬಳಗದವರು ಹಾಜರಿದ್ದರು. ಇದೇ ವೇಳೆ ಬಸವಣ್ಣ ಹಾಗೂ ಶಿವಕುಮಾರ ಸ್ವಾಮೀಜಿ ಭಾವಚಿತ್ರವನ್ನು ನಂದಿ ಕಂಬ, ವೀರಗಾಸೆ ಡೋಲು ಕುಣಿತದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು

ಕುಸಿದು ವರ್ಷವಾದರೂ ದುರಸ್ಥಿ ಕಾಣದ ಸೇತುವೆ

ಸಾವು-ನೋವು ಸಂಭವಿಸುತ್ತಿದ್ದರೂ ತಲೆಕೆಡಿಸಿಕೊಳ್ಳದ ತಾಲೂಕು ಆಡಳಿತ

ಕಾವಲು ಪಡೆಯಿಂದ ಉಗ್ರ ಹೋರಾಟದ ಎಚ್ಚರಿಕೆ



ಕುಸಿದು ಬಿದ್ದಿರುವ ಸೇತುವೆಯನ್ನು ವೀಕ್ಷಿಸುತ್ತಿರುವ ಕಾವಲು ಪಡೆ ಸದಸ್ಯರು.

ಪಿರಿಯಾಪಟ್ಟಣ, ಜೂ.3– ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಮಾಲಂಗಿ ಗ್ರಾಮದ ಬಳಿಯಿರುವ ಸೇತುವೆಯ ಒಂದು ಭಾಗ ಕುಸಿದು ವರ್ಷವೇ ಉರುಳಿದರೂ ದುರಸ್ಥಿಯಾಗದ ಕಾರಣ ದಿನಂಪ್ರತಿ ಸಾವು–ನೋವುಗಳು ಸಂಭವಿಸುತ್ತಿವೆ. ಈ ಜಾಗದ ಬಗ್ಗೆ ತಾಲೂಕು ಆಡಳಿತ ತಲೆಕೆಡಿಸಿಕೊಳ್ಳುತ್ತಿಲ್ಲ ಎಂಬ ದೂರುಗಳಿವೆ.

ಇದೀಗ ಮಳೆಗಾಲ ಆರಂಭವಾಗಿದ್ದು, ಕುಸಿದ ಸೇತುವೆಯ ಭಾಗ ಮತ್ತಷ್ಟು ಕುಸಿಯಲಾರಂಭಿಸಿದ್ದು, ಭಾರೀ ಅನಾಹುತವಾಗುವ ಸಂಭವವಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ದುರಸ್ತಿಪಡಿಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಸ್ಥಳಕ್ಕೆ ಭೇಟಿ ನೀಡಿದ್ದ ಕಾವಲು ಪಡೆಯ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಸುಮಾರು ಎರಡು ವರ್ಷಗಳ ಹಿಂದೆ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಅಂದಿನ ಸಂಸದ ಪ್ರತಾಪ್ ಸಿಂಹ ಅವರ ಅವಧಿಯಲ್ಲಿ ತಾಲೂಕಿನ ಮಾಲಂಗಿ ಗ್ರಾಮದಿಂದ ಹಳ್ಳೂರು ಸಂಪರ್ಕಿಸುವ ರಸ್ತೆಯಲ್ಲಿ ಅಬ್ಬಳತಿ ಗ್ರಾಮದಿಂದ ಹಳ್ಳೂರಿಗೆ ಹರಿಯುವ ನೀರಿಗೆ ಸೇತುವೆ ನಿರ್ಮಿಸಲಾಗಿತ್ತು. ಒಂದೇ ವರ್ಷದಲ್ಲೆ ಸೇತುವೆಯ ಒಂದು ಭಾಗ ಕುಸಿದು ಬಿತ್ತು. ದೊಡ್ಡ ಕಂದಕವೇ ನಿರ್ಮಾಣವಾಗಿತ್ತು.

ಇದನ್ನು ದುರಸ್ಥಿ ಮಾಡದೆ ನಿರ್ಲಕ್ಷ್ಯ ಮಾಡಿದ್ದರಿಂದ ಗ್ರಾಮದ ವಿಘ್ನೇಶ್ ಎಂಬಾತ ಬೈಕಿನಲ್ಲಿ ಹೋಗುತ್ತಿದ್ದಾಗ ಈ ಸೇತುವೆ ಹಳ್ಳಕ್ಕೆ ಬಿದ್ದು ಸಾವನ್ನಪ್ಪಿದ್ದ ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪೊಲೀಸರು ದುರ್ಘಟನೆಯ ಜಾಗದಲ್ಲಿ ಹೆಚ್ಚಿನ ಅನಾಹುತ ತಪ್ಪಿಸಲು ಬ್ಯಾರಿಕೇಡ್ ಇಟ್ಟಿದ್ದರು. ನಂತರದ ದಿನಗಳಲ್ಲಿ ಇದೇ ಸ್ಥಳದಲ್ಲಿ ಅನೇಕ ಅಪಘಾತಗಳು ಸಂಭವಿಸಿ ಹಲವಾರು ಮಂದಿ ಗಾಯಗೊಂಡಿದ್ದರೂ ಸಹ ಅಧಿಕಾರಿಗಳು, ರಾಜಕಾರಣಿಗಳು ಕಂಡು ಕಾಣದಂತೆ ನಿರ್ಲಕ್ಷ ವಹಿಸಿದ್ದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಒಂದು ವರ್ಷದ ಹಿಂದೆಯೇ ಈ ಸೇತುವೆ ಕುಸಿದಿದ್ದರೂ ಸಹ ಈ ರಸ್ತೆಯಲ್ಲಿ ಹಳ್ಳೂರು ಹಾಗೂ ಮಾಲಂಗಿ ಗ್ರಾಮದ ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ದಿನನಿತ್ಯ ಜೀವ ಭಯದಿಂದ ಓಡಾಡಬೇಕಾದ ಪರಿಸ್ಥಿತಿ ಇದೆ. ಅನೇಕ ಬಾರಿ ಸಂಬಂಧಪಟ್ಟ ಇಲಾಖೆಗೆ ದೂರು ನೀಡಿದರೂ ಸಹ ಯಾವುದೇ ಅಧಿಕಾರಿಗಳು ಗ್ರಾಮಸ್ಥರ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಗ್ರಾಮದ ಗೋವಿಂದೇಗೌಡ ಆರೋಪಿಸಿದ್ದಾರೆ.

ಗ್ರಾಮದ ಮುಖಂಡರ ಮನವಿಯ ಮೇರೆಗೆ ತಾಲೂಕು ಕಾವಲು ಪಡೆಯ ಪದಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕುಸಿದು ಬಿದ್ದಿರುವ ಸೇತುವೆಯ ಸ್ಥಳವನ್ನು ಪರಿಶೀಲಿಸಿ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವ ಕೆ.ವೆಂಕಟೇಶ್ ಅವರು ಕ್ರಮ ಕೈಗೊಂಡು ದುರಸ್ಥಿಪಡಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳಬೇ ಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ತಾಲೂಕು ಕಾವಲು ಪಡೆಯ ಅಧ್ಯಕ್ಷ ಎಚ್.ಎ. ಸುಬ್ರಹ್ಮಣ್ಯ, ನಗರ ಘಟಕದ ಅಧ್ಯಕ್ಷ ಎ.ಜೆ.ಫ್ರಾನ್ಸಿಸ್, ತಾಲೂಕು ಪ್ರಧಾನ ಕಾರ್ಯದರ್ಶಿ ತೆಲಗಿ ನಕುಪ್ಪೆ ಯೋಗೇಶ್, ಉಪಾಧ್ಯಕ್ಷ ಮಹ ದೇವ್, ಮಾಲಂಗಿ ಗ್ರಾಮದ ಮುಖಂಡ ಗೋವಿಂದೇಗೌಡ, ಸುರೇಶ್, ಸುಬ್ರಹ್ಮಣ್ಯ, ಸುರೇಶ್, ನಾಯಕ್ ಅವರುಗಳು ಉಪಸ್ಥಿತರಿದ್ದರು.

ಹೈಕೋರ್ಟ್ ಆದೇಶಕ್ಕೂ ತಲೆಬಾಗದ ಕಮಲ್!

● ನಾಳೆ ರಾಜ್ಯದಲ್ಲಿ 'ಥಗ್ ಲೈಫ್' ಬಿಡುಗಡೆ ಇಲ್ಲ ● ಜೂ.10ಕ್ಕೆ ವಿಚಾರಣೆ ಮುಂದೂಡಿದ ಕೋರ್ಟ್

ಬೆಂಗಳೂರು, ಜೂ.3(ಕೆಎಂಶಿ)–ಕನ್ನಡ ಭಾಷೆ ಕುರಿತು ನೀಡಿದ ವಿವಾದಾತ್ಮಕ ಹೇಳಿಕೆಗೆ ಕನ್ನಡಿಗರ ಕ್ಷಮೆ ಯಾಚಿಸುವಂತೆ ಕರ್ನಾಟಕ ಹೈಕೋರ್ಟ್ ನೀಡಿದ ಆದೇಶಕ್ಕೂ ತಲೆಬಾಗದ ಚಿತ್ರನಟ ಕಮಲ ಹಾಸನ್ ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ.

ಕಮಲ ಹಾಸನ್ ನಿಲುವಿನಿಂದ ಕರ್ನಾಟಕದಲ್ಲಿ ಅವರ ಅಭಿನಯದ 'ಥಗ್ ಲೈಫ್' ಸಿನೆಮಾ ಜೂನ್ 5ರಂದು ಬಿಡುಗಡೆ ಕಾಣುತ್ತಿಲ್ಲ. ರಾಜ್‌ಕಮಲ್ ಫಿಲ್ಮ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಕರ್ನಾಟಕದಲ್ಲಿ 'ಥಗ್ ಲೈಫ್' ಸಿನಿಮಾ ಹಂಚಿಕೆ ಮತ್ತು ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ, 'ಕನ್ನಡ ತಮಿಳಿ ನಿಂದ ಹುಟ್ಟಿದೆ ಎಂಬ ವಿವಾದಾತ್ಮಕ ಹೇಳಿಕೆ ನೀಡಲು ಕಮಲ ಹಾಸನ್ ಭಾಷಾ ತಜ್ಞರೇ ಅಥವಾ ಇತಿಹಾಸಕಾರರೇ' ಎಂದು ಪ್ರಶ್ನಿಸಿದರು.

ನೆಲ, ಜಲ, ಭಾಷೆ ವಿಚಾರಗಳು ಯಾವುದೇ ವ್ಯಕ್ತಿಗೆ ಅತ್ಯಂತ ಮುಖ್ಯ, ದೇಶ ವಿಭಜನೆಯಾಗಿದ್ದು ಭಾಷೆ ಆಧಾರದಲ್ಲಿ, ರಾಜ್ಯಗಳು ಭಾಷೆಗಳ ಮೇಲೆ ರಚನೆಯಾಗಿವೆ. ಇದು ಭಾಷೆ ಪ್ರಾಮುಖ್ಯತೆ ತಿಳಿಸುತ್ತದೆ ಎಂದು ಹೇಳಿದರು.



ಕನ್ನಡದ ಬಗ್ಗೆ ಬಳಸಿರುವ ಪದವನ್ನು ಹಿಂದೆ ಪಡೆದು ಕ್ಷಮೆ ಯಾಚಿಸುವಂತೆ ಆದೇಶಿಸಿದರು.

ಫಿಲ್ಮ್ಸ್ ಸಂಸ್ಥೆ ಪ್ರತಿನಿಧಿಸಿದ ವಕೀಲ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿ, ಕಮಲ ಹಾಸನ್ ನೀಡಿರುವ ಹೇಳಿಕೆ ಹಿನ್ನೆಲೆಯಲ್ಲಿ ಚಿತ್ರದ ಬಿಡುಗಡೆಗೆ ನಿಷೇಧ ವಿಧಿಸಲಾಗಿದೆ. ಇಡೀ ಹೇಳಿಕೆಯನ್ನು ನಾನು ನೋಡಿದ್ದೇನೆ. ಕನ್ನಡ ಚಿತ್ರನಟ ಶಿವ ರಾಜ್‌ಕುಮಾರ್ ಸಹ ಕಾರ್ಯಕ್ರಮದಲ್ಲಿ ಹಾಜರಿದ್ದರು. ಕಮಲ್ ಹೇಳಿಕೆಯನ್ನು ವ್ಯಾಪ್ತಿ ಮೀರಿ ಅರ್ಥೈಸಿಕೊಂಡು, ಕನ್ನಡದ ವಿರುದ್ಧ ಏನೋ ಹೇಳಿದ್ದಾರೆ ಎಂಬುದು ಸರಿಯಲ್ಲ. ಹೇಳಿಕೆ ನೀಡಿದ ನಂತರ ಸ್ಪಷ್ಟನೆಯನ್ನೂ ನೀಡಿದ್ದಾರೆ. ಯಾವ ಸಂದರ್ಭದಲ್ಲಿ ಹೇಳಿಕೆ ನೀಡಿದ್ದಾರೆ ಎಂಬುದನ್ನು ಗಮನಿಸಬೇಕು ಎಂದರು.

ಇದಕ್ಕೆ ನ್ಯಾಯಮೂರ್ತಿ ಪ್ರತಿಕ್ರಿಯಿಸಿ, ವಿವಾದ ಸೃಷ್ಟಿಯಾದ ನಂತರ ಕಮಲ ಹಾಸನ್ ನೀಡಿರುವ ಪ್ರತಿಕ್ರಿಯೆಯಲ್ಲಿ ಕ್ಷಮೆ ಕೋರಿದ್ದರೆ ಒಪ್ಪಿಕೊಳ್ಳಲಾಗುವುದು. ಇದರಲ್ಲಿ ಯಾವುದೇ ಕ್ಷಮೆ ಹೇಳಿಕೆ ಇಲ್ಲ, ಯಾರೇ ಆದರೂ ಜನರ ಭಾವನೆಗಳನ್ನು



ನೋಯಿಸಲಾಗದು. ಸಾರ್ವಜನಿಕ ವ್ಯಕ್ತಿತ್ವದ ಕಮಲ್ ಇಂಥ ಹೇಳಿಕೆ ನೀಡಲಾಗದು. ಇದರಿಂದ ಅಶಾಂತಿ, ಕ್ಷೋಭೆ ಉಂಟಾಗಿದೆ.

ಕರ್ನಾಟಕದ ಜನರು ಕ್ಷಮೆ ಕೋರಲು ಕೇಳಿದ್ದಾರೆ ಅಷ್ಟೆ, ಕಮಲ್ ರಕ್ಷಣೆ ಕೋರಿ ನ್ಯಾಯಾಲಯದ ಮುಂದೆ ಬಂದಿದ್ದಾರೆ. ಯಾವ ಆಧಾರದಲ್ಲಿ ಹೇಳಿಕೆ ನೀಡಿದ್ದಾರೆ. 1950ರಲ್ಲಿ ರಾಜಗೋಪಾಲಚಾರಿ ಇಂಥದ್ದೇ ಹೇಳಿಕೆ ನೀಡಿ, ನಂತರ ಬಹಿರಂಗ ಕ್ಷಮೆ ಕೋರಿದ್ದರು. ಈಗ ಸಿನಿಮಾ ಬಿಡುಗಡೆಗೆ ನಿರ್ಮಾಣ ಸಂಸ್ಥೆ ರಕ್ಷಣೆ ಕೋರುತ್ತಿದೆ, ಕ್ಷಮೆ ಕೇಳಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲ. ಮಣಿರತ್ನಂ ಸಿನಿಮಾದ ಮಹತ್ವ ಕಮಲ್‌ಗೆ ತಿಳಿದಿದೆ. ಆದರೆ, ಕ್ಷಮೆ ವಿಚಾರದಲ್ಲಿ ಯಾವುದೇ ಹೇಳಿಕೆ ನೀಡುತ್ತಿಲ್ಲ, ಸಮಸ್ಯೆ ಸೃಷ್ಟಿಸಿರುವುದಕ್ಕೆ ಪೊಲೀಸರು ರಕ್ಷಣೆ ನೀಡಬೇಕೆ, ಜನರ ಭಾವನೆಗಳ ಜೊತೆ ಭಾಷೆ ಥಳಕು ಹಾಕಿಕೊಂಡಿದೆ.

ಕಮಲ್ ಸಾಮಾನ್ಯ ವ್ಯಕ್ತಿಯಲ್ಲ, ಸಾರ್ವಜನಿಕ ವ್ಯಕ್ತಿತ್ವ. ಸಾಮಾಜಿಕ ಮಾಧ್ಯಮದಲ್ಲಿ ಬರೆಯುವ ವ್ಯಕ್ತಿಗಳನ್ನೂ ತನಿಖೆಗೆ ಒಳಪಡಿಸಲಾಗುತ್ತಿದೆ ಎಂಬುದು ನೆನಪಿರಲಿ. ಕರ್ನಾಟಕದಲ್ಲಿ ನಿಮ್ಮ ಸಿನೆಮಾ ಬಿಡುಗಡೆಯಾಗಬೇಕಿದ್ದರೆ ಕ್ಷಮೆ ಕೇಳಿ, ಇಲ್ಲವೆಂದಾದರೆ ಬಿಡಿ. ಜನರ ಭಾವನೆಗಳನ್ನು ನೋಯಿಸಲು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಲಾಗದು. ಕರ್ನಾಟಕದಲ್ಲಿ ಸಂಪಾದನೆ ಮಾಡಬೇಕೆಂದಾದರೆ ಕ್ಷಮೆ ಕೋರಬೇಕು. ಕಮಲ್ ಹೇಳಿಕೆ ನೀಡಿರುವುದರಿಂದ ಅವರೇ ಅದನ್ನು ಹಿಂಪಡೆಯಬೇಕು, ಹೇಳಿಕೆಗೆ ಬದ್ಧವಾಗಿದ್ದಾರೆಯೇ ಎಂದರು.

> “ ಕನ್ನಡ ತಮಿಳಿನಿಂದ ಹುಟ್ಟಿದೆ ಎಂಬ ವಿವಾದಾತ್ಮಕ ಹೇಳಿಕೆ ನೀಡಲು ಕಮಲ್ ಹಾಸನ್ ಭಾಷಾ ತಜ್ಞರೇ ಅಥವಾ ಇತಿಹಾಸಕಾರರೇ.
> –ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ಶೌರ್ಯದ ಮಹತ್ವ ಅಡಕವಾಗಿರುವುದು ವಿವೇಚನೆಯಲ್ಲಿ. ಭಾವನೆಯನ್ನು ನಗಣ್ಯವಾಗಿ ಪರಿಗಣಿಸುವುದಕ್ಕೆ ಅವಕಾಶ ನೀಡುವುದಿಲ್ಲ. ತಪ್ಪುಗಳಾಗುತ್ತವೆ, ಆದಾಗ ಏನು ಮಾಡಬೇಕು ಎಂಬುದೂ ಗೊತ್ತಿರಬೇಕು. ಚಿತ್ರ ನಿರ್ಮಾಣಕ್ಕೆ ಕೋಟ್ಯಂತರ ರೂ. ಹೂಡಿಕೆ ಮಾಡಲಾಗಿದೆ ಎನ್ನುತ್ತಿದ್ದೀರಿ, ಹಾಗಾದರೆ ಕರ್ನಾಟಕ ಬಿಟ್ಟುಬಿಡಿ ಎಂದರು.

ವಕೀಲ ಧ್ಯಾನ್ ಚಿನ್ನಪ್ಪ ವಾದ ಮುಂದುವರೆಸಿ, ಸಿನಿಮಾ ನೋಡಬೇಕು ಎನ್ನುವವರ ಹಕ್ಕುಗಳಿಗೆ ಸಮಸ್ಯೆಯಾಗುತ್ತದೆ ಎಂದರು. ಇದಕ್ಕೆ ನ್ಯಾಯಮೂರ್ತಿಗಳು, ಸಿನಿಮಾ ನೋಡಬೇಕು ಎನ್ನುವವರು ನ್ಯಾಯಾಲಯದ ಮುಂದೆ ಬರಲಿ, ಈ ಕುರಿತು ಆದೇಶ ಮಾಡಲಾಗುವುದು. ಅನಗತ್ಯ ಹೇಳಿಕೆ ನೀಡಲಾಗಿದೆ, ಬಾಯಿ ತಪ್ಪಿ ಮಾತನಾಡುವ ಸಾಧ್ಯತೆ ಇರುತ್ತದೆ. ಆಡಿದ ಮಾತನ್ನು ಹಿಂಪಡೆಯಲಾಗದು, ಬದಲಿಗೆ ಕ್ಷಮೆ ಕೋರಬಹುದು. ಸಮಸ್ಯೆ ಸೃಷ್ಟಿಸಿದ್ದು ಅಶಾಂತಿಗೆ ಕಾರಣವಾಗಿದೆ. ಇದಕ್ಕಾಗಿ ರಾಜಗೋಪಾಲಚಾರಿ ಉದಾಹರಣೆ ನೀಡಿದ್ದು, ಪರಿಸ್ಥಿತಿ ಕೈಮೀರುವಂತೆ ಮಾಡಿ, ಈಗ ಪೊಲೀಸ್ ರಕ್ಷಣೆ ಕೋರುತ್ತಿರುವುದು ಸರಿಯಲ್ಲ ಎಂದರು.

ವಕೀಲ ಧ್ಯಾನ್ ಚಿನ್ನಪ್ಪ, ತಮ್ಮ ಕಕ್ಷಿದಾರರ ಸೂಚನೆ ಪಡೆಯಲಾಗುವುದು ಎಂದಾಗ, ಸಮ್ಮತಿಸಿದ ನ್ಯಾಯಪೀಠ ವಿಚಾರಣೆಯನ್ನು ಮಧ್ಯಾಹ್ನ 2.30ಕ್ಕೆ ಮುಂದೂಡಿತು. ನಂತರ ನ್ಯಾಯಪೀಠ ಅರ್ಜಿ ಕೈಗೆತ್ತಿಕೊಂಡಾಗ ಕರ್ನಾಟಕದಲ್ಲಿ ಜೂನ್ 5ರಂದು 'ಥಗ್ ಲೈಫ್' ಬಿಡುಗಡೆ ಮಾಡುವುದಿಲ್ಲ, ವಿವಾದಾತ್ಮಕ ಹೇಳಿಕೆ ಕುರಿತು ಚರ್ಚೆ ನಡೆಸಲು ಅವಕಾಶ ನೀಡಬೇಕೆಂದು ಅರ್ಜಿದಾರರ ಪರ ವಕೀಲರು ಕೋರಿದರು. ಕೋರಿಕೆ ಪರಿಗಣಿಸಿದ ನ್ಯಾಯಪೀಠ ಈ ತಿಂಗಳ 10ಕ್ಕೆ ವಿಚಾರಣೆ ಮುಂದೂಡಿತು.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ

ಕುರುಬರ ಸಂಘದ ಮಾಜಿ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ಅಭಿಪ್ರಾಯ



ಮೈಸೂರಿನ ಕುರುಬಾರಹಳ್ಳಿ ಸರ್ಕಾರಿ ಶಾಲೆಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಘ ಆಯೋಜಿಸಿದ್ದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅವರ ಹುಟ್ಟುಹಬ್ಬದ ಅಂಗವಾಗಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಲಾಯಿತು.

ಮೈಸೂರು, ಜೂ.3(ಬಿಎಲ್‌ಯು)– ಪ್ರಸ್ತುತ ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರದ ಕುರುಬಾರಹಳ್ಳಿ ಸರ್ಕಾರಿ ಶಾಲೆಯಲ್ಲಿ ಇಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಘ ಆಯೋಜಿಸಿದ್ದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅವರ ಹುಟ್ಟುಹಬ್ಬದಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದವರು ಈಗ ಉನ್ನತ ಹುದ್ದೆಯಲ್ಲಿದ್ದಾರೆ. ಈ ಹಿನ್ನೆಲೆ ಪೋಷಕರು ಮಕ್ಕಳನ್ನು ಸರ್ಕಾರಿ ದಾಖಲಿಸಿ ಎಂದು ಸಲಹೆ ನೀಡಿದರು. ಈ ವೇಳೆ ಶಾಲೆಯ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ ಹಾಗೂ ಸಿಹಿ ತಿಂಡಿಗಳನ್ನು ವಿತರಿಸಲಾಯಿತು. ಶ್ರೀ ಅರುಣ್ ಸ್ವಾಮೀಜಿ, ಮಾಜಿ ಉಪ ಮೇಯರ್ ಮಹದೇವಮ್ಮ, ಮೈಸೂರು ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಮುಖ್ಯೋಪಾಧ್ಯಾಯ ಅಂಬುಜ, ಅಂಗನವಾಡಿ ಶಿಕ್ಷಕಿ ಸುಜಾತ, ಪುಟ್ಟಸ್ವಾಮಿ, ಮಹದೇವಮ್ಮ, ಎಂ.ಎನ್.ಚೇತನ್ ಗೌಡ, ಹರ್ಷ, ಚೈತ್ರಾ ಪುನೀತ್, ರಾಜಣ್ಣ ಈ ವೇಳೆ ಹಾಜರಿದ್ದರು.

ವಯೋನಿವೃತ್ತಿ ಹೊಂದುವ ಅಧಿಕಾರಿಗಳು, ನೌಕರರಿಗೆ ವೇತನ ಬಡ್ತಿ ಮಂಜೂರಿಗೆ ಆಗ್ರಹ

ಮೈಸೂರು, ಜೂ.3(ಎಸ್‌ಪಿಎನ್)– ವಾರ್ಷಿಕ ವೇತನ ಬಡ್ತಿಗೆ ಒಂದು ದಿನ ಹಿಂದೆ ವಯೋನಿವೃತ್ತಿ ಹೊಂದುವ ಅಧಿಕಾರಿ, ನೌಕರರಿಗೆ ಪಿಂಚಣಿ ನಿಗದಿಪಡಿಸಲು ಕಾಲ್ಪನಿಕ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡುವಂತೆ ರಾಜ್ಯ ಸರ್ಕಾರಿ ನೌಕರರ ಸಂಘ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಮಾಡಿದೆ.

ರಾಜ್ಯ ಸರ್ಕಾರದ ಅಧಿಕಾರಿ, ನೌಕರರ ವಾರ್ಷಿಕ ವೇತನ ಬಡ್ತಿಯನ್ನು ಪ್ರತಿವರ್ಷ ಜನವರಿ ಮತ್ತು ಜುಲೈ ಮಾಹೆಯಲ್ಲಿ ನೀಡಲಾಗುತ್ತಿದೆ. ಉದಾಹರಣೆಗೆ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ, ನೌಕರನಿಗೆ ಜುಲೈ–1 ರಂದು ವಾರ್ಷಿಕ ವೇತನ ಬಡ್ತಿ ಇದ್ದು, ಜೂ.30ರಂದು ನಿವೃತ್ತಿ ಹೊಂದಿದರೆ ಹಾಗೂ ಜನವರಿ–1ರಂದು ವಾರ್ಷಿಕ ವೇತನ ಬಡ್ತಿ ಇದ್ದು, ಡಿಸೆಂಬರ್–31 ರಂದು ನಿವೃತ್ತಿ ಹೊಂದಿದರೆ, ಅಂತಹ ಅಧಿಕಾರಿ, ನೌಕರರನಿಗೆ ಒಂದು ವಾರ್ಷಿಕ ವೇತನ ಬಡ್ತಿ ನಷ್ಟವಾಗಲಿದೆ ಎಂದಿದ್ದಾರೆ.

ಈ ಸಂಬಂಧ ತಮಿಳುನಾಡು ಸರ್ಕಾರಿ ನೌಕರರಿಂದ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿರುವ ಮದ್ರಾಸ್ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪುಗಳನ್ನಾಧರಿಸಿ ಕೇಂದ್ರ ಸರ್ಕಾರವು ಜುಲೈ–1 ಮತ್ತು ಜನವರಿ–1ರಂದು ವಾರ್ಷಿಕ ವೇತನ ಬಡ್ತಿಗೆ ಅರ್ಹರಿದ್ದು, ಪಿಂಚಣಿ ನಿಗದಿಪಡಿಸಲು ಕಾಲ್ಪನಿಕವಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ನೀಡಿ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರಿ ನೌಕರರಿಗೆ ಭಾರತ ಸರ್ಕಾರವು ಹೊರಡಿಸಿರುವ ಆದೇಶದಂತೆ ವಾರ್ಷಿಕ ವೇತನ ಬಡ್ತಿಗೆ ಒಂದು ದಿನದ ಹಿಂದೆ ನಿವೃತ್ತರಾಗುವ ರಾಜ್ಯ ಸರ್ಕಾರ ನೌಕರರಿಗೆ ಪಿಂಚಣಿ ನಿಗದಿಪಡಿಸುವ ಉದ್ದೇಶಕ್ಕಾಗಿ ಕಾಲ್ಪನಿಕ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶಿಸುವಂತೆ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಮನವಿ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯಗಳ ಅನುದಾನದ ಬಗ್ಗೆ ಕೆಲವರಿಂದ ಗೊಂದಲ

ಮೈಸೂರು,ಜೂ.3(ಎಂಟಿವೈ)–ಮೈಸೂರಿನ ಗಾಂಧಿನಗರ ಸಮಗ್ರ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯ ಕೋಟ್ಯಾಂತರ ರೂ. ಅನುದಾನ ನೀಡಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧ ಪಡೆದವರು, ಕೆಲ ಸಂಘಟನೆಗಳ ಹೆಸರು ಹೇಳಿಕೊಂಡು ಅಭಿವೃದ್ಧಿ ಯೋಜನೆಯ ಶ್ರೇಯಸ್ಸು ಪಡೆಯಲು ಯತ್ನಿಸುತ್ತಿದ್ದಾರೆ ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಂಧಿನಗರ ಬಡಾವಣೆಯ ಗರಡಿಗಳು, ಆಸ್ಪತ್ರೆ ಕಟ್ಟಡ, ಗ್ರಂಥಾಲಯ ನಿರ್ಮಾಣಕ್ಕೆ ರಾಜ್ಯ ಸರ್ಕಾರ 2.80 ಕೋಟಿ ರೂ. ಅನುದಾನ ನೀಡಿದೆ. ಶಾಸಕ ತನ್ವಿರ್ ಸೇಠ್ ಅವರೇ 1.25 ಕೋಟಿ ಅನುದಾನ ನೀಡಿದ್ದಾರೆ. ಈ ಅನುದಾನ ಬಿಡುಗಡೆ ಆಗಲು ಕಾಂಗ್ರೆಸ್ ವಕ್ತಾರರು, ಕಾರ್ಯಕರ್ತರು ಶ್ರಮಿಸಿದ್ದಾರೆ. ಆದ್ದರಿಂದ ಅಭಿವೃದ್ಧಿ ಕಾಮಗಾರಿಗಳ ಶ್ರೇಯಸ್ಸು ಪಕ್ಷದ ಕಾರ್ಯಕರ್ತರಿಗೆ ಸಲ್ಲುತ್ತದೆ ಎಂದು ಸ್ಪಷ್ಟಪಡಿಸಿದರು. ಕೆಲವು ಅನಾಮಧೇಯ ವ್ಯಕ್ತಿಗಳು ವಿವಿಧ ಸಂಘಟನೆಗಳ ಹೆಸರಲ್ಲಿ ಸಭೆ ನಡೆಸುವ ಮೂಲಕ ಈಗಾಗಲೇ ಸಿದ್ಧಗೊಂಡಿರುವ ಕಾಮಗಾರಿಗಳ ಅನುದಾನದ ವಿಷಯದಲ್ಲಿ ಮೂಗು ತೂರಿಸುತ್ತಿದ್ದಾರೆ. ನಾವೇ ಅನುದಾನ ಕೊಡಿಸಿದ್ದು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಇದು ಸರಿಯಾದ ನಡುವಳಿಕೆಯಲ್ಲ ಎಂದರು. ಗೋಷ್ಠಿಯಲ್ಲಿ ಮುಖಂಡರಾದ ಉದಯ್‌ಕುಮಾರ್, ನಾಗರಾಜು, ಮೋಹನ್, ಕುಮಾರ್ ಇದ್ದರು.

ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ

ಇಂದಿನಿಂದ ಜೂ.8ರವರೆಗೆ ತುಂತುರು ಮಳೆ ಸಾಧ್ಯತೆ

ಮೈಸೂರು,ಜೂ.3(ಪಿಎಂ)–ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜೂ.4ರಿಂದ 8ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಂಭವವಿದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಮೈಸೂರು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 25ರಿಂದ 27 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.90ರಿಂದ 93ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.80ರಿಂದ 83ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 8ರಿಂದ 14 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.88ರಿಂದ 89ರವರೆಗೆ, ಮಧ್ಯಾಹ್ನದ ತೇವಾಂಶ ಶೇ.80ರಿಂದ 84ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 8ರಿಂದ 12 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಕೊಡಗು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 24ರಿಂದ 25 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.94ರಿಂದ 95ರವರೆಗೆ, ಮಧ್ಯಾಹ್ನದ ತೇವಾಂಶ ಶೇ.83ರಿಂದ 86ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 6ರಿಂದ 12 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 27ರಿಂದ 28 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶವು ಶೇ.84ರಿಂದ 87ರವರೆಗೆ, ಮಧ್ಯಾಹ್ನದ ತೇವಾಂಶ ಶೇ.80ರಿಂದ 83ರವರೆಗೆ ದಾಖಲಾಗುವ ಹಾಗೂ ಗಾಳಿಯು ಗಂಟೆಗೆ 8ರಿಂದ 12 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಪೊಲೀಸ್ ಠಾಣೆ ಬಳಿಯೇ ಪತ್ನಿಯ ಕೊಚ್ಚಿ ಕೊಂದ ಪತಿ

■ ಪತಿ–ಪತ್ನಿ ವ್ಯಾಜ್ಯ ತನಿಖೆ ನಡೆಸಿದ ಪೊಲೀಸರು ■ ಪತಿಯಿಂದ ಕೊಲೆ ಬೆದರಿಕೆ ಇದ್ದ ಮಹಿಳೆಯ ಏಕಾಂಗಿಯಾಗಿ ಸಾಂತ್ವನ ಕೇಂದ್ರಕ್ಕೆ ಕಳಿಸಿದರು ■ ಕಾದು ಕುಳಿತಿದ್ದ ಪತಿ ಕುಡುಗೋಲಿನಿಂದ ಕೊಚ್ಚಿ ಪತ್ನಿ ಕೊಂದು ಪರಾರಿ

ಚಾಮರಾಜನಗರ,ಜೂ.3–ಪೊಲೀಸರ ನಿರ್ಲಕ್ಷ್ಯದಿಂದ ಮಹಿಳೆಯೊಬ್ಬರು ತನ್ನ ಪತಿಯಿಂದಲೇ ಬರ್ಬರವಾಗಿ ಹತ್ಯೆಗೀಡಾಗಿದ್ದಾರೆ ಎಂದು ದೂರಲಾಗಿದೆ. ಈ ಘೋರ ಘಟನೆ ಚಾಮರಾಜನಗರದಲ್ಲಿ ಮಂಗಳವಾರ ನಡೆದಿದೆ.

ನಗರದ ಸೋಮವಾರಪೇಟೆ ನಿವಾಸಿ ವಿದ್ಯಾ ಕೊಲೆಯಾದ ದುರ್ದೈವಿ. ಕೌಟುಂಬಿಕ ಕಲಹ ಮತ್ತು ವಿವಾಹೇತರ ಸಂಬಂಧದ ಶಂಕೆ ಹಿನ್ನೆಲೆಯಲ್ಲಿ ಈಕೆಯ ಪತಿ ಗಿರೀಶ್ ಹಾಡುಹಗಲೇ ಕುಡುಗೋಲಿನಿಂದ ಹಲ್ಲೆ ಮಾಡಿ ಬರ್ಬರವಾಗಿ ಹತ್ಯೆ ಮಾಡಿ, ಪರಾರಿಯಾಗಿದ್ದಾನೆ. ಪಟ್ಟಣ ಪೊಲೀಸ್ ಠಾಣೆ ಬಳಿಯೇ ಈ ಭಯಾನಕ ಘಟನೆ ನಡೆದಿದ್ದು, ಇಡೀ ನಗರವೇ ಬೆಚ್ಚಿಬಿದ್ದಿದೆ.

ಒಂಟಿಯಾಗಿ ಕಳುಹಿಸಿದ್ದರು: ಮಹಿಳಾ ಸಾಂತ್ವನ ಕೇಂದ್ರದಲ್ಲಿದ್ದರೂ ವಿದ್ಯಾಳಿಗೆ ತೊಂದರೆ ನೀಡುತ್ತಿದ್ದ ಪತಿ ಗಿರೀಶನಿಗೆ ಬುದ್ಧಿವಾದ ಹೇಳಿದ ಪೊಲೀಸರು, ಸ್ವಲ್ಪ ಬುದ್ಧಿ ಬಳಸಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ವಿದ್ಯಾ ಹಾಗೂ ಗಿರೀಶ್‌ನನ್ನು ಠಾಣೆಗೆ ಕರೆಸಿ, ಕೌಟುಂಬಿಕ ಸಮಸ್ಯೆಯನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಪೊಲೀಸರು ತಿಳಿಹೇಳಿದ್ದರು. ಗಿರೀಶ್ ಠಾಣೆಯಿಂದ ತೆರಳಿದ ಬಳಿಕ ವಿದ್ಯಾಳನ್ನೂ ಸಾಂತ್ವನ ಕೇಂದ್ರಕ್ಕೆ ಒಂಟಿಯಾಗಿ ಕಳುಹಿಸಿದರು. ಮೊದಲೇ ಪತಿ ಕೊಲೆ ಬೆದರಿಕೆ ಹಾಕಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಮಹಿಳಾ ಸಿಬ್ಬಂದಿಯನ್ನು ಜೊತೆಯಲ್ಲಿ ಕಳುಹಿಸಬೇಕಿತ್ತು. ಇಲ್ಲವೇ ಮೊದಲು ವಿದ್ಯಾಳನ್ನು ಕಳುಹಿಸಿ, ಆಕೆ ಸಾಂತ್ವನ ಕೇಂದ್ರ ತಲುಪಿದ ನಂತರ ಗಿರೀಶ್‌ನನ್ನು ಕಳುಹಿಸಬಹುದಿತ್ತು. ಆದರೆ ಪೊಲೀಸರು ಹಿಂದೆ ಮುಂದೆ ಯೋಚಿಸದೆ ಇದ್ದುದರಿಂದ ವಿದ್ಯಾ ಬಲಿಯಾಗಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಪ್ರಕರಣದ ವಿವರ: ಮೂಲತಃ ಕರಿನಂಜಪುರದ ವಿದ್ಯಾ, ಕೆಲ ವರ್ಷಗಳ ಹಿಂದೆ ಸೋಮವಾರಪೇಟೆ ನಿವಾಸಿ ಗಿರೀಶ್‌ನೊಂದಿಗೆ ವಿವಾಹವಾಗಿದ್ದರು. ದಂಪತಿಗೆ ಗಂಡು ಹಾಗೂ ಹೆಣ್ಣು ಮಗುವಿದ್ದು, ಇತ್ತೀಚೆಗೆ ಇಬ್ಬರ ನಡುವೆ ಮನಃಸ್ತಾಪ ಉಂಟಾಗಿತ್ತು. ಮನೆಯಲ್ಲಿ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ವಿದ್ಯಾ ಪರ




ಮೃತಪಟ್ಟ ವಿದ್ಯಾ ಆರೋಪಿ ಗಿರೀಶ್

ಪುರುಷನೊಂದಿಗೆ ಸಂಬಂಧ ಹೊಂದಿದ್ದಾಳೆಂದು ಗಿರೀಶ ಶಂಕಿಸಿದ್ದ. ಮೂರು ತಿಂಗಳ ಹಿಂದೆ ವಿದ್ಯಾ ಕುಟುಂಬ ತೊರೆದು ಪ್ರಿಯಕರ ದೊಡ್ಡ ಭೂವಳ್ಳಿಯ ಶ್ರೀನಾಥ್‌ನೊಂದಿಗೆ ಹೋಗಿದ್ದಳೆನ್ನಲಾಗಿದೆ. ಇತ್ತ ಗಿರೀಶ್ ತನ್ನ ಪತ್ನಿ, ವಿದ್ಯಾ ಕಾಣೆಯಾಗಿದ್ದಾಳೆ ಎಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ. ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ವಿದ್ಯಾಳನ್ನು ಕೊಯಮತ್ತೂರಿನಲ್ಲಿ ಪತ್ತೆಹಚ್ಚಿ ಕರೆತಂದಿದ್ದರು. ನಾಪತ್ತೆ ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ವೇಳೆ ವಿದ್ಯಾ, ತಾನು ಗಂಡನ ಮನೆಗೂ ಹೋಗುವುದಿಲ್ಲ, ತವರಿಗೂ ಹೋಗುವುದಿಲ್ಲ ಎಂದಿದ್ದರಿಂದ ಆಕೆಯನ್ನು ಪೊಲೀಸರು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದರು. ಪತ್ನಿ ಮನೆಬಿಟ್ಟು ಹೋಗಿದ್ದಕ್ಕೆ ಆಕ್ರೋಶಗೊಂಡಿದ್ದ ಗಿರೀಶ್, ಆಗಾಗ್ಗೆ ಸಾಂತ್ವನ ಕೇಂದ್ರಕ್ಕೂ ಹೋಗಿ ಗಲಾಟೆ ಮಾಡುತ್ತಿದ್ದ. ಇದರಿಂದ ರೋಸಿಹೋಗಿದ್ದ ವಿದ್ಯಾ, ಪತಿ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಳು. ಆದ್ದರಿಂದ ಪೊಲೀಸರು ಇಂದು ಇಬ್ಬರನ್ನು ಠಾಣೆಗೆ ಕರೆಸಿ ಬುದ್ಧಿವಾದ ಹೇಳಿದ್ದರು. ಪತಿ ಜೊತೆ ಜೀವನ ನಡೆಸಲು ಸಾಧ್ಯವಿಲ್ಲ ಎಂದಿದ್ದರಿಂದ ಪೊಲೀಸರು, ನಿಮ್ಮ ಸಮಸ್ಯೆಯನ್ನು ಕೌಟುಂಬಿಕ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದರು. ಅಲ್ಲಿಯವರೆಗೆ ವಿದ್ಯಾಗೆ ಯಾವುದೇ ರೀತಿಯಲ್ಲೂ ತೊಂದರೆ ಕೊಡದಂತೆ ಗಿರೀಶ್‌ಗೆ ಎಚ್ಚರಿಕೆ ನೀಡಿ, ಕಳುಹಿಸಿದರು. ಕೆಲ ಹೊತ್ತಿನ ಬಳಿಕ ಮತ್ತೆ ಏನಾದರೂ ಸಮಸ್ಯೆಯಾದರೆ ಮಾಹಿತಿ ನೀಡುವಂತೆ ವಿದ್ಯಾಳಿಗೆ ತಿಳಿಸಿ, ಸಾಂತ್ವನ ಕೇಂದ್ರಕ್ಕೆ ಹೋಗುವಂತೆ ಆಕೆ ಒಬ್ಬಳ್ಳನ್ನೇ ಕಳುಹಿಸಿದರು.

ಹೊಂಚು ಹಾಕಿ ಹತ್ಯೆ: ಹಲವು ಬಾರಿ ವಿದ್ಯಾಳಿಗೆ ಕೊಲೆ ಬೆದರಿಕೆ ಹಾಕಿದ್ದ ಗಿರೀಶ, ಇಂದು ಹೊಂಚು ಹಾಕಿ ಕೊಲೆ ಮಾಡಿದ್ದಾನೆ. ಪೂರ್ವನಿಯೋಜಿತವಾಗಿ ಕುಡುಗೋಲು ತಂದಿದ್ದ ಆತ, ಪತ್ನಿ ಠಾಣೆಯಿಂದ ಒಂಟಿಯಾಗಿ ಹೊರ ಬರುವುದನ್ನು ಗಮನಿಸಿ ಏಕಾಏಕಿ ದಾಳಿ ನಡೆಸಿ, ಮನಸೋ ಇಚ್ಛೆ ಹಲ್ಲೆ ನಡೆಸಿದ್ದಾನೆ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿದ್ದ ವಿದ್ಯಾ, ರಕ್ತದ ಮಡುವಿನಲ್ಲಿ ಬಿದ್ದು ಸಾವನ್ನಪ್ಪಿದ್ದಾಳೆ. ಪೊಲೀಸ್ ಠಾಣೆ ಸಮೀಪವೇ ಬರ್ಬರ ಹತ್ಯೆ ಕಂಡು ಸಾರ್ವಜನಿಕರು ಬೆಚ್ಚಿಬಿದ್ದಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತಲೆಮರೆಸಿಕೊಂಡಿರುವ ಆರೋಪಿ ಗಿರೀಶ್ ಬಂಧನಕ್ಕೆ ಮುಂದಾಗಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೆಟ್ರೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಿಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಜಿನ್ನ್ (ತ)	4 ಪ್ರದರ್ಶನಗಳು
ಸಂಗಂ	
ಮಂಡ್ಯ (ಕ)	4 ಪ್ರದರ್ಶನಗಳು
ಲಿಡೋ	
ಠಾಣೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

2ನೇ ದಿನ, ಬುಧವಾರ, 4–6–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಕೋಲಾರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಸೈಗಾನ್ 2. ಆಶೀರ್ವಾದ್ 3. ಸಪಿಯಂಟ್

II. ನಾಗಮಂಗಲ ಪ್ಲೇಟ್ ಡಿII–1400 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ರೆಡ್ ಫಾಲ್ಕನ್ 2. ಔರ್ಲಿ 3. ನ್ಯಾಚುರಲ್ ಟೊರ್‌ನಾಡೊ

III ಬಲಮುರಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ಐ ದಿ ಮೈಂಡ್ 2. ಡಿ ಅಡ್ಮಿರಲ್ 3. ವಾರಿಯರ್ ವುಮನ್

IV. ಪ್ರಿನ್ಸ್ ರೀಜೆಂಟ್ ಪ್ಲೇಟ್ –1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಕ್ಲೌಡಿ ಹಿಲ್ಸ್ 2. ಅರಿಕಟ್ಟು 3. ನಾಟಿ ಇನ್ ಬ್ಲೂ

V. ಸ್ಟಾರ್ ಸುಪ್ರೀಮ್ ಟ್ರೋಫಿ–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಆಲ್ಡ್ ಗೇಟ್ 2. ಸ್ಟಾರ್ ಗ್ಲೋರಿ 3. ಟ್ರಾಂಕ್ವಿಸರ್

VI. ನಾಗಮಂಗಲ ಪ್ಲೇಟ್ ಡಿI–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸ್ವಾಗತಂ 2. ಸರ್ ಕ್ಯಾಲಿಕಸ್ 3. ಓನ್ ಡೈಮಂಡ್

VII. ರೆಡ್ ಸಾಟಿನ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಪ್ಯೂರ್ ಫಾರ್ ಶ್ಯೂರ್ 2. ಶೀಬಾ 3. ಮ್ಯಾಜಿಕಲ್ ಬೇ


ದಿನದ ಅತ್ಯುತ್ತಮ :	ಪ್ಯೂರ್ ಫಾರ್ ಶ್ಯೂರ್
ಡಬ್ಬಲ್ :	ಆಲ್ಡ್ ಗೇಟ್, ಸ್ವಾಗತಂ
ಜಾಕ್‌ಪಾಟ್ :	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್ :	4, 5, 6 ಮತ್ತು 7
I ಟ್ರಿಬಲ್ :	2, 3 ಮತ್ತು 4
II ಟ್ರಿಬಲ್ :	5, 6, ಮತ್ತು 7
ಎಕ್ಸ್‌ಆಕ್ಟ್ :	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ವಿಶ್ವ ಪರಿಸರ ದಿನಾಚರಣೆ: ಉಚಿತ ಔಷಧ ಸಸ್ಯಗಳ ವಿತರಣೆ

ಮೈಸೂರು, ಜೂ.3– ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ದ್ರವ್ಯಗುಣ ವಿಭಾಗದಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಉಚಿತ ಔಷಧ ಸಸ್ಯಗಳ ವಿತರಣಾ ಕಾರ್ಯಕ್ರಮವನ್ನು ಜೂ.5ರಂದು ಬೆಳಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮವನ್ನು ಬೆಳಗ್ಗೆ 10.30 ಗಂಟೆಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಕರ್ನಾಟಕ ಪೊಲೀಸ್ ಅಕಾಡೆಮಿಯ ಸಹಾಯಕ ನಿರ್ದೇಶಕರಾದ ಟಿ.ಕುಮಾರ್ ಅವರು ಉದ್ಘಾಟಣೆ ಮಾಡಲಿದ್ದು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಗೌರವ ಅತಿಥಿಗಳಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ನಿವೃತ್ತ ಪ್ರಾಚಾರ್ಯರಾದ ಡಾ.ಸತ್ಯನಾರಾಯಣ ಭಟ್ ಭಾಗವಹಿಸಲಿದ್ದಾರೆ.

1ನೇ ವರ್ಷದ ಪುಣ್ಯಸ್ಮರಣೆ



ಹರೀಶ ಎಂ. ಮೇಸ್ತ್ರಿ
ಭೈರಾಪುರ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರು ನಿಮ್ಮ ನೆನಪು ಸದಾ ಹಸಿರಾಗಿದೆ.
ದುಃಖಿತಪ್ತರು: ತಾಯಿ–ಕಲ್ಯಾಣಮ್ಮ, ಪತ್ನಿ–ಜ್ಯೋತಿ, ಮಕ್ಕಳು–ಪೂರ್ಣ, ದೀಪಿಕಾ, ಅಕ್ಕ–ಬಾಬೆ, ತಮ್ಮ–ಯೋಗೇಶ್

ಹಾಲು ತುಪ್ಪ ಮತ್ತು ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಕೆ.ವಿಷಕಂಠ, ಒಂಟಿಕೊಪ್ಪಲ್
(ಲೇ.ಪುಟ್ಟಮ್ಮ, ಲೇ. ಕಪನಯ್ಯ ಇವರ ಪುತ್ರ)
ನಂ.2558, 4ನೇ ಮುಖ್ಯ ರಸ್ತೆ, 3ನೇ ತಿರುವು, ವಿವಿ ಮೊಹಲ್ಲಾ, ಮೈಸೂರು

ಇವರು ದಿ. 31–05–2025 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಹಾಲುತುಪ್ಪ ಮತ್ತು ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 04–06–2025 ಬುಧವಾರ ಬೆಳಿಗ್ಗೆ 10 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಶ್ರೀಮತಿ ಲಲಿತಾ, ಮಕ್ಕಳಾದ ಮಂಜು, ಭವ್ಯ, ಸಹೋದರರಾದ ಕೆ.ಮಹದೇವ್, ಪೈ.ಚಿಕ್ಕಪುಟ್ಟಿ, ಕೆ.ಮಾದೇಶ್ ಮತ್ತು ಕುಟುಂಬ ವರ್ಗದವರು.

ಹಸಿರು ನಮ್ಮ ಉಸಿರು

ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಮೈಸೂರು
ಅರಣ್ಯ ಭವನ, ಅಶೋಕಪುರಂ, ಮೈಸೂರು –570008
ಫ್ಯಾಕ್ಸ್ ಸಂಖ್ಯೆ: 0821–2484606 ಇ–ಮೇಲ್ :dcfsfmys@yahoo.com
ಸಂಖ್ಯೆ–ಎ3/ನರೇಗಾ/ಮ–ನರೇಗಾ/ಟೆಂಡರ್/ಸಿ.ಆರ್–02/2025–26
ದಿನಾಂಕ: 30.05.2025

ಇ–ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ ನೆಡುತೋಪು ಬೆಳೆಸುವ ಅರಣ್ಯೀಕರಣ ಕಾಮಗಾರಿಗಳ ಸಂಬಂಧ ಮೊದಲನೇ ಕರೆಯಲ್ಲಿ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ಎಲ್ಲಾ ವಲಯಗಳಿಗೆ 2025–26ನೇ ಸಾಲಿಗೆ ನರೇಗಾ (MGNREGA) ಯೋಜನೆಯಡಿ ಜೂನ್–2025ರ ಅವಧಿಯಲ್ಲಿ ಬೆಳೆಸುವ ರಸ್ತೆಬದಿ ಮತ್ತು ಬ್ಲಾಕ್ ನೆಡುತೋಪುಗಳ ಗಿಡಗಳಿಗೆ ಬೇಕಾದ ಆಧಾರದ ಕಡ್ಡಿ (Stakes)ಗಳನ್ನು ಸರಬರಾಜು ಮಾಡಲು ಇಚ್ಛೆಯುಳ್ಳ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ ಕಡ್ಡಿಗಳನ್ನು ನೆಡುತೋಪಿನ ಸ್ಥಳಕ್ಕೆ ಸರಬರಾಜು ಮಾಡಿ ಅನುಭವವುಳ್ಳ ಬಿಡ್ಡುದಾರರಿಗೆ ಈ ಪ್ರಕಟಣೆಯ ಕಡೆಗೆ ಈ ಮೂಲಕ ಗಮನ ಸೆಳೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ಡುದಾರರು ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ನರೇಗಾ ಯೋಜನೆಯ ವೆಂಡರ್ ಆಗಿ ನೊಂದಾಯಿತನಾಗಿರುವ ಬಿಡ್ಡುದಾರನಿಂದ ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿದಾರರು ಟೆಂಡರ್ ಫಾರಂನ್ನು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ಇಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ.ಎಂ.ಡಿ.ಮೊತ್ತ ರೂ.73,920/– ಟೆಂಡರ್ ಸಲ್ಲಿಸುವ ಕಡೆಯ ದಿ: 09.06.2025 & 4.00 P.M. ತಾಂತ್ರಿಕ ಬಿಡ್ ತೆರೆಯುವ ದಿ: 12.06.2025 & 11.00 A.M ಆರ್ಥಿಕ ಬಿಡ್ ತೆರೆಯುವ ದಿ: 13.06.2025 & 4.00 P.M. ಎರಡನೇ ಕರೆಯ (Autorecall) ಕಡೆಯ ದಿನಾಂಕ & ಸಮಯ: 16.06.2025 & 4.00 P.M. ಎರಡನೇ ಕರೆಯ (Autorecall) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 17.06.2025 & 4.00 P.M. ಎರಡನೇ ಕರೆಯ (Autorecall) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 18.06.2025 & 4.00 P.M.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಮೈಸೂರು

DIPR/DDMYS/390/KSMCA/246/2025-26

ಕಾಣೆಯಾಗಿದ್ದಾರೆ



ಅಜಿತ್ ಎಲ್.

ಸುಮಾರು 13–14 ವರ್ಷದ ಇವರು ದಿನಾಂಕ: 1–06–2025 ರಂದು ಮೈಸೂರಿನ ವಿಜಯನಗರ 4ನೇ ಹಂತ, 1ನೇ ಫ್ಲಾಟ್, ನಂಬರ್.262 ಮನೆಯಿಂದ ಹೊರಟವರು ಕಾಣೆಯಾಗಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಹತ್ತಿರದ ಪೋಲೀಸ್ ಠಾಣೆ ಅಥವಾ ಮೊ: 8431936215 ಸಂಪರ್ಕಿಸಬೇಕಾಗಿ ವಿನಂತಿ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

PUBLIC NOTICE

Notice is hereby given that **SMT. VEENA KAMATH K.**, wife of Sri Anantha Kamath K. and **SRI AJITH KAMATH K.**, son of Sri Ananth Kamath, is desirous to sell the under mentioned property to my client/s and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 7 (Seven) days** from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Dry Agricultural Land bearing following Survey Numbers, Extents and Boundaries, situated at Nandigunda Village, Chikkaiahnachatra Hobli, Nanjangud Taluk.

Survey No.	Extent		Boundaries			
	A	G	East	West	North	South
14/2	0	17	Survey No.14/1	Survey No.14/3 and 14/9	Road	Survey No. 14/6 and 14/9
14/9	0	5	Survey No.14/2	Survey No.14/4	Survey No. 14/2 and 14/3	Survey No.14/10
14/6	0	10	Survey No.14/1	Survey No.14/10	Survey No. 14/2	Nala
14/10	0	8	Survey No.14/6	Survey No.14/7	Survey No.14/9	Nala
Total	1	00				

Date: 03.06.2025
Place: Mysore

Sd/- Dhirendra Kumar R. Mehta, Advocate
KEY-ANS LAW SOLUTIONS